ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 5 | ಜನವರಿ 27–ಫೆಬ್ರವರಿ 2, 2020 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com



ಹಿಂದೂ ರಾಷ್ಟ್ರದ ಹುನ್ನಾರ – ಯೆಚುರಿ



ಸೇನಾಪಡೆಯನ್ನು ರಾಜಕೀಯಕರಣಗೊಳಿಸಬೇಡಿ – ಪ್ರಕಾಶ್ ಕಾರಟ್

2020ರ ಕುಬೇರರು







ಸ್ಫೋಟಕವಿಟ್ಟವನು ಮಾನಸಿಕ ಅಸ್ವಸ್ಥನಲ್ಲ

“ಎನ್‌ಪಿಆರ್ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ- ಎನ್‌ಆರ್‌ಸಿಗೆ ಕಾಗದಪತ್ರ ತೋರಿಸುವುದಿಲ್ಲ”
ಮಾರ್ಚ್ 23ರ ಹುತಾತ್ಮ ದಿನದ ವರೆಗೆ ಮನೆ-ಮನೆ ಪ್ರಚಾರಾಂದೋಲನ-ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ಗಣತಿಗಾರರು ಮನೆಗೆ ಬಂದಾಗ ಜನಗಣತಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಬೇಕು, ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (ಎನ್‌ಪಿಆರ್)ನ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲೆಂದು ಹೇಳಬೇಕು ಎಂದು ಸಿಪಿಐ(ಎಂ)ನ ಕೇಂದ್ರ ಸಮಿತಿ ದೇಶಬಾಂಧವರಿಗೆ ಕರೆ ನೀಡಿದೆ.

ಸಿಎಎ/ ಎನ್‌ಪಿಆರ್/ಎನ್‌ಆರ್‌ಸಿ ವಿರುದ್ಧ ಪ್ರತಿಭಟನೆಗಳಿಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಈ ಕುರಿತ ಎಲ್ಲ ಜಂಟಿ ಪ್ರತಿಭಟನಾ ಕರೆಗಳಲ್ಲಿ ಮತ್ತು ಸಂವಿಧಾನವನ್ನು ರಕ್ಷಿಸಿಕೊಳ್ಳುವ ಎಲ್ಲ ಕರೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ಕೇರಳದ ತಿರುವನಂತಪುರದಲ್ಲಿ ನವಂಬರ್ 17ರಿಂದ 19ರ ವರೆಗೆ ನಡೆದ ಸಭೆಯ ನಂತರ ನೀಡಿರುವ ಹೇಳಿಕೆಯಲ್ಲಿ ತಿಳಿಸಿದೆ.

ಕೇರಳ ಮತ್ತು ಪಂಜಾಬಿನ ರಾಜ್ಯ ಸರಕಾರಗಳು ಮಾಡಿರುವಂತೆ ಎನ್‌ಆರ್‌ಸಿಯನ್ನು ವಿರೋಧಿಸಿರುವ ಎಲ್ಲ ಮುಖ್ಯಮಂತ್ರಿಗಳು ಎನ್‌ಪಿಆರ್‌ನ್ನು ಕೂಡ ನಿಲ್ಲಿಸಬೇಕು ಎಂದು ಕೇಂದ್ರ ಸಮಿತಿ ಕರೆ ನೀಡಿದೆ. ಏಕೆಂದರೆ ಇದು ಎನ್‌ಆರ್‌ಸಿಗೆ ಆಧಾರವಾಗುತ್ತದೆ.

ಎನ್‌ಪಿಆರ್ ಮತ್ತು ಎನ್‌ಆರ್‌ಸಿ ಪರಸ್ಪರ ತಳುಕು ಹಾಕಿಕೊಂಡಿರುವ ಪ್ರಕ್ರಿಯೆಗಳು ಎಂಬುದನ್ನು ಜನಗಳಿಗೆ ವಿವರಿಸಲು ಮತ್ತು ಕೇವಲ ಜನಗಣತಿಯ ಪಶ್ನೆಗಳಿಗೆ ಉತ್ತರ ನೀಡಬೇಕು, ಎನ್‌ಪಿಆರ್ ಪ್ರಶ್ನೆಗಳಿಗೆ ಉತ್ತರ ನೀಡಬಾರದು ಎಂದು ಜನಗಳಿಗೆ ಹೇಳಲು ಮನೆ-ಮನೆ ಪ್ರಚಾರವನ್ನು ನಡೆಸಲಾಗುವುದು, ಮಾರ್ಚ್ 23ರಂದು ನಮ್ಮ ಅಮರ ಹುತಾತ್ಮರಾದ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಹುತಾತ್ಮ ದಿನಾಚರಣೆಯೊಂದಿಗೆ, ಶೋಷಣಾಮುಕ್ತ ಮತ್ತು ಎಲ್ಲರನ್ನೂ ಒಳಗೊಳ್ಳುವ ನವಭಾರತದ ಭಗತ್ ಸಿಂಗ್ ಕಣ್ಣೋಟವನ್ನು ಸಾಕಾರಗೊಳಿಸುವ ಪ್ರಯತ್ನಗಳಲ್ಲಿ ಸೇರಿಕೊಳ್ಳುವ ಪ್ರತಿಜ್ಞೆಯೊಂದಿಗೆ ಈ ಪ್ರಚಾರಾಂದೋಲನ ಸಮಾಪನಗೊಳ್ಳುತ್ತದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಇದರಲ್ಲಿ ಪಕ್ಷದ ನೇತೃತ್ವದಲ್ಲಿರುವ ಎಲ್ಲ ಸಾಮೂಹಿಕ ರಂಗಗಳು ಭಾಗವಹಿಸುತ್ತವೆ, ಮನೆ-ಮನೆ ಪ್ರಚಾರದ ಸಂದರ್ಭದಲ್ಲಿ ನಮ್ಮ ಜನಗಳ ಜೀವನಾಧಾರವನ್ನು ಕುರಿತಾದ ತಕ್ಷಣದ ಪ್ರಶ್ನೆಗಳನ್ನು ಎತ್ತುತ್ತವೆ ಎಂದಿದೆ.

ಜನವರಿ 23, ಜನವರಿ 26 ಮತ್ತು ಜನವರಿ 30ರ ಜಂಟಿ ಕಾರ್ಯಾಚರಣೆಗಳನ್ನು ದೇಶಾದ್ಯಂತ ಸಂಪೂರ್ಣವಾಗಿ ಬೆಂಬಲಿಸಲು ಮತ್ತು ಬಲಿಷ್ಟಗೊಳಿಸಲು ಶ್ರಮಿಸುವುದಾಗಿ ಅದು ಹೇಳಿದೆ.

- **ಜನವರಿ 23** ನೇತಾಜಿ ಸಭಾಷ್ ಚಂದ್ರ ಬೋಸ್ ರವರ ಜನ್ಮದಿನ. ಅವರ ನೇತೃತ್ವದಲ್ಲಿ ಆಝಾದ್ ಹಿಂದ್ ಸೇನೆ(ಐಎನ್‌ಎ) ನೀಡಿದ ‘ಜೈಹಿಂದ್’ ಘೋಷಣೆ ಎಲ್ಲ ಭಾರತೀಯರಿಗೆ ಅಭಿವಂದನೆಯ ಘೋಷ ವಾಕ್ಯವಾಗಿ ಬಿಟ್ಟಿದೆ. ಕೆಂಪುಕೋಟೆಯಲ್ಲಿ ನಡೆದ ಚಾರಿತ್ರಿಕ ಐಎನ್‌ಎ ವಿಚಾರಣೆಯ ವೇಳೆಯಲ್ಲಿ “ಸಹಗಲ್ ಡಿಲ್ಲೋಂ, ಷಾನವಾಜ್” ಎಂಬ ಘೋಷಣೆ ದೇಶಾದ್ಯಂತ ಮೊಳಗಿತು. ಅದು 1945-46ರ ಸಂಕಷ್ಟಮಯ ಸಮಯದಲ್ಲಿ ಭಾರತೀಯ ಜನತೆಯಲ್ಲಿ ಹೊಸ ಹುರುಪನ್ನು ತುಂಬಿ ನಮ್ಮ ಜನಗಳ ಕೋಮು ಐಕ್ಯತೆಯನ್ನು ಬಲಪಡಿಸಿತು.
- **ಜನವರಿ 26** ನಮ್ಮ ಗಣತಂತ್ರ ದಿನ. ಅಂದು ದೇಶಾದ್ಯಂತ ಸಂವಿಧಾನದ ಪೀಠಿಕೆಯನ್ನು ಓದಲಾಗುವುದು ಮತ್ತು ಎಲ್ಲ ವಾಸಸ್ಥಳಗಳಲ್ಲಿ ಸಂವಿಧಾನವನ್ನು ರಕ್ಷಿಸುವ ಪ್ರತಿಜ್ಞೆಯನ್ನು ಕೈಗೊಳ್ಳಲಾಗುವುದು.
- **ಜನವರಿ 30** ಮಹಾತ್ಮ ಗಾಂಧಿ ಹುತಾತ್ಮರಾದ ದಿನ. ಕೋಮು ಸಾಮರಸ್ಯಕ್ಕಾಗಿ ಅವರು ನಡೆಸಿದ ನಿರಂತರ ಪ್ರಚಾರಾಂದೋಲನಗಳನ್ನು ಎತ್ತಿ ತೋರುವ ರೀತಿಯಲ್ಲಿ ಇದನ್ನು ಆಚರಿಸಲಾಗುವುದು.

ಪ್ರಸಕ್ತ ಬೆಳವಣಿಗೆಗಳ ಸಂದರ್ಭದಲ್ಲಿ ಈ ಮೂರು ಮಹತ್ವದ ದಿನಗಳನ್ನು ಸೂಕ್ತ ರೀತಿಯಲ್ಲಿ, ಸ್ವರೂಪದಲ್ಲಿ ಮತ್ತು ಶಾಂತಿಯುತವಾಗಿ ದೇಶಾದ್ಯಂತ ಆಚರಿಸಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಮೂರು ದಿನಗಳ ಕೇಂದ್ರ ಸಮಿತಿಯ ಸಭೆ ಇತರ ಹಲವು ವಿಷಯಗಳನ್ನೂ ಚರ್ಚಿಸಿತು. ಸಭೆಯ ನಂತರ ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ ಹೇಳಿಕೆಯ ಇತರ ಅಂಶಗಳನ್ನು ಈ ಮುಂದೆ ಕೊಡಲಾಗಿದೆ.

ಸಿ.ಎ.ಎ. ರದ್ದಾಗಬೇಕು

ಪೌರತ್ವ ತಿದ್ದುಪಡಿ ಕಾಯ್ದೆ, 2019(ಸಿಎಎ) ವಿರುದ್ಧ ನಡೆಯುತ್ತಿರುವ ದೇಶವ್ಯಾಪಿ ಪ್ರತಿಭಟನೆಗಳ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಹರ್ಷ ವ್ಯಕಪಡಿಸಿದೆ ಮತ್ತು ಅದನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಆಗ್ರಹಿಸಿದೆ. ಸಂವಿಧಾನ ಹಾಗೂ ಜಾತ್ಯತೀತತೆಯ ರಕ್ಷಣೆಗಾಗಿ ಚಳುವಳಿ ಬೆಳೆಯುತ್ತಿರುವುದರ. ಸಿಎಎ ಒಂದು ವ್ಯಕ್ತಿಯ ಮತೀಯ ಸಂಯೋಜನೆಯ ಆಧಾರದಲ್ಲಿ ಪೌರತ್ವ ನೀಡಿಕೆಯನ್ನು ಕಾನೂನುಬದ್ಧಗೊಳಿಸಿರುವುದರಿಂದ ಸಂವಿಧಾನ-ವಿರೋಧಿಯಾಗಿದೆ. ಅದು ಸೇರಿಸುವುದರ ಮೂಲಕ ಸಂವಿಧಾನದಲ್ಲಿ ಪ್ರತಿಷ್ಠಾಪಿತಗೊಂಡಿರುವ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಗಳನ್ನು ಶಿಥಿಲಗೊಳಿಸುತ್ತದೆ.

ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ವಿರುದ್ಧ ಸಾಮೂಹಿಕ ಆಂದೋಲನದಲ್ಲಿ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮತ್ತು ಸಾಮಾನ್ಯ ನಾಗರಿಕರು ಸೇರಿಕೊಂಡು ನಡೆಸುತ್ತಿರುವ ಜನತಾ ಆಂದೋಲನ ಜನಗಳು ನಮ್ಮ ಸಂವಿಧಾನಕ್ಕೆ ಸಿಎಎ ಯಿಂದ ಬೆದರಿಕೆ ಬಂದಿರುವುದನ್ನು ಅರಿತುಕೊಂಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ಕಳೆದ ಸುಮಾರು ಎರಡು ತಿಂಗಳುಗಳಿಂದ ದೇಶದ ವಿವಿಧ ಸ್ಥಳಗಳಲ್ಲಿ ಪ್ರತಿದಿನ ಈ ಪ್ರತಿಭಟನೆಗಳು ಒಂದು ತಿಂಗಳಲ್ಲಿ ದೇಶದ ಎಲ್ಲ ಭಾಗಗಳಲ್ಲೂ ಪ್ರತಿದಿನ ಈ ಪ್ರತಿಭಟನೆಗಳು ನಡೆಯುತ್ತಿವೆ.

ಪೋಲೀಸ್ ಹಿಂಸಾಚಾರ ಮತ್ತು ಪಾಶವೀ ವರ್ತನೆಗಳನ್ನು ಖಂಡಿಸಿ

ಪ್ರತಿಭಟನೆಗಳು ಶಾಂತಿಯುತವಾಗಿವೆ; ಪೋಲೀಸ್ ಹಿಂಸಾಚಾರ ಹರಿಯಬಿಡುತ್ತಿದೆ: ಬಿಜೆಪಿ ಸರಕಾರಗಳು ದೇಶಾದ್ಯಂತ ಶಾಂತಿಯುತ ಪ್ರತಿಭಟನಾಕಾರರ ವಿರುದ್ಧ ಪಾಶವೀ ದಮನವನ್ನು ಹರಿಯ ಬಿಟ್ಟಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ. ಜಾಮಿಯ ಮಿಲಿಯ ವಿಶ್ವವಿದ್ಯಾಲಯದಲ್ಲಿ ಪೋಲೀಸ್ ಅತ್ಯಾಚಾರಗಳು, ಜವಹರಲಾಲ್ ವಿಶ್ವವಿದ್ಯಾಲಯದಲ್ಲಿ ಹೊರಗಿನಿಂದ ಸಶಸ್ತ್ರ ಪುಂಡರು ಪ್ರವೇಶಿಸಿ ರಂಪಾಟ ನಡೆಸಲು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಭೀಷಣ ಹಲ್ಲೆ ನಡೆಸಲು ಅವಕಾಶ ನೀಡಿರುವುದು, ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಮತ್ತು ಇತರೆಡೆಗಳಲ್ಲಿ ಪೋಲಿಸ್ ವಿಧ್ವಂಸಕ ಕೃತ್ಯಗಳು ಮತ್ತು ವಿದ್ಯಾರ್ಥಿಗಳನ್ನು ಗಂಭೀರವಾಗಿ ಗಾಯಗೊಳಿಸಿರುವುದು ಅತ್ಯಂತ ಖಂಡನೀಯ.

ಬಹಳಷ್ಟು ಹಿಂಸಾಚಾರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮತ್ತು ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಪೋಲೀಸ್ ಇರುವ ದಿಲ್ಲಿಯಲ್ಲಿ ನಡೆದಿವೆ. ಸಾವುಗಳು ಸಂಭವಿಸಿರುವ ರಾಜ್ಯಗಳೆಂದರೆ ಉತ್ತರಪ್ರದೇಶ(21), ಅಸ್ಸಾಂ (5) ಮತ್ತು ಕರ್ನಾಟಕ(2)- ಇವೆಲ್ಲ ಬಿಜೆಪಿ ರಾಜ್ಯ ಸರಕಾರಗಳನ್ನು ಹೊಂದಿವೆ.

ಉತ್ತರಪ್ರದೇಶದಲ್ಲಿ ಅತ್ಯಂತ ಪಾಶವೀ ದಮನವನ್ನು ಶಾಂತಿಯುತ ಪ್ರತಿಭಟನಾಕಾರರ ಮೇಲೆ, ನಿರ್ದಿಷ್ಟವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದವರ ಮೇಲೆ ಹರಿಯಬಿಡಲಾಗಿದೆ. ಪೋಲೀಸ್ ಗೋಲೀಬಾರ್, ಮನೆಗಳನ್ನು ಹೊಕ್ಕು ಧಾಂಧಲೆ ನಡೆಸುವುದು, ತಾವು ಮಾಡಿದ ಹಿಂಸಾಚಾರಗಳಿಗೆ ಪ್ರತಿಭಟನಾಕಾರರನ್ನು ದೂರುವುದು ಮತ್ತು ಅವುಗಳ ಆಧಾರದಲ್ಲಿ ಕೇಸುಗಳನ್ನು ಹಾಕುವುದು ಹಾಗೂ ದಂಡಗಳನ್ನು ವಿಧಿಸುವುದು ಭಾರತದಲ್ಲಿ ಬ್ರಿಟಿಶರ ದಮನಕಾರೀ ಆಳ್ವಿಕೆಯನ್ನು ನೆನಪಿಸುತ್ತಿವೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಉತ್ತರಪ್ರದೇಶದ ಮುಖ್ಯಮಂತ್ರಿ ಪ್ರತಿಭಟನಾಕಾರರ ವಿರುದ್ಧ ಪ್ರತೀಕಾರ(ಬದ್ಲಾ)ದ ಕರೆ ನೀಡಿರುವುದನ್ನು ಖಂಡಿಸಿದೆ, ಇದು ಆ ರಾಜ್ಯದಲ್ಲಿ ನಡೆಯುತ್ತಿರುವ ಪೋಲೀಸ್ ದಮನಕ್ಕೆ ಕುಮ್ಮಕ್ಕು ನೀಡಿದೆ ಎಂದು ಹೇಳಿದೆ.

ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ಒಂದು ಪ್ಯಾಕೇಜ್

ವಾಜಪೇಯಿಯವರ ಹಿಂದಿನ ಬಿಜೆಪಿ ಸರಕಾರ 2003ರಲ್ಲಿ ಪಾಸು ಮಾಡಿಸಿದ ತಿದ್ದುಪಡಿಯ ಪ್ರಕಾರ ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್(ಎನ್‌ಪಿಆರ್)ನ್ನು ಕಲೆ ಹಾಕಲಾಗುತ್ತದೆ, ಅದು ಎನ್‌ಆರ್‌ಸಿ(ರಾಷ್ಟ್ರೀಯ ಪೌರರ ರಿಜಿಸ್ಟರ್)ಗೆ ಆಧಾರವಾಗುತ್ತದೆ. ಸರಕಾರದ ಗಜೆಟ್ ಅಧಿಸೂಚನೆ ಎನ್‌ಪಿಆರ್ ಪ್ರಕ್ರಿಯೆ ಎಪ್ರಿಲ್ 1ರಿಂದ ಸಪ್ಟಂಬರ್ 30, 2020ರ ನಡುವೆ ನಡೆಯುತ್ತದೆ ಎಂದು ಹೇಳಿದೆ. ಎನ್‌ಪಿಆರ್ ಮತ್ತು ಅದರ ಆಧಾರದಲ್ಲಿ ಸಿದ್ಧಪಡಿಸುವ ಎನ್‌ಆರ್‌ಸಿ ಬಡಜನಗಳನ್ನು, ಬುಡಕಟ್ಟು ಜನಗಳು, ದಲಿತರು, ನಿರ್ವಸಿತರು, ವಿಕಲಾಂಗರು, ಲಿಂಗಾತೀತರು ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟ ಜನಗಳನ್ನು ಬಾಧಿಸುತ್ತದೆ, ಮತ್ತು ಅಲ್ಪಸಂಖ್ಯಾತ ಸಮುದಾಯದ ಮೇಲೆ ಗುರಿಯಿಟ್ಟಿದೆ. ಈ ಬಹುಪಾಲು ವಿಭಾಗಗಳ ಜನಗಳಿಗೆ ಎನ್‌ಆರ್‌ಸಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಕೇಳುವ ದಸ್ತಾವೇಜುಗಳನ್ನು ಸಲ್ಲಿಸುವುದು ಅಸಾಧ್ಯವೆಂದು ಕಾಣುತ್ತದೆ.

ಗಣತಿಕಾರರು ಮನೆಗೆ ಬಂದಾಗ ಜನಗಳು ಎನ್‌ಪಿಆರ್‌ಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಬಾರದು ಎಂದು ಕೇಂದ್ರ ಸಮಿತಿ ಕರೆ ನೀಡಿದೆ. ಗಣತಿಕಾರರ ಬಳಿ ಎರಡು ಪ್ರಶ್ನಾವಳಿಗಳಿರುತ್ತವೆ, ಒಂದು ಜನಗಣತಿಯದ್ದು, ಇನ್ನೊಂದು ಎನ್‌ಪಿಆರ್ ನದ್ದು. ಜನಗಣಿತೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಬಹುದು, ಆದರೆ ಎನ್‌ಪಿಆರ್‌ಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಬಾರದು. **ಜನಗಣತಿ ಇರಲಿ, ಎನ್‌ಪಿಆರ್ ಬೇಡ.**

ಎನ್‌ಪಿಆರ್-"ನಾವು ಉತ್ತರಿಸುವುದಿಲ್ಲ”
ಎನ್‌ಆರ್‌ಸಿಗೆ ನಮ್ಮ ಉತ್ತರ-
"ನಾವು ಕಾಗದಪತ್ರ ತೋರಿಸುವುದಿಲ್ಲ”

ಪಕ್ಷದ ಎಲ್ಲ ಘಟಕಗಳು ದೇಶಾದ್ಯಂತ ಮನೆಮನೆಗೆ ಹೋಗಿ ಎನ್‌ಪಿಆರ್ ಮತ್ತು ಎನ್‌ಆರ್‌ಸಿ ಪರಸ್ಪರ ಹೇಗೆ ತಳಕು ಹಾಕಿಕೊಂಡಿವೆ ಎಂಬುದನ್ನು ವಿವರಿಸುವ ಮತ್ತು ಎನ್‌ಪಿಆರ್ ಪ್ರಶ್ನೆಗಳಿಗೆ ಉತ್ತರ ನೀಡಬಾರದು ಎಂದು ಕರೆ ನೀಡುವ ಪ್ರಚಾರಾಂದೋಲನವನ್ನು ನಡೆಸಲು ನಿರ್ಧರಿಸಿದೆ.

ಎನ್‌ಆರ್‌ಸಿಯನ್ನು ನಡೆಸುವುದಿಲ್ಲ ಎಂದು ಪ್ರಕಟಿಸಿರುವ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಪ್ರಕ್ರಿಯೆಗೆ ತಡೆ ಹಾಕಬೇಕು ಎಂದು ಕೇಂದ್ರ ಸಮಿತಿ ಅವರುಗಳಿಗೆ ಕರೆ ನೀಡಿದೆ. ಏಕೆಂದರೆ ಎನ್‌ಪಿಆರ್ ಆಧಾರದಲ್ಲಿಯೇ ಎನ್‌ಆರ್‌ಸಿ ಇರುತ್ತದೆ.

ಕೇರಳ ಸರಕಾರ ಈ ವಿಷಯದಲ್ಲಿ ನಿಸ್ಸಂದಿಗ್ಧ ನಿಲುವು ತಳೆದಿರುವುದಕ್ಕಾಗಿ ಕೇಂದ್ರ ಸಮಿತಿ ಅದನ್ನು ಪ್ರಶಂಸಿಸಿದೆ. ಸಿಎಎ ಯನ್ನು ವಿರೋಧಿಸುವ ನಿರ್ಣಯವನ್ನು ಕೇರಳ ವಿಧಾನಸಭೆ ಅಂಗೀಕರಿಸಿರುವುದನ್ನು ಎಲ್ಲ ಬಿಜೆಪಿಯೇತರ ರಾಜ್ಯ ಸರಕಾರಗಳು ಅನುಕರಿಸಬೇಕು ಎಂದು ಅದು ಹೇಳಿದೆ. ಈಗ ಪಂಜಾಬ್ ವಿಧಾನಸಭೆ ಹಾಗೆ ಮಾಡಿದೆ.

ಸ್ಥಾನಬದ್ಧತಾ ಕೇಂದ್ರಗಳು ಬೇಡ

ಸ್ಥಾನಬದ್ಧತೆಯ ಕೇಂದ್ರಗಳನ್ನು ನಿರ್ಮಿಸಬೇಕೆಂದು ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರ ನೀಡಿರುವ ನಿರ್ದೇಶನಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿರುವ ಕೇಂದ್ರ ಸಮಿತಿ ಇಂತಹ ಸ್ಥಾನಭದ್ರತಾ ಕೇಂದ್ರಗಳನ್ನು ನಿರ್ಮಿಸಬಾರದು ಎಂದು ಎಲ್ಲ ರಾಜ್ಯ ಸರಕಾರಗಳಿಗೆ ಕರೆ ನೀಡಿದೆ. ಅಸ್ಸಾಂ ನಲ್ಲಿ ಈಗಿರುವ ಸ್ಥಾನಬದ್ಧತಾ ಕೇಂದ್ರಗಳನ್ನು ಕಳಚಿ ಹಾಕಬೇಕು ಮತ್ತು ಜನಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಜೀವಿಸಲು ಬಿಡಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ರಕ್ಷಣಾ ಸಿಬ್ಬಂದಿ ಮುಖ್ಯಸ್ಥರ ಆಕ್ರೋಶಕಾರೀ ಹೇಳಿಕೆ

ರಕ್ಷಣಾ ಸಿಬ್ಬಂದಿ ಮುಖ್ಯಸ್ಥ(ಸಿಡಿಎಸ್) ಜನರಲ್ ಬಿಪಿನ್ ರಾವತ್‌ರವರ “ಡಿ-ರ್‍ಯಾಡಿಕಲೈಸೇಶನ್’ ಕ್ಯಾಂಪುಗಳ ಹೇಳಿಕೆಯ ಬಗ್ಗೆ ತನ್ನ ತೀವ್ರ ಅಸಮ್ಮತಿಯನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ. ದೇಶದಲ್ಲಿ, ನಿರ್ದಿಷ್ಟವಾಗಿ ಕಾಶ್ಮೀರದಲ್ಲಿ, ಸಣ್ಣ ಮಕ್ಕಳೂ ಸೇರಿದಂತೆ ತೀವ್ರಗಾಮಿಗಳಾಗುತ್ತಿರುವ ಜನಗಳು ಅದನ್ನು ಬಿಡುವಂತೆ ಮಾಡಲು(ಇದನ್ನು ಅವರು ಡಿ-ರ್‍ಯಾಡಿಕಲೈಸೇಶನ್ ಎಂದಿದ್ದಾರೆ) ಶಿಬಿರಗಳ ಅಗತ್ಯವಿದೆ ಎಂದು ಸಿಡಿಎಸ್ ಹೇಳಿದ್ದಾರೆ. ಆಘಾತಕಾರಿ ಸಂಗತಿಯೆಂದರೆ ಇಂತಹ ಶಿಬಿರಗಳು ಆಗಲೇ ಕಾರ್ಯ ನಿರ್ವಹಿಸುತ್ತಿವೆ ಎಂದು ಅವರು ಸೂಚಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಇಂತಹ ಶಿಬಿರಗಳಿವೆಯೇ ಎಂಬುದನ್ನು ಮೋದಿ ಸರಕಾರ ಕೂಡಲೇ ಸ್ಪಷ್ಟಪಡಿಸಬೇಕು ಎಂದು ಕೇಂದ್ರ ಸಮಿತಿ ಹೇಳಿದೆ. ಸಿಡಿಎಸ್ ರವರ ಪ್ರಕಾರ ಅವು ಇವೆ, ಮತ್ತು ಈ ಕ್ಯಾಂಪುಗಳನ್ನು ಸೇನಾಪಡೆ ನಡೆಸುತ್ತಿದೆ.

ಇಂತಹ ಕ್ಯಾಂಪುಗಳನ್ನು ಸೇನೆಯ ಮುತುವರ್ಜಿಯಿಂದ ರಚಿಸಿ ನಡೆಸಲಾಗುತ್ತಿದೆಯೇ ಎಂದು ಸಿಡಿಎಸ್ ರವರು ಸ್ಪಷ್ಟಪಡಿಸಬೇಕು. ಇವು ಸಂಪೂರ್ಣವಾಗಿ ಕಾನೂನುಬಾಹಿರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಜಮ್ಮು ಮತ್ತು ಕಾಶ್ಮೀರ -ಎಲ್ಲ ನಿರ್ಬಂಧಗಳನ್ನು ತೆಗೆಯಬೇಕು

ಜಮ್ಮು ಮತ್ತು ಕಾಶ್ಮೀರ ಭಾರತಕ್ಕೆ **ಪುಟ 7 ಕ್ಕೆ**

ಸಂಪಾದಕೀಯ

ಸ್ಫೋಟಕವಿಟ್ಟವನು ಮಾನಸಿಕ ಅಸ್ವಸ್ಥನೆ?

ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಫೋಟಕವಿಟ್ಟಿದ್ದ ಆರೋಪಿ ಆದಿತ್ಯರಾವ್ ಮಾನಸಿಕ ಅಸ್ವಸ್ಥನಾಗಿದ್ದ ಎಂದು ರಾಜ್ಯ ಗೃಹ ಸಚಿವರು ಬಹಿರಂಗ ಹೇಳಿಕೆ ಕೊಡುವ ಮೂಲಕ ರಾಜ್ಯ ಸರ್ಕಾರ ಆರೋಪಿಯ ರಕ್ಷಣೆಗೆ ಧಾವಿಸಿದಂತೆ ಕಾಣುತ್ತದೆ. ಆರೋಪಿ ವಿದ್ಯಾವಂತನಾಗಿದ್ದು ಸೂಕ್ತ ಕೆಲಸವಿಲ್ಲದೆ ಮಾನಸಿಕವಾಗಿ ಕುಗ್ಗಿ ಹೋಗಿದ್ದ. ಹೀಗಾಗಿ ಇಂತಹ ಕೃತ್ಯ ಮಾಡಿದ್ದಾನೆ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದು ನಿಜವಿದ್ದರೆ, ಬಿಜೆಪಿಗೂ ಆರೋಪಿಗೂ ಯಾವುದೋ ನಿಗೂಢ ನಂಟಿದೆ ಎಂಬ ಅನುಮಾನ ಉಂಟಾಗುತ್ತದೆ.

ಮಂಗಳೂರಿನಲ್ಲಿ ಬಾಂಬ್ ಇಟ್ಟ ಆರೋಪಿ ಮಾನಸಿಕ ಅಸ್ವಸ್ಥನಾಗಿರಲು ಸಾಧ್ಯವಿಲ್ಲ. ಆತ ಮಂಗಳೂರಿನಿಂದ ಬೆಂಗಳೂರಿಗೆ ಬಂದು ತಲೆ ಮರೆಸಿಕೊಳ್ಳಲು ಪ್ರಯತ್ನ ಪಟ್ಟಿದ್ದಾನೆ. ಅಷ್ಟರಲ್ಲಿ ಸಿಸಿ ಕ್ಯಾಮರಾಗಳ ದೃಶ್ಯಾವಳಿ ಬಹಿರಂಗಗೊಂಡು ತಾನು ಸಿಕ್ಕಿ ಬೀಳಬಹುದೆಂಬ ಭಯದಿಂದ ಮತ್ತು ಪೋಲಿಸರು ಬೆನ್ನಟ್ಟಿ ಗುಂಡು ಹೊಡೆಯಬಹುದೆಂಬ ಆತಂಕದಿಂದ ಬೆಂಗಳೂರಿನಲ್ಲಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಶರಣಾಗಿದ್ದಾನೆ. ಆತನ ಈ ನಡುವಳಿಕೆ ಆತ ಬುದ್ಧಿಮಾಂದ್ಯನಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ.

ಶರಣಾಗತನಾದ ಆರೋಪಿ ಆದಿತ್ಯರಾವ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರ. ಬಳಿಕ ಮಣಿಪಾಲದಲ್ಲಿ ಎಂಬಿಎ ಓದಿದ್ದ, ತಂತ್ರಜ್ಞಾನದಲ್ಲಿ ನಿಪುಣ. ಮಂಗಳೂರಿನ ಪ್ರಮುಖ ಹೊಟೇಲ್‌ವೊಂದರಲ್ಲಿ ಬಿಲ್ಲಿಂಗ್ ವಿಭಾಗದಲ್ಲಿ ಕೆಲಸಮಾಡುತ್ತಿದ್ದ. "ಅವನು ಮೆಂಟಲ್ ಆಗಿರಲಿಲ್ಲ. ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ. ಅವನು ಮೆಂಟಲ್ ಆಗಿರುತ್ತಿದ್ದರೆ ಅವನನ್ನು ನಾವು ಕೆಲಸದಲ್ಲಿ ಇಟ್ಕೊಳ್ತಿದ್ದೆವಾ?" ಎಂದು ಹೊಟೇಲ್ ಮಾಲಿಕ ಪ್ರಶ್ನಿಸಿದ್ದಾನೆ.

ಶಂಕಿತ ಆರೋಪಿ ಆದಿತ್ಯರಾವ್ ಮಾನಸಿಕ ಅಸ್ವಸ್ಥನಾಗಿದ್ದ ಎಂದು ಆತನ ಕುಟುಂಬದ ಸದಸ್ಯರ್‍ಯಾರೂ ಹೇಳಿಕೆ ನೀಡಿಲ್ಲ. "ಆತನನ್ನೂ ಸರಿದಾರಿಗೆ ತರಲು ಹಲವು ಬಾರಿ ಯತ್ನಿಸಿದ್ದೆವು" ಎಂದು ಆತನ ಸಹೋದರ ಅಕ್ಷತ್ ರಾವ್ ಸ್ಪಷ್ಟಪಡಿಸಿದ್ದಾರೆ. ಆತ ಈ ಹಿಂದೆ ನಾಲ್ಕೈದು ಬಾರಿ ವಿಮಾನ ಹಾಗೂ ರೈಲು ನಿಲ್ದಾಣಗಳಲ್ಲಿ ಹುಸಿ ಬಾಂಬ್ ಕರೆಗಳ ಮೂಲಕ ಆತಂಕ ಹುಟ್ಟಿಸಿ ಬಂಧನಕ್ಕೆ ಒಳಗಾಗಿದ್ದ. ಇದರಿಂದಾಗಿ ಆತನ ಕುಟುಂಬದವರಿಗೆ ಆತ ತಲೆನೋವಾಗಿ ಪರಿಣಮಿಸಿದ್ದ. ಇಂತಹ ಅಪರಾಧಿ ಹಿನ್ನೆಲೆಯುಳ್ಳ ವ್ಯಕ್ತಿಯನ್ನು ಬೆಂಬಲಿಸಲು ರಾಜ್ಯದ ಗೃಹ ಮಂತ್ರಿ ಮುಂದಾಗಿರುವುದು ಖಂಡನಾರ್ಹವಾಗಿದೆ.


ಆದಿತ್ಯ ರಾವ್ ಅಷ್ಟು ಬೇಗ ಶರಣಾಗತನಾಗಿ ಬಾಂಬ್ ಇಟ್ಟ ಬಗ್ಗೆ ಬಾಯಿಬಿಟ್ಟದ್ದು ಬಿಜೆಪಿಗರನ್ನು ಬೆಚ್ಚಿ ಬೀಳಿಸಿರಬಹುದು. ಬೊಮ್ಮಾಯಿರವರ ಹೇಳಿಕೆಯಿಂದ ಪಕ್ಷಕ್ಕೆ ಆಗಬಹುದಾದ ಹಾನಿಯನ್ನು ಮನಗಂಡು "ಆದಿತ್ಯ ರಾವ್ ಒಬ್ಬ ಭಯೋತ್ಪಾದಕ. ಆತನ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಜರಗಿಸಲಿದೆ ಎಂದು ಸಚಿವ ಕೋಟ ಶ್ರೀನಿವಾಸ್ ಪೂಜಾರಿರವರ ಬಾಯಿಯಿಂದ ಹೇಳಿಕೆಯೊಂದನ್ನು ಹೊರಬೀಳಿಸಿದ್ದಾರೆ. ಅನಂತರ ಬಿಜೆಪಿಯ ಹಿರಿಕಿರಿಯ ನಾಯಕರೆಲ್ಲ ಮೌನ ತಾಳಿದ್ದಾರೆ.

ಮಂಗಳೂರು ಸ್ಫೋಟಕದ ಹಿಂದೆ ಒಂದು ನಿರ್ದಿಷ್ಟ ಉದ್ದೇಶ ಇಲ್ಲದಿರದು. ಸಂಘ ಪರಿವಾರ ಸೃಷ್ಟಿಸಿದ 'ಹಿಂದು ಮುಖಂಡರ ಹತ್ಯೆಗೆ ಕಾರ್ಯತಂತ್ರ' ರಚಿಸಲಾಗುತ್ತಿದೆ. ಎಂಬ ಆಧಾರರಹಿತ ವೃತ್ತಾಂತಕ್ಕೆ ಆಧಾರ ಒದಗಿಸುವ ಯೋಜನೆಗಳಲ್ಲಿ ಇದೂ ಒಂದಾಗಿರಬಹುದು. ಆತ ಗಡ್ಡಧಾರಿಯಾಗಿದ್ದರೆ ನಮ್ಮ ಕೆಲವು ಮಾಧ್ಯಮಗಳು ಅದನ್ನೇ ದಿನಗಟ್ಟಲೆ ಬಿತ್ತರಿಸಿ ಎಲ್ಲರೂ ಮುಸಲ್ಮಾನರ ಮೇಲೆ ತಮ್ಮ ಸಂಶಯವನ್ನು ಗಟ್ಟಿಗೊಳಿಸುವಂತೆ ಮಾಡದಿರುತ್ತಿರಲಿಲ್ಲ. ಆತ ನಾಪತ್ತೆಯಾಗಿದ್ದರಂತೂ ಆತನಿಗೆ ಒಂದು ಮುಸ್ಲಿಂ ಹೆಸರಿನ ನಾಮಕರಣವೇ ಆಗಿಬಿಡುತಿತ್ತು. ಮುಸ್ಲಿಂ ಯುವಕರಲ್ಲಿ ಕೆಲವರು ಹತಾಷರಾಗುತ್ತಿರುವುದು ನಿಜ. ಅವರು ಬಾಂಬ್ ಬಂದೂಕ್‌ಗಳನ್ನು ಎತ್ತಿಕೊಳ್ಳುತ್ತಿರುವುದು ಅಷ್ಟೇ ಸತ್ಯ. ಆದರೆ ಅವರು ಹತಾಷರಾಗಲು ಕಾರಣವೇನು? ಅವರು ದೇಶದ ಸೆಕ್ಯುಲರ್ ಮುಖ್ಯವಾಹಿನಿಯಿಂದ ದೂರ ಸರಿಯುತ್ತಿರುವುದು ಏಕೆ ಎಂಬುದನ್ನು ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ ಪ್ರತಿಪಾದಿಸಿರುವ ಹಿಂದು ಧರ್ಮದಲ್ಲಿ ನಂಬಿಕೆಯಿಟ್ಟವರು ಯೋಚಿಸಬೇಕಾಗಿದೆ.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಸ್ಫೋಟಕ ಇಟ್ಟು ಸ್ಫೋಟಿಸಲು ಪ್ರಯತ್ನ ಪಟ್ಟದ್ದು ಒಬ್ಬ ಮತಾಂಧನ ದುಸ್ಸಾಹಸ ಎಂದು ನಿರ್ಲಕ್ಷಿಸುವಂತಿಲ್ಲ. ಇಂತವರ ಹಿಂದೆ ಭಯೋತ್ಪಾದಕಿ ಪ್ರಜ್ಞಾಸಿಂಗ್ ಅಂತವರ ಪಾತ್ರ ಇದ್ದೇ ಇರುತ್ತದೆ. ಬಹುಸಂಖ್ಯಾತರ ಈ ಕೇಸರಿ ಭಯೋತ್ಪಾದನೆ ಹೆಚ್ಚು ಅಪಾಯಕಾರಿಯಾಗಿದೆ. ಆದಿತ್ಯ ರಾವ್‌ಗೆ ಸಂಘ ಪರಿವಾರದ ಕೇಸರಿ ಭಯೋತ್ಪಾದನೆಯ ಜೊತೆಗಿರುವ ನಂಟೇನು ಎಂಬುದು ಪತ್ತೆಯಾಗಬೇಕು. ಸಂಘ ಪರಿವಾರದ ಖಾಕಿಯೊಂದಿಗೆ ಶಾಮಿಲಾಗಿರುವ ಪೊಲೀಸ್ ಖಾಕಿಗಳು ಸತ್ಯ ಶೋಧನೆಗೆ ಸಹಕರಿಸುವರೆ? ಅಂತಹ ಮುಕ್ತ ತನಿಖೆಗೆ ಮಣ್ಣುಕೊಡುವ ಉದ್ದೇಶದಿಂದಲೇ ಆದಿತ್ಯರಾವ್ ಶರಣಾಗತಿಯ ನಾಟಕವನ್ನು ಹೆಣೆಯಲಾಗಿದೆಯಾ? ಈ ಕರಾಳ ನಾಟಕದಲ್ಲಿ ಮಾಧ್ಯಮದ ಕೆಲವು ಶಕ್ತಿಗಳು, ಪೊಲೀಸ್ ಸಮವಸ್ತ್ರದಲ್ಲಿರುವ ಕೆಲವು ಶಕ್ತಿಗಳು ಮತ್ತು ಸಂಘ ಪರಿವಾರದಲ್ಲಿರುವ ದೇಶದ್ರೋಹಿ ಶಕ್ತಿಗಳು ಒಂದಾಗಿ ಕೆಲಸ ಮಾಡುತ್ತಿದ್ದರೆ ಅದೇನು ಆಶ್ಚರ್ಯಪಡುವ ವಿಷಯವಲ್ಲ. ಈತ ಸ್ಫೋಟಕಗಳನ್ನು ತಯಾರಿಸಲು ಎಲ್ಲಿಂದ ತರಬೇತಿ ಪಡೆದ? ವಿಮಾನ ನಿಲ್ದಾಣದ ಆವರಣದಲ್ಲಿ ಸ್ಫೋಟಕವನ್ನು ಇಡಲು ಈತನಿಗೆ ಹೇಗೆ ಸಾಧ್ಯವಾಯಿತು? ವಿಮಾನ ನಿಲ್ದಾಣದ ಸಿಬ್ಬಂದಿಯೂ ಈತನಿಗೆ ಸಹಕರಿಸಿರಬಹುದೆ?

'ಸ್ವಚ್ಚ ಭಾರತ್' ಎಂಬ ಮೋದಿ ಪ್ರೇರಿತ ಘೋಷಣೆಗೆ ಒಂದು ಕರಾಳ ಆಯಾಮವಿದೆ. 2025 ಕ್ಕೆ ಆರೆಸ್ಸೆಸ್ ವಿಷವೃಕ್ಷಕ್ಕೆ 100 ವರ್ಷಗಳಾಗಲಿವೆ. ಅಷ್ಟೊರೊಳಗೆ ಅವರಿಗೆ ದೇಶವನ್ನು ಹಿಂದುಯೇತರರು ಇಲ್ಲದಂತೆ ಮಾಡಿ ದೇಶವನ್ನು ಸ್ವಚ್ಛಗೊಳಿಸಬೇಕಾಗಿದೆ. ಮನುವಾದವನ್ನು ಒಪ್ಪದಿರುವ ದಲಿತರು, ಆದಿವಾಸಿಗಳು, ಕ್ರೈಸ್ತರು, ಮುಸಲ್ಮಾರು ಮೊದಲಾದವರಿಂದ ದೇಶವನ್ನು ಸ್ವಚ್ಛಮಾಡಿ ಮನುವಾದ ಆಧಾರಿತ ಹಿಂದು ರಾಷ್ಟ್ರವನ್ನು ಕಟ್ಟಬೇಕಾಗಿದೆ. ಅದಕ್ಕಾಗಿ ಸಂಸತ್ತಿನಲ್ಲಿ ದೊರೆತಿರುವ ಬೃಹತ್ ಬಹುಮತವನ್ನು ಬಳಸಿಕೊಳ್ಳುವ ತವಕ. ಅದರ ಭಾಗವಾಗಿ ಸಿಎಎ, ಎನ್‌ಆರ್‌ಸಿ ಹಾಗೂ ಎನ್‌ಪಿಆರ್ ಎಂಬ ಅನಿಷ್ಟ ಕಾಯ್ದೆಗಳನ್ನು ಜಾರಿಮಾಡಲು ಪ್ರಯತ್ನ ನಡೆಯಲಾರಂಭಿಸಿದೆ. ನಾಡಿನ ಜನತೆ ಮಂಗಳೂರು ನಾಟಕದ ಹಿಂದಿನ ಮರ್ಮವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

2020
ರ ಜನವರಿ 26 ಸಂವಿಧಾನದ ಶಪಥ ದಿನವಾಗಿ ಆಚರಿಸಲು ಸಿಪಿಐ(ಎಂ) ಕರೆ ನೀಡಿದೆ. ನಮ್ಮ ಸಂವಿಧಾನದ ಪೀಠಿಕೆಯ ಪಠಣ ಮಾಡಿ ಸಂವಿಧಾನದ ರಕ್ಷಣೆಗಾಗಿ ಹೋರಾಡುವ ಸಂಕಲ್ಪ ಮಾಡೋಣ.


ಭಾರತದ ಸಂವಿಧಾನ

ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ಭಾರತ ಸಂವಿಧಾನದ ಪೀಠಿಕೆ

"ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ,
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ;
ಭಾರತದ ಎಲ್ಲ ನಾಗರಿಕರಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಸಹೋದರ ಭಾವನೆಯನ್ನು ಮೂಡಿಸುವುದಕ್ಕೆ
ದೃಢ ಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ".

ಉಡುಪಿ: ಕಾರ್ಮಿಕ ಚಳವಳಿ ಶತಮಾನೋತ್ಸವ-ಸಿಐಟಿಯು ಸುವರ್ಣ ಮಹೋತ್ಸವ

ದೇಶದ ಕಾರ್ಮಿಕ ಚಳವಳಿಯ ಇತಿಹಾಸದಲ್ಲಿ 2020 ಜನವರಿ 8 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ವಿಶಾಲ ಐಕ್ಯತೆಯ ಕರೆಯ ಮತ್ತೊಂದು ಮಹತ್ತರ ಮೈಲುಗಲ್ಲು - ಮೀನಾಕ್ಷಿ ಸುಂದರಮ



ವರದಿ: ವೆಂಕಟೇಶ ಕೋಣಿ

ಸಿಐಟಿಯು ಸ್ಥಾಪನಾ ಸಮ್ಮೇಳನದ ಘೋಷಣೆ "ಐಕ್ಯತೆ ಮತ್ತು ಹೋರಾಟ". 1970 ರ ದಶಕದಲ್ಲಿ ಎಐಟಿಯುಸಿಯಿಂದ ಪ್ರತ್ಯೇಕವಾಗಿ ದೇಶ ಮಟ್ಟದ ಸಮರಶೀಲ ಕಾರ್ಮಿಕ ಚಳವಳಿಯನ್ನು ಬಲಿಕೊಡುವ ಹುನ್ನಾರಗಳನ್ನು ಹಿಮ್ಮೆಟ್ಟಿಸಲು ಪ್ರಜಾಪ್ರಭುತ್ವ ಮೌಲ್ಯಗಳಿಗಾಗಿ ವರ್ಗ ಹೋರಾಟದ ಸಿದ್ಧಾಂತದ ಕಣ್ಣೋಟವು ಸಿಐಟಿಯು ಸ್ಥಾಪನೆಯ ಐತಿಹಾಸಿಕ ಕಾಲಘಟ್ಟದ ಅನಿವಾರ್ಯವಾಗಿತ್ತು. ಕಾರ್ಮಿಕ ವರ್ಗದ ಹಿತ ರಕ್ಷಣೆಗಾಗಿ ದೇಶದ ಇಡೀ ಕಾರ್ಮಿಕರನ್ನು ವರ್ಗವಾಗಿ ಒಂದುಗೂಡಿಸುವ ದಿಶೆಯಲ್ಲಿ ಕಾರ್ಮಿಕ ಸಂಘಗಳ ಮಹಾ ಒಕ್ಕೂಟವನ್ನು ಸಂಘಟಿಸುವ ಗುರಿಯನ್ನು ಮುಂದಿಟ್ಟುಕೊಂಡು ಕಾರ್ಯ ನಿರ್ವಹಿಸಲು ಕ್ರಾಂತಿಕಾರಿ ನಾಯಕ ಕಾಮ್ರೇಡ್ ಬಿಟಿಆರ್ ಅವರ ನಾಯಕತ್ವದಲ್ಲಿ ದಾಪುಗಾಲು ಹಾಕಲು ಆರಂಭಿಸಿತು ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಮ್ ಹೇಳಿದರು.

ಕಾರ್ಮಿಕ ಚಳವಳಿ ಶತಮಾನೋತ್ಸವ, ಸಿಐಟಿಯು ಸುವರ್ಣ ಮಹೋತ್ಸವದ ಅಂಗವಾಗಿ "ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗ" ಉಡುಪಿ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಸಮಾರಂಭದಲ್ಲಿ ಅವರು ವಿಚಾರ ಮಂಡಿಸಿದರು. ಅವರು ಮುಂದುವರಿದು ಮಾತನಾಡುತ್ತಾ, ಈ ಕಾಲಘಟ್ಟದಲ್ಲಿ ವಿವಿಧ ಕಾರ್ಮಿಕ ಸಂಘಗಳನ್ನು ಒಂದುಗೂಡಿಸಿ ಆಯಾಯ ಕಾಲಾವಧಿಯಲ್ಲಿ ಸರಕಾರಗಳ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಶ್ರಮಿಸಲಾಯಿತು. ಈ ಪ್ರಕ್ರಿಯೆಯಲ್ಲಿ 1978 ರಲ್ಲಿ ವಿಶಾಲವಾದ ಐಕ್ಯತೆಯನ್ನು ರಚಿಸಲು ಸಿಐಟಿಯು ಮುತುವರ್ಜಿ ವಹಿಸಿದ್ದು, 1982 ಜನವರಿ 19 ರಂದು ದೇಶವ್ಯಾಪಿ ಮುಷ್ಕರವು ದೇಶದ ಚರಿತ್ರೆಯಲ್ಲಿ ಹೊಸ ಅಲೆಯ ಚಳವಳಿಯನ್ನು ಹುಟ್ಟು ಹಾಕಿತು. ಈ ಮುಷ್ಕರಕ್ಕೆ ಅಭೂತ ಪೂರ್ವವಾದ ಕಾರ್ಮಿಕರ ಸ್ಪಂದನೆ ದೊರೆಯಿತು ಎಂದು ಹೇಳಿದರು.

1991 ರಿಂದ ರಾಷ್ಟದಲ್ಲಿ ಆರಂಭಿಸಲಾದ ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ನಿರಂತರವಾಗಿ ಇದೀಗ 19 ನೇ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ಜರಗಿದೆ. ಹಿಂದೆಂದಿಗಿಂತ ಈ ಬಾರಿಯ ಮುಷ್ಕರ ಅತ್ಯಂತ ಮಹತ್ವದ್ದಾಗಿದೆ. ಭಾರತದ ದುಡಿಯುವ ಜನತೆಯ ಅಭೂತ ಪೂರ್ವ ಐಕ್ಯತೆಯನ್ನು ಸಾಧಿಸುವ ಹೋರಾಟಗಳನ್ನು ತೀವ್ರಗೊಳಿಸಿ, ಸರ್ಕಾರದ ಬಂಡವಾಳಶಾಹಿ ಪರ ನೀತಿಗಳನ್ನು ಬದಲಾಯಿಸಲು ಮಹಾನ್ ಅಸ್ತ್ರವಾಗಿ ಬಳಸಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟರು.

ದುಡಿಯುವ ಜನತೆಯ ಶೋಷಣೆಯನ್ನು ಇಲ್ಲವಾಗಿಸಲು ಎಲ್ಲಾ ಉತ್ಪಾದನಾ ಸಾಧನಗಳ ಒಡೆತನವನ್ನು ಸಾಮಾಜೀಕರಣಗೊಳಿಸುವ ಮೂಲಕ ಒಂದು ಸಮಾಜವಾದಿ ವ್ಯವಸ್ಥೆ ಸ್ಥಾಪಿಸಬೇಕು. ಸಮಾಜವಾದಿ ಸಿದ್ಧಾಂತವನ್ನಿಟ್ಟುಕೊಂಡು ಸಿಐಟಿಯು ಇಡೀ ಸಮಾಜವನ್ನು ಎಲ್ಲಾ ಶೋಷಣೆಯಿಂದ ಮುಕ್ತಗೊಳಿಸಬಹುದೆಂಬ ವಿಶ್ವಾಸ ಹೊಂದಿದೆ. ತನ್ನ ಈ ಮಹಾಕಾರ್ಯವನ್ನು ಕೇವಲ ಸಮಾಜವಾದಿ ಬದಲಾವಣೆಯಿಂದ ಮಾತ್ರವೇ ಸಾಧಿಸಬಹುದು ಹಾಗಾಗಿ ಸಿಐಟಿಯು ತನ್ನ ಸಂವಿಧಾನದಲ್ಲಿ" ಯಾವುದೇ ಸಾಮಾಜಿಕ ಪರಿವರ್ತನೆಯನ್ನು ವರ್ಗ ಸಂಘರ್ಷವಿಲ್ಲದೆ ತರುವುದು ಸಾಧ್ಯವಿಲ್ಲ, ಹಾಗಾಗಿ ವರ್ಗ ಸಂಘರ್ಷದ ಹಾದಿಯಲ್ಲಿ ಅದನ್ನು ಸಾಧ್ಯವಾಗಿಸುವ ಎಲ್ಲಾ ಪ್ರಯತ್ನಗಳತ್ತ ದುಡಿಯುವ ವರ್ಗವನ್ನು ಕೊಂಡೊಯ್ಯುತ್ತದೆ. ದುಡಿಯುವ ವರ್ಗದ ಇಂತಹ ಹೋರಾಟಕ್ಕೆ ಬದ್ಧತೆ ಮತ್ತು ದುಡಿಯುವ ವರ್ಗ ವಿರೋಧಿ, ವರ್ಗ ಶಾಮೀಲುಕೋರತನವನ್ನು ಸೋಲಿಸುವುದಕ್ಕೆ ಬೃಹತ್ ದುಡಿಯುವ ವರ್ಗದ ಐಕ್ಯತೆಯನ್ನು ಎಲ್ಲಾ ಹಂತಗಳೂ ಪ್ರಜಾಸತ್ತಾತ್ಮಕ ಕಾರ್ಯ ವಿಧಾನದಿಂದ ಮಾತ್ರ ಸಾಧಿಸಬಹುದಾಗಿದೆ. "ಹಾಗಾಗಿ ಕಾರ್ಮಿಕ ಸಂಘಟನೆಗಳ ಪ್ರಜಾಪ್ರಭುತ್ವ ಕಾರ್ಯ ನಿರ್ವಹಣೆ ಸಿಐಟಿಯು ಗೆ ಬಹುಪ್ರಮುಖವಾಗಿದೆ. ದುಡಿಯುವ ಜನರಿಗೆ ರಾಜಕೀಯ ಶಿಕ್ಷಣ ನೀಡದೆ, ದುಡಿಯುವ ವರ್ಗದಲ್ಲಿ ಸಮಾಜವಾದಿ ಪ್ರಜ್ಞೆ ಬೆಳೆಸದೆ, ಕೇವಲ ಆರ್ಥಿಕ ಬೇಡಿಕೆ ಗುರಿ ಎಂಬ ನಂಬಿಕೆಯನ್ನು ತೊಡೆಯದೆ ಕಾರ್ಮಿಕ ಸಂಘಟನೆ ಮತ್ತು ಚಳವಳಿಯು ಮೇಲ್ಕಾಣಿಸಿದ ತೊಡಕುಗಳನ್ನು ನಿವಾರಿಸಲಾಗದು. ಸಿಐಟಿಯು ಸ್ಥಾಪನೆಯ ನಂತರವೇ ಭಾರತದ ಕಾರ್ಮಿಕ ವರ್ಗವನ್ನು ವಿಶಾಲ ವೇದಿಕೆಯಲ್ಲಿ ಒಂದುಗೂಡಿಸಿ ವರ್ಗ ಐಕ್ಯತೆಯತ್ತ ಪ್ರಜ್ಞಾಪೂರ್ವಕವಾಗಿ ಧೃಡ ಹೆಜ್ಜೆಗಳನ್ನಿಡಲು ಸಾಧ್ಯವಾಯಿತು ಎಂದು ಮೀನಾಕ್ಷಿ ಸುಂದರಮ್ ವಿವರಿಸಿದರು. ಇಂದು ಕಾರ್ಮಿಕ ವರ್ಗದ ಐಕ್ಯತೆಗೆ ಕೋಮುವಾದಿ ಶಕ್ತಿಗಳಿಂದ ಬಾರೀ ಸವಾಲು ಎದುರಾಗಿದ್ದು ಕಾರ್ಮಿಕ ಸಂಘಟನೆಗಳ ಐಕ್ಯತೆಯನ್ನು ಬಲಪಡಿಸುವುದು ಮುಖ್ಯವಾಗಿದೆ ಎಂದರು.



ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ. ಶಂಕರ್ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕಾರ್ಮಿಕ ಚಳವಳಿಯ ಶತಮಾನೋತ್ಸವದ ಈ ಸಂದರ್ಭದಲ್ಲಿ ಇತಿಹಾಸದ ಅನುಭವದ ಹಿನ್ನೆಲೆಯಲ್ಲಿ, ಪರಿಷ್ಕರಣವಾದ, ಸುಧಾರಣಾವಾದದ ವಿರುದ್ಧ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ, ಸರಕಾರದ ನೀತಿಗಳ ವಿರುದ್ಧ ದಿಟ್ಟ, ಸಮರಶೀಲ ಹೋರಾಟ ಮಾಡಲು ಸಾಧ್ಯವಾಗದೇ ಎಐಟಿಯುಸಿ ಯಿಂದ ಪ್ರತ್ಯೇಕಗೊಂಡು 1970 ರಲ್ಲಿ ಸಿಐಟಿಯು ಸ್ಥಾಪನೆಗೊಂಡು ಸಮರ ಧೀರ ಹೋರಾಟದ ಸಂಘಟನೆಯಾಗಿ ಬೆಳೆದು ಬಂದಿದೆ ಎಂದು ಹೇಳಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎಚ್. ನರಸಿಂಹ ಪ್ರಾಸ್ತಾವಿಕ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಸುರೇಶ ಕಲ್ಲಾಗರ್ ಎಲ್ಲರನ್ನೂ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಸಿಐಟಿಯು ಬೈಂದೂರು ತಾಲೂಕು ಸಂಚಾಲಕ ರೋರಾ ಕ್ವಾಡ್ರಸ್ ಬಿಜೂರು ಉಪಸ್ಥಿತರಿದ್ದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಮಹಾಬಲ ವಡೇರಹೋಬಳಿ ಇದ್ದರು.

ಬೈಂದೂರು: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ - ಕೂಲಿಕಾರರ ಸಮಾವೇಶ



ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಆಶ್ರಯದಲ್ಲಿ ಬೈಂದೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಸೂರ್ಕುಂದ ಪ್ರದೇಶದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಮಾಡುವ ಕೃಷಿಕೂಲಿಕಾರರ ಸಭೆಯು 23 ಜನವರಿ 2020 ರಂದು ಸೂರ್ಕುಂದ ಶಾಲೆ ಬಳಿ ಯಶಸ್ವಿಯಾಗಿ ಜರಗಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಕಾರ್ಯದರ್ಶಿ ನಾಗರತ್ನ ನಾಡ ಕೂಲಿಕಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಮಾಡುವುದರ ಮೂಲಕ ನರೇಗಾ ಕೆಲಸಗಾರರು ಗ್ರಾಮಾಭಿವೃದ್ಧಿ ಜೊತೆಗೆ ಕೈಗೊಂದು ಕೆಲಸ ಊರಿಗೊಂದು ಆಸ್ತಿ ನಿರ್ಮಾಣ ಮಾಡುವ ಸಮಾಜ ಮುಖಿ ಅಭಿವೃದ್ಧಿ ಕೆಲಸ ನಿರ್ವಹಿಸಿದಂತೆ ಆಗುತ್ತದೆ ಎಂದು ಹೇಳಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಜಿಲ್ಲಾ ಉಪಾಧ್ಯಕ್ಷ ರಾಜೀವ ಪಡುಕೋಣೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ವಾರ್ಷಿಕ 250 ದಿನಗಳ ಕೂಲಿ ಕೆಲಸ, ಕೂಲಿ ವೇತನ ದಿನಕ್ಕೆ ರೂಪಾಯಿ 600 ರಂತೆ ನಿಗದಿ ಮಾಡಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಹೋರಾಟದಲ್ಲಿ ಎಲ್ಲಾ ಕೂಲಿ ಕಾರ್ಮಿಕರು ಸಕ್ರೀಯವಾಗಿ ಭಾಗವಹಿಸಲು ಕರೆ ಕೊಡಲಾಯಿತು. ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ(ಸಿಐಟಿಯು)ದ ಬೈಂದೂರು ತಾಲೂಕು ಮುಖಂಡರಾದ ಸಿಂಗಾರಿ ಸೂರ್ಕುಂದ ಕಾರ್ಯಕ್ರಮ ನಿರೂಪಿಸಿದರು.



ಎಡಪಕ್ಷಗಳ ವಿರುದ್ಧದ ಅಶೋಕ್ ಹಾರನಹಳ್ಳಿ ಹೇಳಿಕೆಗೆ ಸಿಪಿಐ(ಎಂ) ಹಾಸನ ಜಿಲ್ಲಾ ಸಮಿತಿಯ ಖಂಡನೆ

ರಾಜ್ಯದ ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿಯವರು ಎಡಪಕ್ಷಗಳನ್ನು 'ಹಿಂದೂ ವಿರೋಧಿ' ಎನ್ನುವ ಮುಖಾಂತರ ಸಂವಿಧಾನ ವಿರೋಧಿ 'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ)'ಯ ವಿರುದ್ಧ ದೇಶದಾದ್ಯಂತ ನಾಗರಿಕರು ಸ್ವಯಂ ಪ್ರೇರಿತವಾಗಿ ನಡೆಸುತ್ತಿರುವ ಹೋರಾಟವನ್ನು ಕೋಮು ಆಧಾರದಲ್ಲಿ ದಿಕ್ಕುತಪ್ಪಿಸುವ ಪ್ರಯತ್ನ ಮಾಡಿದ್ದಾರೆ. ರಾಜ್ಯದ ಹಿರಿಯ ವಕೀಲರೂ ಹಾಗೂ ರಾಜ್ಯ ಸರ್ಕಾರದ ಮಾಜಿ ಅಡ್ವೋಕೇಟ್ ಜನರಲ್ ಒಬ್ಬರು ಈ ರೀತಿ ಕೋಮುವಾದಿ ಭಾಷೆಯಲ್ಲಿ ಮಾತನಾಡಿರುವುದು ಅತ್ಯಂತ ವಿಷಾಧನೀಯ ಸಂಗತಿ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಹೇಳಿದ್ದಾರೆ.

ಕೇಂದ್ರ ಸರ್ಕಾರ ಜಾರಿ ಮಾಡಿರುವ 'ಪೌರತ್ವ ತಿದ್ದುಪಡಿ ಕಾಯ್ದೆ'ಯು ಭಾರತದ ಪೌರತ್ವ ನೀಡುವ ವಿಚಾರದಲ್ಲಿ ಧರ್ಮದ ಆಧಾರದಲ್ಲಿ ತಾರತಮ್ಯಕ್ಕೆ ಕಾರಣವಾಗಿದೆ. ಇದು ನಮ್ಮ ದೇಶದ ಸಂವಿಧಾನದ 'ಜಾತ್ಯಾತೀತ ಪ್ರಜಾಪ್ರಭುತ್ವ'ದ ಮೂಲ ಬುನಾದಿಗೆ ವಿರುದ್ಧವಾಗಿದೆ. 'ಪೌರತ್ವ ತಿದ್ದುಪಡಿ ಕಾಯ್ದೆ' ಜಾರಿಯಾದರೆ ಭಾರತದ ಸಂವಿಧಾನಕ್ಕೇ ಸಂಚಕಾರ ಖಚಿತ. ಇದು ಕಾನೂನು ತಜ್ಞರಾದ ಅಶೋಕ್ ಹಾರನಹಳ್ಳಿಯವರಿಗೆ ತಿಳಿಯದ ವಿಷಯವೇನಲ್ಲ. ಆದರೆ ಅವರು ಸಂಘಪರಿವಾರದ ಪಾಳೆಯ ಸೇರಿಕೊಂಡು ಸಂವಿಧಾನ ವಿರೋಧಿ ಕಾಯ್ದೆಯೊಂದರ ಪರವಾಗಿ ನಿಂತು ಪ್ರಸ್ತುತ ದೇಶದಲ್ಲಿ ಸಂವಿಧಾನದ ಉಳಿವಿಗಾಗಿ ನಡೆಯುತ್ತಿರುವ ನಾಗರಿಕರ ಹೋರಾಟವನ್ನು ಹಿಂದೂಗಳ ವಿರುದ್ಧ ಎತ್ತಿಕಟ್ಟುವುದು ಅವರ ಘನತೆಗೆ ತಕ್ಕುದಾದ ವರ್ತನೆಯಲ್ಲ.

ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ದೌರ್ಜನ್ಯಕ್ಕೊಳಗಾಗಿ ಭಾರತಕ್ಕೆ ಬರುವ ಹಿಂದೂಗಳಿಗೆ ಪೌರತ್ವ ನೀಡಲು ಸಿಎಎ ಕಾಯ್ದೆ ಜಾರಿಗೆ ತರಲಾಗಿದೆ. ಆದರೆ ಎಡಪಕ್ಷಗಳು ಅದಕ್ಕೆ ವಿರುದ್ಧವಾಗಿವೆ ಎಂದು ಹಸಿ ಸುಳ್ಳು ಹೇಳಲಾಗುತ್ತಿದೆ. ನೆರೆಹೊರೆಯ ದೇಶಗಳಿಂದ ಯಾವುದೇ ಕಾರಣಕ್ಕೆ ಭಾರತಕ್ಕೆ ವಲಸೆ ಬರುವ ಯಾವುದೇ ಧರ್ಮದವರಿಗೆ ನಿಯಮನುಸಾರ ಭಾರತದ ಪೌರತ್ವ ನೀಡುವುದನ್ನು ಎಡಪಕ್ಷಗಳು ಎಂದೂ ವಿರೋಧಿಸಿಲ್ಲ. ಆದರೆ ಹೊಸದಾಗಿ ಜಾರಿಮಾಡಿರುವ 'ಪೌರತ್ವ ತಿದ್ದುಪಡಿ ಕಾಯ್ದೆ'ಯು ಭಾರತದ ಪೌರತ್ವ ನೀಡುವಾಗ ಮುಸಲ್ಮಾನರನ್ನು ಮಾತ್ರ ಹೊರಗಿಟ್ಟು ತಾರತಮ್ಯ ಎಸಗುತ್ತದೆ. ಇದು ನಮ್ಮ ದೇಶದ ಸಂವಿಧಾನದ ಮೂಲ ಆಶಯಕ್ಕೆ ಕಡು ವಿರೋಧಿಯಾಗಿದೆ. ಭಾರತದ ಈ ಹಿಂದಿನ 'ಪೌರತ್ವ ಕಾಯ್ದೆ'ಯ ಪ್ರಕಾರವೇ ನೆರೆಹೊರೆಯ ದೇಶಗಳ ವಲಸಿಗರಿಗೆ ಭಾರತದ ಪೌರತ್ವ ನೀಡಬಹುದಿತ್ತು. ಆದರೆ ಭಾರತದ ಪೌರತ್ವದಿಂದ ನಿರ್ಧಿಷ್ಟವಾಗಿ ಮುಸಲ್ಮಾನರನ್ನು ಹೊರಗಿಡುವ ಒಂದೇ ದುರುದ್ದೇಶದ ಕಾರಣಕ್ಕಾಗಿ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ ಮಾಡಲಾಗಿದೆ.

ಈಗಾಗಲೇ ಅಸ್ಸಾಂ ರಾಜ್ಯದಲ್ಲಿ ವಿಫಲವಾಗಿರುವ 'ರಾಷ್ಟ್ರೀಯ ಪೌರತ್ವ ನೊಂದಣಿ (ಎನ್‌ಆರ್‌ಸಿ)ಯನ್ನು ದೇಶದಾದ್ಯಂತ ವಿಸ್ತರಿಸಲು ಕೇಂದ್ರ ಸರ್ಕಾರ ಹೊರಟಿದೆ. ಈ ಯೋಜನೆಯ ಹಿಂದೆ ಆರ್‌ಎಸ್‌ಎಸ್‌ನ ಮುಸ್ಲಿಂ ವಿರೋಧಿ ಕಾರ್ಯಸೂಚಿ ಸ್ಪಷ್ಟವಾಗಿ ಕೆಲಸ ಮಾಡುತ್ತಿದೆ. ಲಕ್ಷಾಂತರ ಕೋಟಿ ಆರ್ಥಿಕ ಹೊರೆ ಮತ್ತು ಭಾರತವನ್ನು ಮತ್ತೊಮ್ಮೆ ವಿಭಜನೆಯತ್ತ ಕೊಂಡೊಯ್ಯುವ ಅಪಾಯಕಾರಿ ಆಟಕ್ಕೆ ಮೋದಿ–ಶಾ ಸರ್ಕಾರ ಕೈಹಾಕಿದೆ. ಮೊದಲು ದೇಶದಲ್ಲಿ 'ರಾಷ್ಟ್ರೀಯ ಜನಸಂಖ್ಯಾ ನೊಂದಣಿ (ಎನ್‌ಪಿಆರ್)' ಅದರ ಮಾಹಿತಿಯ ಆಧಾರದಲ್ಲಿ 'ಎನ್‌ಆರ್‌ಸಿ' ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ. 'ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ' ಎಂಬ ಈ ಅಪಾಯಕಾರಿ ಪ್ರಕ್ರಿಯೆಯಲ್ಲಿ ಈ ದೇಶದ ಮುಸಲ್ಮಾನರಲ್ಲದೆ ಕೋಟ್ಯಾಂತರ ಬಡವರು, ನಿರ್ಗತಿಕರು, ವಸತಿರಹಿತರು, ಭೂರಹಿತರು, ಆಧಿವಾಸಿಗಳು, ದಲಿತರು, ಮಹಿಳೆಯರು, ಅಮಾಯಕರು, ಅಂಗವಿಕಲರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಪೌರತ್ವವನ್ನು ಸಾಬೀತುಪಡಿಸಲು ನಿಗಧಿಪಡಿಸಲಾಗಿರುವ ಅಸಾಧ್ಯವಾದ ದಾಖಲೆಗಳನ್ನು ನೀಡಲಾಗದೆ ತೀವ್ರ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಬಿಜೆಪಿಯ ಈ ಅಪಾಯಕಾರಿ ಯೋಜನೆಗೆ ತಡೆಹಾಕಿ ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುವವರೆಗೂ ಭಾರತದ ದೇಶಪ್ರೇಮಿ ಜನತೆ ಹೋರಾಟ ಮುಂದುವರಿಸಬೇಕಿದೆ. ಅಂತಹ ಎಲ್ಲಾ ಹೋರಾಟಗಳಿಗೆ ಸಿಪಿಐ(ಎಂ) ಜೊತೆಯಾಗಲಿದೆ.

"ಎನ್‌ಪಿಆರ್‌ಗೆ ನಾವು ಉತ್ತರ ನೀಡುವುದಿಲ್ಲ; ಎನ್‌ಆರ್‌ಸಿಗೆ ನಾವು ದಾಖಲೆ ತೋರಿಸುವುದಿಲ್ಲ":

ಏಪ್ರಿಲ್ 1 ರಿಂದ ಸೆಪ್ಟಂಬರ್ 30ರವರೆಗೆ ದೇಶದಲ್ಲಿ ನಡೆಸಲಾಗುತ್ತಿರುವ 'ಎನ್‌ಪಿಆರ್' ಸಮೀಕ್ಷೆಯ ಸಂದರ್ಭದಲ್ಲಿ ಮನೆಮನೆಗೆ ಬರುವ ಮಾಹಿತಿ ಸಂಗ್ರಾಹಕರ ಯಾವುದೇ ಪ್ರಶ್ನೆಗಳಿಗೆ ಉತ್ತರ ನೀಡದಂತೆ ಹಾಗೂ 'ಎನ್‌ಆರ್‌ಸಿ' ಪ್ರಕ್ರಿಯೆಯಲ್ಲಿ ಯಾವುದೇ ದಾಖಲೆ ತೋರಿಸದಂತೆ ಜನರಿಗೆ ಸಿಪಿಐ(ಎಂ) ಕೇಂದ್ರ ಸಮಿತಿಯು ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ 'ಎನ್‌ಪಿಆರ್‌ಗೆ ನಾವು ಉತ್ತರ ನೀಡುವುದಿಲ್ಲ' ಹಾಗೂ 'ಎನ್‌ಆರ್‌ಸಿಗೆ ನಾವು ದಾಖಲೆ ತೋರಿಸುವುದಿಲ್ಲ' ಎಂಬ ಅಸಹಕಾರ ಅಭಿಯಾನವನ್ನು ದೇಶದಾದ್ಯಂತ ಸಿಪಿಐ(ಎಂ) ನಡೆಸಲಿದೆ. ಇದರ ಭಾಗವಾಗಿ ಸಿಪಿಐ(ಎಂ) ಕಾರ್ಯಕರ್ತರು ಮನೆಮನೆಗೆ ತೆರಳಿ ಸಿಎಎ, ಎನ್‌ಪಿಆರ್ ಮತ್ತು ಎನ್‌ಆರ್‌ಸಿಗೆ ಇರುವ ಸಂಬಂಧ ಹಾಗೂ ದೇಶದ ಸಂವಿಧಾನ ಮತ್ತು ಜನರಿಗೆ ಎದುರಾಗಿರುವ ಅಪಾಯದ ಕುರಿತು ವಿವರಿಸಿ ತಿಳಿಸಲಿದ್ದಾರೆ.

ಪಾತಾಳಕ್ಕಿಳಿದಿರುವ ದೇಶದ ಆರ್ಥಿಕತೆ, ನಿರುದ್ಯೋಗ, ರೈತರ ಆತ್ಮಹತ್ಯೆ, ಸಾರ್ವಜನಿಕ ಸಂಪತ್ತಿನ ಲೂಟಿ, ಕೈಗಾರಿಕೆಗಳ ಮುಚ್ಚುವಿಕೆ, ಕಾರ್ಮಿಕ ಹಕ್ಕುಗಳ ಧಮನ ಹಾಗೂ ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ದಾಳಿಯನ್ನು ತಡೆಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ಮೋದಿ ಸರ್ಕಾರ ದೇಶದ ಜನರನ್ನು ದಿಕ್ಕುತಪ್ಪಿಸಿ ದೇಶವನ್ನು ಮನುವಾದಿ ಫ್ಯಾಸಿಸ್ಟ್ ಆಡಳಿತಕ್ಕೆ ಒಳಪಡಿಸುವ ಆರ್‌ಎಸ್‌ಎಸ್‌ನ ಕಾರ್ಯಸೂಚಿಯನ್ನು ಜಾರಿಮಾಡುತ್ತಿದೆ. ಈ ಬಗ್ಗೆ ಜನರು ಜಾಗೃತಿಗೊಂಡು ಮೋದಿ ಮತ್ತು ಶಾ ಜೋಡಿಯ ಬಿಜೆಪಿ ಸರ್ಕಾರದ ಅಪಾಯಕಾರಿ ನೀತಿಗಳ ವಿರುದ್ಧ ಹೋರಾಟಕ್ಕಿಳಿಯಬೇಕೆಂದು ಸಿಪಿಐ(ಎಂ) ಕರೆ ನೀಡುತ್ತದೆ.

– ಧರ್ಮೇಶ್

ದ್ವಿತೀಯ ಮತ್ತು ತೃತೀಯ ಹಂತದ ಎಲ್ಲಾ ಪದವಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್ ಟಾಪ್ ಕೊಡಲು ಎಸ್‌ಎಫ್‌ಐ ಆಗ್ರಹ

ವಿದ್ಯಾರ್ಥಿಗಳಿಗೆ ನೀಡಬೇಕಾದ ಸರಕಾರಿ ಸೌಲಭ್ಯಗಳನ್ನು ತಾರತಮ್ಯ ಮಾಡುತ್ತಿರುವ ರಾಜ್ಯ ಸರಕಾರದ ನೀತಿಯನ್ನು ಎಸ್‌ಎಫ್‌ಐ ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ. ಈ ಹಿಂದೆ ರಾಜ್ಯ ಸರ್ಕಾರ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಮಾತ್ರ ಉಚಿತ ಲ್ಯಾಪ್‌ಟ್ಯಾಪ್ ನೀಡುತ್ತ ಇತ್ತು. ಆಗ ಎಸ್‌ಎಫ್‌ಐ ಸಂಘಟನೆಯು ರಾಜ್ಯಾದ್ಯಂತ ಹೋರಾಟ ಮಾಡಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟ್ಯಾಪ್ ನೀಡಬೇಕೆಂದು ರಾಜ್ಯ ಸರಕಾರಕ್ಕೆ ಒತ್ತಡ ತಂದಿತ್ತು. ಪ್ರಸ್ತುತ ರಾಜ್ಯ ಸರ್ಕಾರ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟ್ಯಾಪ್ ನೀಡುತ್ತಿದೆ. ಆದರೆ ಕೇವಲ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಮಾತ್ರ ಕೊಡಲು ಹೋರಾಟಿದೆ. ವಿದ್ಯಾರ್ಥಿಗಳ ಮಧ್ಯ ಪ್ರಥಮ ವರ್ಷ, ದ್ವಿತೀಯ ವರ್ಷ, ತೃತೀಯ ವರ್ಷ ಎಂದು ತಾರತಮ್ಯ ಮಾಡದೇ ಪದವಿಯ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟ್ಯಾಪ್ ಕೊಡಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (Sfi) ಕೊಪ್ಪಳ ಜಿಲ್ಲಾ ಸಮಿತಿ ರಾಜ್ಯ ಸರ್ಕಾರವನ್ನು ಆಗ್ರಹಿಸಿತ್ತು.

2017–18 ಮತ್ತು 2018–19 ಈ ವರ್ಷದಲ್ಲಿ ದಾಖಲಾತಿ ಮಾಡಿಸಿದ ವಿದ್ಯಾರ್ಥಿಗಳಿಗೆ ಅಂದಿನ ಸಮಿಶ್ರ ಸರಕಾರ ಲ್ಯಾಪ್‌ಟ್ಯಾಪ್ ಗಳನ್ನು ಉಚಿತವಾಗಿ ವಿತರಣೆ ಮಾಡತ್ತವೆ ಎಂದು ಹೇಳಿಕೆ ನೀಡಿ, ಟೆಂಡರ್ ಕರೆದಿದ್ದರು. ಆದರೆ ಈಗ ಮಾತ್ರ ದ್ವಿತಿಯ ಮತ್ತು ಅಂತಿಮ ವರ್ಷದಲ್ಲಿರಿವು ವಿದ್ಯಾರ್ಥಿಗಳಿಗೆ ಕೊಡುವುದಿಲ್ಲ ಎಂದು ಸರಕಾರ ಹೇಳಿರುವುದು ಸರಿಯಲ್ಲ ತಂತ್ರಜ್ಞಾನ ಬಳಕೆ ಮಾಡಿಕೊಳ್ಳದೆ ಗುಣಾತ್ಮಕ ಕಲಿಕೆಯಲ್ಲಿ ವಿದ್ಯಾರ್ಥಿಗಳು ಹಿಂದೆ ಬೀಳುವಂತಾಗಿದ್ದು ಆದ ಕಾರಣ ಎರಡೂ ವರ್ಷದ ಅವಧಿಯಲ್ಲಿಯ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಅತ್ಯಂತ ತ್ವರಿತಗತಿಯಲ್ಲಿ ನ್ಯಾಯ ಒದಗಿಸಿ ಉನ್ನತ ಶಿಕ್ಷಣದ ಸಹಕಾರಕ್ಕೆ ರಾಜ್ಯ ಸರ್ಕಾರ ಮುಂದಾಗುಬೇಕು ಅಲ್ಲದೆ 2017–18ನೇ ಸಾಲಿನಲ್ಲಿ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅದರಲ್ಲೂ 2017–18ರಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಅನ್ಯಾಯ ಮೋಸ ಮಾಡದೆ ತ್ವರಿತಗತಿಯಲ್ಲಿ ನ್ಯಾಯ ಒದಗಿಸಿಕೊಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಶಾಸಕರ ಮನೆ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ನಗರದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಹತ್ತಿರ ದಿನಾಂಕ 22 ಜನವರಿ 2020 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕೊಪ್ಪಳ ಜಿಲ್ಲಾ ಸಮಿತಿಯು ಶಾಸಕರಿಗೆ ಮನವಿ ಪತ್ರ ಸಲ್ಲಿಸಿತ್ತು.



ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಅಮರೇಶ ಕಡಗದ, ಜಿಲ್ಲಾ ಉಪಾಧ್ಯಕ್ಷ ಬಾಳಪ್ಪ ಹುಲಿಹೈದರ ತಾಲ್ಲೂಕು ಉಪಾಧ್ಯಕ್ಷ ಶಿವುಕುಮಾರ ಈಚನಾಳ ಪ್ರಮುಖರಾದ ಹನುಮೇಶ ಮುಕ್ಕುಂಪಿ, ಪ್ರಭುರಾಜ, ಮಂಜುನಾಥ, ಮೌಲಸಾಬ, ತಿಮ್ಮಜ್ಜ, ಯಮನೂರ, ದ್ಯಾಮಣ್ಣ, ಹನುಮೇಶ ಕಂಬಳಿ ಹಾಗೂ ಇತರರು ಇದ್ದರು.

ಕಾನೂನಿನ ದುರ್ಬಳಕೆಯ ದೌರ್ಜನ್ಯ ಮತ್ತು ಪರಿಹಾರೋಪಾಯಗಳು



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಅಧಿಕಾರಸ್ಥರು ಮತ್ತು ಪೋಲೀಸರೇ ಕಾನೂನನ್ನು ಕೈಗೆತ್ತಿಕೊಂಡು, ಅಥವಾ ಕಾನೂನಿನ ಸೆಕ್ಷನ್ನುಗಳನ್ನು ಬಳಸಿಕೊಂಡು, ತಮಗಾಗದವರ, ತಮ್ಮ ಧೋರಣೆಯನ್ನು ಒಪ್ಪದ, ಪ್ರಶ್ನಿಸುವ, ಪ್ರತಿಭಟಿಸುವ ಜನರ ಮೇಲೆ ದೌರ್ಜನ್ಯವನ್ನು ನಿಲ್ಲಿಸುವುದಕ್ಕಾಗಿ ಯಾವ ನಾಗರಿಕ ಕ್ರಮಗಳೂ ಇಲ್ಲವೆ? ತಕ್ಷಣಕ್ಕೆ ನಾಲ್ಕು ಪರಿಹಾರಗಳಿವೆ:

ಯಾವುದೇ ನಾಗರಿಕರನ್ನು ಮತ್ತೊಬ್ಬ ನಾಗರಿಕನು/ಳು ಮಾನಸಿಕವಾಗಿವಾಗಿಯಾಗಲಿ, ದೈಹಿಕವಾಗಿಯಾಗಲಿ ಹಿಂಸಿಸುವುದು, ಅಕ್ರಮ ಬಂಧನದಲ್ಲಿರಿಸುವುದು, ಯಾವುದೇ ಬಗೆಯ ಕಿರುಕುಳ ಕೊಡುವುದು ಕಾನೂನಿಗೆ ವಿರುದ್ಧವಾದ ಮತ್ತು ಶಿಕ್ಷಾರ್ಹವಾದ ಅಪರಾಧವಾಗುತ್ತದೆ. ಅಸಂವಿಧಾನಿಕವಾಗುತ್ತದೆ. ಭಾರತದ ಕಾನೂನು ವ್ಯವಸ್ಥೆಯ ಎಲ್ಲ ಅಂಗಗಳೂ ನಾಗರಿಕರ ಸುರಕ್ಷತೆ ಮತ್ತು ಸಾಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ರಚಿತವಾಗಿದ್ದು ಅವುಗಳ ಅನುಷ್ಠಾನದ ಹೊಣೆಯು ಬೇರೆ ಬೇರೆ ರೀತಿಗಳಲ್ಲಿ ಭಾರತದ ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೇಲೆ ಇದೆ.

ನಾಗರಿಕರ ಸಾಂವಿಧಾನಿಕ ಹಕ್ಕುಗಳನ್ನು ಸಂರಕ್ಷಿಸುವ ಕೆಲಸವನ್ನು ಪೋಲೀಸರು ಈ ಮೂರೂ ಅಂಗಗಳ ಉಸ್ತುವಾರಿಕೆಯಲ್ಲಿ ಮಾಡುವುದರಿಂದ ಅವರ ಹೊಣೆ ಗುರುತರವಾದದ್ದು. ಕನ್ನಡದಲ್ಲಿ ಪೋಲೀಸರಿಗಿರುವ ಅಧಿಕೃತ ಆರಕ್ಷಕರು ಎಂದು. ಆದರೆ ನಾನಾ ಕಾರಣಗಳಿಗಾಗಿ ಆರಕ್ಷಕರು ತಮ್ಮ ಹೊಣೆಯನ್ನು ನಿರ್ವಹಿಸುವಾಗ ತಪ್ಪು ಮಾಡುವುದು ಸಾಧ್ಯ. ಅಂಥ ತಪ್ಪುಗಳಲ್ಲಿ ಬಹು ಮುಖ್ಯವಾದ ಮತ್ತು ಅಪಾಯಕಾರಿಯಾದ ತಪ್ಪು, ಜನರ ಕಲ್ಯಾಣಕ್ಕಾಗಿ ಚುನಾಯಿತ ಪ್ರತಿನಿಧಿಗಳಿಂದ ರಚಿತವಾಗುವ ಸರ್ಕಾರ ಮತ್ತು ಸರ್ಕಾರವನ್ನು ನಡೆಸುವ ವ್ಯಕ್ತಿಗಳು ಎರಡೂ ಒಂದೇ ಅಲ್ಲ ಎಂಬುದನ್ನು ಮನಗಾಣದೆ ಸರ್ಕಾರದಲ್ಲಿರುವ ವ್ಯಕ್ತಿಗಳ ಇಚ್ಛೆಗನುಸಾರವಾಗಿ ನಡೆದುಕೊಳ್ಳುವುದು. ಆಗ ಆರಕ್ಷಕರು ನಾಗರಿಕರ ರಕ್ಷಕರಾಗುವ ಬದಲು ಹಿಂಸಕರಾಗುವ ಸಂಭವವೇ ಹೆಚ್ಚು. ಆಗೆಲ್ಲಾ ಮೇಲುನೋಟಕ್ಕೆ ಅವರು ಕಾನೂನುಪಾಲಕರಂತೆ ಕಂಡರೂ, ವಾಸ್ತವದಲ್ಲಿ ಕಾನೂನನ್ನು ಕೈಗೆತ್ತಿಕೊಂಡ ವ್ಯಕ್ತಿಗಳೇ ಆಗಿರುತ್ತಾರೆ. ಯಾವುದೇ ಅಧಿಕಾರವಿಲ್ಲದ ಸಾಮಾಜಿಕ ವ್ಯಕ್ತಿಗಳು ಯಾವುದೇ ಕಾರಣಗಳಿಗಾಗಿ ಇತರರನ್ನು ಶಿಕ್ಷಿಸುವ ಅಥವಾ ಅವರಿಗೆ ಲಾಭಮಾಡಿಕೊಡುವ ಕ್ರಮಗಳನ್ನು ಕೈಗೊಂಡಾಗ ಮಾತ್ರ ಕಾನೂನನ್ನು ಕೈಗೆತ್ತಿಕೊಂಡಂತೆ ಆಗುವುದಲ್ಲ. ಸರ್ಕಾರದಲ್ಲಿನ ಯಾವುದೇ ವ್ಯಕ್ತಿಗಳು ತಮ್ಮ ಅಧಿಕಾರದ ಬಲದಿಂದ ಅಸಂವಿಧಾನಿಕವಾದ ಯಾವುದೇ ಕ್ರಮಗಳನ್ನು ನಾಗರಿಕರ ಮೇಲೆ ಕೈಗೊಂಡರೂ ಅದು ಕಾನೂನನ್ನು ಕೈಗೆತ್ತಿಕೊಂಡ ಕ್ರಮವೇ ಆಗುತ್ತದೆ. ಅದೇ ರೀತಿ ಆರಕ್ಷಕರೂ ಸಹ ನಾಗರಿಕರೊಂದಿಗೆ ವ್ಯವಹರಿಸಿದರೆ ಅವರು ಕೈಗೊಳ್ಳುವ ಯಾವುದೇ ಕ್ರಮವೂ ಕಾನೂನನ್ನು ಕೈಗೆತ್ತಿಕೊಂಡ ಕ್ರಮವೇ ಆಗುತ್ತದೆ. ಆದರೆ ಸಾಮಾನ್ಯ ಜನರ ಕಣ್ಣಿನಲ್ಲಿ ಇದು ಹಾಗೆ ಕಾಣುವುದಿಲ್ಲ, ಅಷ್ಟೆ. ಒಬ್ಬ ನಾಗರಿಕ ಕಾನೂನನ್ನು ಕೈಗೆತ್ತಿಕೊಂಡು ಮತ್ತೊಬ್ಬ ನಾಗರಿಕನಿಗೆ ಮಾಡುವ ಹಿಂಸೆ–ಅನ್ಯಾಯಗಳು ಮಾತ್ರ ದೌರ್ಜನ್ಯವಲ್ಲ. ಸ್ವಂತ ಹಿತಾಸಕ್ತಿಗಾಗಿ ಅಧಿಕಾರಸ್ಥರು ಮತ್ತು ಪೋಲೀಸರು ಜನಸಾಮಾನ್ಯರ ಮೇಲೆ ಮಾಡುವ ಹಿಂಸೆ–ಅನ್ಯಾಯಗಳೂ ದೌರ್ಜನ್ಯವೇ.

ಈಚಿನ ದಿನಗಳಲ್ಲಿ, ರಾಜದ್ರೋಹಕ್ಕೆ ಸಂಬಂಧಿಸಿದ ಸೆಕ್ಷನ್ 124ಎ, ಸಾರ್ವಜನಿಕರಲ್ಲಿ ಸಾಮರಸ್ಯವನ್ನು ಕದಡುವುದಕ್ಕೆ ಸಂಬಂಧಿಸಿದ ಸೆಕ್ಷನ್ 153ಎ ಮತ್ತು ಕ್ರಿಮಿನಲ್ ಚಾರಿತ್ರ್ಯವಧೆಗೆ ಸಂಬಂಧಿಸಿದ ಸೆಕ್ಷನ್



499–500 ಐಪಿಸಿ ಈ ಕಾನೂನುಗಳ ಅಡಿಯಲ್ಲಿ ದೂರುಗಳು ಅಧಿಕ ಸಂಖ್ಯೆಯಲ್ಲಿ ದಾಖಲಾಗುತ್ತಿವೆ. ಇವಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿನ ವ್ಯಕ್ತಿಗಳು ತಮ್ಮ ಅಧೀನದಲ್ಲಿರುವ ಅಥವಾ ತಮಗೆ ಅಥವಾ ತಮ್ಮ ಪಕ್ಷಕ್ಕೆ ನಿಷ್ಠರಾದ ಪೋಲೀಸರನ್ನು ಬಳಸಿಕೊಂಡು ಯಾರಿಗೆ ಯಾವಾಗ ಬೇಕಾದರೂ ಬೆದರಿಕೆಯ ಮೂಲಕ ಮಾನಸಿಕವಾಗಿ, ಬಂಧನದ ಮೂಲಕ ದೈಹಿಕ ಮತ್ತು ಮಾನಸಿಕ ಕಿರುಕುಳ ಕೊಡಬಹುದು ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಪ್ರಕರಣಗಳು ನಡೆದು ಇವನ್ನು ನ್ಯಾಯಾಲಯಗಳು ಇತ್ಯರ್ಥಪಡಿಸುವಾಗ ಅನೇಕ ಕಾರಣಗಳಿಗಾಗಿ ಸಾಕಷ್ಟು ವಿಳಂಬವಾಗುವುದರಿಂದ ಪೋಲೀಸರ ಕ್ರಮದಿಂದ ಆರೋಪಕ್ಕೆ ಒಳಗಾದ ನಾಗರಿಕರಿಗೆ ಬಂಧನವೇ ಶಿಕ್ಷೆಯಾಗಿ ಪರಿಣಮಿಸುತ್ತದೆ. ಒಬ್ಬ ವ್ಯಕ್ತಿಯು ಅನುಭವಿಸಿದ ಅಕ್ರಮ ಸುಖ–ಸಂತೋಷಗಳನ್ನು ಹೇಗೆ ಯಾರೂ ಕಿತ್ತುಕೊಳ್ಳಲಾರರೋ ಹಾಗೆಯೇ ಅಧಿಕಾರಸ್ಥರು ಮತ್ತು ಪೋಲೀಸರು ಅಜ್ಞಾನದಿಂದ, ವ್ಯಕ್ತಿಗತವಾಗಿ ಅಸಹಾಯಕರಾಗಿ ಅಥವಾ ದುರುದ್ದೇಶದಿಂದ ಕೈಗೊಳ್ಳುವ ಅಕ್ರಮಗಳಿಂದಾಗಿ ನಾಗರಿಕರು ಅನುಭವಿಸುವ ಕಷ್ಟ, ದುಃಖ, ಹಿಂಸೆಗಳನ್ನೂ ಸಹ ಯಾವ ನ್ಯಾಯಾಲಯವೂ ಅಳಿಸಲಾರದು. ಹೆಚ್ಚೆಂದರೆ ಅಂಥ ಕಷ್ಟಗಳನ್ನು ಸಾಧ್ಯವಾದ ಮಟ್ಟಿಗೆ ಹಗುರಗೊಳಿಸಲು ಕಾನೂನು ಕೈಗೆತ್ತಿಕೊಂಡ ಅಧಿಕಾರಸ್ಥರು ಮತ್ತು ಪೋಲೀಸರಿಗೆ ದಂಡ ವಿಧಿಸುವುದು, ತೀವ್ರತರವಾದ ಮತ್ತು ಗಂಭೀರವಾದ ಅಕ್ರಮಗಳ ಪ್ರಕರಣಗಳಲ್ಲಿ ಶಿಕ್ಷೆಯನ್ನು ವಿಧಿಸುವುದು ಸಾಧ್ಯ ಅಂಥ ಪರಿಹಾರಗಳು, ಅಧಿಕಾರಸ್ಥರು ಮತ್ತು ಪೋಲೀಸರ ದೌರ್ಜನ್ಯಗಳಿಂದ ನೊಂದ ನಾಗರಿಕರಿಗೆ, ಕೆಳಹಂತದ ನ್ಯಾಯಾಲಯಗಳಿಂದ ದೊರೆಯದೆ ಹೋದಾಗ, ದೇಶದ ಉನ್ನತ ಹಂತದ ನ್ಯಾಯಾಲಯಗಳಿಂದ ವಿರಳವಾಗಿಯಾದರೂ ದೊರೆತಿರುವ ದೃಷ್ಟಾಂತಗಳು ಇವೆ. ಈಚೆಗೆ ಅವು ಮತ್ತಷ್ಟು ವಿರಳವಾಗುತ್ತಿರುವುದು ದೇಶದ ನಾಗರಿಕರಲ್ಲಿ ಆತಂಕ ಹುಟ್ಟಿಸುವ ಸಂಗತಿಯಾಗಿದೆ.

ಇಂಥ ಸನ್ನಿವೇಶದಲ್ಲಿ, ಅಧಿಕಾರಸ್ಥರು ಮತ್ತು ಪೋಲೀಸರೇ ಕಾನೂನನ್ನು ಕೈಗೆತ್ತಿಕೊಂಡು, ಅಥವಾ ಕಾನೂನಿನ ಸೆಕ್ಷನ್ನುಗಳನ್ನು ಬಳಸಿಕೊಂಡು, ತಮಗಾಗದವರ, ತಮ್ಮ ಧೋರಣೆಯನ್ನು ಒಪ್ಪದ, ಪ್ರಶ್ನಿಸುವ, ಪ್ರತಿಭಟಿಸುವ ಜನರ ಮೇಲೆ ದೌರ್ಜನ್ಯವನ್ನು ನಿಲ್ಲಿಸುವುದಕ್ಕಾಗಿ ಯಾವ ನಾಗರಿಕ ಕ್ರಮಗಳೂ ಇಲ್ಲವೆ? ತಕ್ಷಣಕ್ಕೆ ನಾಲ್ಕು ಪರಿಹಾರಗಳಿವೆ:

1. ಅಧಿಕಾರಸ್ಥರು ಮತ್ತು ಪೋಲೀಸರು ಕಾನೂನನ್ನು ಬಳಸಿಕೊಂಡು, ನಿರ್ದಿಷ್ಟವಾಗಿ ಹೇಳುವುದಾದರೆ, ಸೆಕ್ಷನ್ 124ಎ, ಸೆಕ್ಷನ್ 153ಎ ಮತ್ತು ಸೆಕ್ಷನ್ 499–500 ಐಪಿಸಿ ಗಳನ್ನು ನಾಗರಿಕರಮೇಲೆ ಬಳಸಿ ದೌರ್ಜನ್ಯವೆಸಗಲಾಗದಂತೆ ಅವುಗಳ ಅನ್ವಯಕ್ಕೆ ಅತ್ಯಧಿಕ, ಕಠಿಣ ನಿರ್ಬಂಧಗಳನ್ನು ಮತ್ತು ಷರತ್ತುಗಳನ್ನು ಸರ್ವೋಚ್ಚ ನ್ಯಾಯಾಲಯವು ವಿಧಿಸುವಂತೆ ಜನಾಭಿಪ್ರಾಯವನ್ನು ರೂಪಿಸುವುದು.
2. ಸರ್ವೋಚ್ಚ ನ್ಯಾಯಾಲಯವು (ರಾಜದ್ರೋಹಕ್ಕೆ ಸಂಬಂಧಿಸಿದ) ಸೆಕ್ಷನ್ 124ಎ ಅನ್ನು ಯಾವ ಸಂದರ್ಭದಲ್ಲಿ ಮಾತ್ರ ಬಳಸಬಹುದೆಂದು ಅನೇಕ ಬಾರಿ ಸ್ಪಷ್ಟಪಡಿಸಿದ್ದರೂ, ದೇಶದ ಕಾನೂನು ತಜ್ಞರು ಈ ಬಗ್ಗೆ ಸಾರ್ವಜನಿಕ ಸಂವಾದಗಳಲ್ಲಿ ಭಾಷಣ–ಲೇಖನಗಳ ರೂಪದಲ್ಲಿ ವಿವರಿಸಿದ್ದರೂ ಅಧಿಕಾರಸ್ಥರು ಮತ್ತು ಪೋಲೀಸರು ಮಾತೆತ್ತಿದರೆ ರಾಜದ್ರೋಹದ ಆಪಾದನೆಯನ್ನು ಹೊರಿಸಿ, ಮತ್ತು ಭಯ ಹುಟ್ಟಿಸಿ ಭಿನ್ನಾಭಿಪ್ರಾಯದ ಜನಸಾಮಾನ್ಯರ ಮೇಲಿನ ದೌರ್ಜನ್ಯವನ್ನು ಮುಂದುವರೆಸುತ್ತಿರುವುದರಿಂದ ಸೆಕ್ಷನ್ 124ಎ ಅನ್ನೇ ಸಂವಿಧಾನದಿಂದ ತೆಗೆದುಹಾಕಲು ಕ್ರಮಕೈಗೊಳ್ಳುವುದು. ಹಾಗೆ ಮಾಡುವಂತೆ ಜನಾಭಿಪ್ರಾಯನ್ನು ರೂಪಿಸುವುದು.
3. ಯಾವುದೇ ಕಾನೂನಿನ ದುರ್ಬಳಕೆಯನ್ನು ಅಧಿಕಾರಸ್ಥರು ಮತ್ತು ಪೋಲೀಸರು ನಾಗರಿಕರ ವಿರುದ್ಧ ಮಾಡಿದಾಗ ಅಂಥವರಿಗೆ ಕೆಳಹಂತದ ನ್ಯಾಯಾಲಯಗಳಲ್ಲೇ ಶಿಕ್ಷೆ ಮತ್ತು ದಂಡ ವಿಧಿಸುವುದಕ್ಕೆ ಕಾನೂನಿನಲ್ಲಿ ತಿದ್ದಪಡಿಯನ್ನು ತರುವುದು.
4. ಸೆಕ್ಷನ್ 124ಎ, ಸೆಕ್ಷನ್ 153ಎ ಮತ್ತು ಸೆಕ್ಷನ್ 499–500 ಐಪಿಸಿ ಗಳಿಗೆ ಸಂಬಂಧಿಸಿದ ದೂರು–ವಿಚಾರಣೆಗಳನ್ನು ಸ್ವೀಕರಿಸುವ ನಡೆಸುವ ಮತ್ತು ತೀರ್ಮಾನಿಸುವ ಅಧಿಕಾರವನ್ನು ಪೋಲೀಸರಿಗೆ ಮತ್ತು ಕೆಳಹಂತದ ನ್ಯಾಯಾಲಯಗಳಿಗೆ ಕೊಡದೆ, ಉನ್ನತ ನ್ಯಾಯಲಯಗಳಿಗೆ ಮಾತ್ರ ಕೊಡುವುದು. ಹಾಗಾಗಬೇಕೆಂದು ಕಾನೂನು ಪರಿಣಿತರ ಸಹಾಯ ಪಡೆದು ಜನಾಭಿಪ್ರಾಯವನ್ನು ರೂಪಿಸುವುದು.

ಪ್ರಜಾಪ್ರಭುತ್ವದಲ್ಲಿ ದೇಶದ ನಾಗರಿಕರೇ ಸಾರ್ವಭೌಮರಾದ್ದರಿಂದ ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿನ ವ್ಯಕ್ತಿಗಳನ್ನು ಯಾವುದೇ ಷರತ್ತುಗಳು ಮತ್ತು ಯಾರದೇ ಅನುಮತಿಗಳ ಅಗತ್ಯವಿಲ್ಲದೆ ಘನತೆಯಿಂದ, ಜವಾವಾಬ್ದಾರಿಯುತವಾಗಿ ಟೀಕಿಸುವ, ವಿಮರ್ಶಿಸುವ ಮತ್ತು ಅವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳುವ ಅಧಿಕಾರವನ್ನು ಎಲ್ಲ ನಾಗರಿಕರಿಕರಿಗೂ ಸಂವಿಧಾನಬದ್ಧ ಹಕ್ಕನ್ನಾಗಿಸುವುದು. ಅಲ್ಲೂ ಯಾವುದೇ ದೌರ್ಜನ್ಯ, ಯಾರಿಂದಲೇ ನಡೆದರೂ ದಂಡಿಸುವ ಶಿಕ್ಷಿಸುವ ಅಧಿಕಾರ ನ್ಯಾಯಾಲಯಗಳಿಗೆ ಇದ್ದೇ ಇದೆ.


Avinash Das
@avinashonly
आने वाली पीढ़ी पूछेगी कि आपके दौर में मीडिया वाले क्या कर रहे थे?
मै बताऊंगा - वो अपने कलम से सरकार के पजामें में नारा डाल रहे थे।
Translate Tweet
1:10 PM · 12 Jan 20 · Twitter for Android
990 Retweets 3,655 Likes

"ನಿಮ್ಮ ಕಾಲದಲ್ಲಿ ಮಾಧ್ಯಮಗಳವರು ಏನು ಮಾಡುತ್ತಿದ್ದರು ಎಂದು ಮುಂದಿನ ಪೀಳಿಗೆ ಪ್ರಶ್ನಿಸಿದರೆ ನಾನು ಹೇಳುತ್ತೇನೆ, ಅವರು ತಮ್ಮ ಲೇಖನಿಗಳಿಂದ ಸರಕಾರದ ಪೈಜಾಮದ ಲಾಡಿ ಹಾಕುತ್ತಿದ್ದರೆಂದು"

– ಪಿ ಮಹಮ್ಮದ್ ಕಾರ್ಟೂನಿಸ್ಟ್
(ಅವಿನಾಶ್ ದಾಸ್ ಎಂಬವರ ಇಲ್ಲಿ ಲಗತ್ತಿಸಿದ ಟ್ವೀಟ್ ಉಲ್ಲೇಖಿಸುತ್ತಾ)



ಜನವರಿ 26 ರಂದು ಗಣತಂತ್ರ ಸಂವಿಧಾನವನ್ನು ಅಂಗೀಕರಿಸಿ 70 ವರ್ಷಗಳಾಗುತ್ತಿವೆ. ಭಾರತ ಸಂವಿಧಾನಿಕ ಯೋಜನೆಯ ಪ್ರಕಾರ ಒಂದು ಸಂಸದೀಯ ಪ್ರಜಾಪ್ರಭುತ್ವವಾಗಿದೆ ಮತ್ತು ಸಶಸ್ತ್ರ ಪಡೆಗಳು ನಾಗರಿಕ ಕಾರ್ಯಾಂಗದ ಅಡಿಯಲ್ಲಿ ದೇಶದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸಲು ಬದ್ಧವಾಗಿರುವ ಒಂದು ವೃತ್ತಿಪರ ಪಡೆಯಾಗಿ ಸೇವೆ ಸಲ್ಲಿಸಬೇಕು. ಆದರೆ ಇದಕ್ಕೆ ಚ್ಯುತಿ ತರುವಂತಹ ಹೇಳಿಕೆಗಳು ಕೆಲವು ಸೇನಾಮುಖಂಡರುಗಳಿಂದ ಬರುತ್ತಿದೆ. ಇದಕ್ಕೆ ಮೋದಿ ಸರಕಾರದ ಪ್ರಜ್ಞಾಪೂರ್ವಕ ಪ್ರೋತ್ಸಾಹ ಇರುವಂತೆ ಕಾಣುತ್ತದೆ. ಇದು ಗಣತಂತ್ರಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯದ ಲಕ್ಷಣ. ಸಶಸ್ತ್ರ ಪಡೆಗಳ ಮುಖಂಡರಿಂದ ರಾಜಕೀಯ ವಿಷಯಗಳಲ್ಲಿ ಅಧಿಕಾರಯುಕ್ತ ಹೇಳಿಕೆಗಳು ತಕ್ಷಣವೇ ನಿಲ್ಲಬೇಕು.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಸೇನಾಪಡೆಯನ್ನು ರಾಜಕೀಯಕರಣಗೊಳಿಸಬೇಡಿ

–ಪ್ರಕಾಶ ಕಾರಟ್

ಸಶಸ್ತ್ರ ಪಡೆಗಳ ಕೆಲವು ಮುಖಂಡರ ಸಾರ್ವಜನಿಕ ಟಿಪ್ಪಣಿಗಳು ಸಶಸ್ತ್ರ ಪಡೆಗಳ ಕಟ್ಟುನಿಟ್ಟಾದ ವೃತ್ತಿಪರ ಮತ್ತು ರಾಜಕೀಯೇತರ ಪಾತ್ರಕ್ಕೆ ಚ್ಯುತಿ ತರುವಂತವುಗಳು. ಹೀಗಾಗುತ್ತಿರಲು ಕಾರಣ ಮೋದಿ ಸರಕಾರ ರಕ್ಷಣಾ ಮಂತ್ರಾಲಯದ ಉನ್ನತ ಪೀಠಸ್ಥರು ತನ್ನ ಹಿಂದುತ್ವ ರಾಷ್ಟ್ರವಾದಿ ಕಣ್ಣೋಟಕ್ಕೆ ಅನುಗುಣವಾದ ಅಭಿಪ್ರಾಯಗಳನ್ನು ತೇಲಿ ಬಿಡಲು ಪ್ರಜ್ಞಾಪೂರ್ವಕವಾಗಿ ಪ್ರೋತ್ಸಾಹಿಸುತ್ತಿರುವಂತೆ ಕಾಣುತ್ತದೆ.

ಜನರಲ್ ಬಿಪಿನ್ ರಾವತ್, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ(ಸಿಡಿಎಸ್) ಹುದ್ದೆಯನ್ನು ವಹಿಸಿಕೊಳ್ಳುವ ಕೆಲವು ದಿನಗಳ ಹಿಂದೆ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಪ್ರತಿಭಟನೆಗಳ ಬಗ್ಗೆ ಉದ್ರೇಕಕಾರಿ ಹೇಳಿಕೆಯೊಂದನ್ನು ಕೊಟ್ಟರು. "ಮುಖಂಡರು ಎಂದರೆ ಜನಗಳನ್ನು ಸೂಕ್ತವಲ್ಲದ ದಿಕ್ಕುಗಳಲ್ಲಿ ನೇತೃತ್ವ ನಿಡುವವರು ಅಲ್ಲ.. .. ಬಹಳಷ್ಟು ವಿಶ್ವವಿದ್ಯಾಲಯ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ನೋಡುತ್ತಿದ್ದೇವೆ–ನಗರಗಳಲ್ಲಿ, ಪಟ್ಟಣಗಳಲ್ಲಿ ಅವರು ಜನಗುಂಪುಗಳ ದಾಂಧಲೆ, ಹಿಂಸಾಚಾರಗಳಿಗೆ ನೇತೃತ್ವ ನೀಡುತ್ತಿದ್ದಾರೆ–ಇದು ನಾಯಕತ್ವವಲ್ಲ" ಎಂದು ಅವರು ಹೇಳಿದರು. ಇಂತಹ ಒಂದು ಆಂತರಿಕ ರಾಜಕೀಯ ಪ್ರಶ್ನೆಯ ಮೇಲಿನ ಹೇಳಿಕೆ, ಈ ಮೊದಲು ವಿವಾದಾಸ್ಪದ ಹೇಳಿಕೆಗಳನ್ನು ಕೊಟ್ಟಿದ್ದ ಸೇನಾಮುಖ್ಯಸ್ಥರಿಂದ ಬಂತು. ಜನರಲ್ ರಾವತ್‌ರಿಗೆ ಅವರಿಗಿಂತ ಹೆಚ್ಚಿನ ಸೇವಾಹಿರಿತನ ಇದ್ದ ಇಬ್ಬರು ಸೇನಾಧಿಕಾರಿಗಳನ್ನು ಬದಿಗೊತ್ತಿ ಸೇನಾಮುಖ್ಯಸ್ಥರನ್ನಾಗಿ ಬಡ್ತಿ ನೀಡಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರಕಾರ ಎಂದೂ ಆತನ ರಾಜಕೀಯ ಟಿಪ್ಪಣಿಗಳನ್ನು ಟೀಕಿಸುವ, ಅಥವ ಆತನ ಮೇಲೆ ಕಡಿವಾಣ ಹಾಕುವ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ.

ಜನರಲ್ ರಾವತ್ ಪ್ರಸಂಗ ಒಂದು ಅಪವಾದವಷ್ಟೇ ಆಗಿಲ್ಲ ಎಂಬುದು ಆತನ ಹೇಳಿಕೆಯ ಕೆಲವು ದಿನಗಳ ಮೊದಲು ಇನ್ನೊಬ್ಬ ಸೇನಾಧಿಕಾರಿ ಸಿಎಎ ವಿವಾದದಲ್ಲಿ ಕೈಯಾಡಿಸಿದ ರೀತಿಯಲ್ಲಿ ಸ್ಪಷ್ಟವಾಗಿತ್ತು. ಪೂರ್ವ ಕಮಾಂಡಿನ ಸೇನಾ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಅನಿಲ್ ಚೌಹಾಣ್ "ಪ್ರಸಕ್ತ ಸರಕಾರ ದೀರ್ಘ ಕಾಲದಿಂದ ಮಾಡದೇ ಉಳಿದಿರುವ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಉತ್ಸುಕವಾಗಿದೆ" ಎಂದು ಡಿಸೆಂಬರ್ 14, 2019ರಂದು ಕೊಲ್ಕತಾದಲ್ಲಿ ಹೇಳಿದರು. ಸಿಎಎ ಯನ್ನು "ಒಂದೆರಡು ಈಶಾನ್ಯ ರಾಜ್ಯಗಳ ಸಮ್ಮತಿ ಇಲ್ಲದಿದ್ದರೂ" ಪಾಸು ಮಾಡಿದ್ದಾರೆ ಎಂದೂ ಅವರು ಸೇರಿಸಿದರು.

ಸಿಎಎ ಸಂವಿಧಾನದ ಅಡಿಯಲ್ಲಿ ಪೌರತ್ವದ ಮೂಲ ಪರಿಕಲ್ಪನೆಯ ಮೇಲೆಯೇ ಮಾಡಿರುವ ಒಂದು ಪ್ರಹಾರ ಎಂದು ಕಾಣುತ್ತಿರುವಾಗ, ಒಬ್ಬ ಉನ್ನತ ಸೇನಾಧಿಕಾರಿ ಅದನ್ನು ಸಮರ್ಥಿಸಿಕೊಳ್ಳಲು ಬರುವುದು ದುರದೃಷ್ಟಕರ ಸಂಗತಿ.

ಹೊಸದಾಗಿ ನೇಮಿಸಲ್ಪಟ್ಟಿರುವ ಸೇನಾ ಮುಖ್ಯಸ್ಥ ಜನರಲ್ ಎಂ ಎಂ ನರವಣೆ ಒಂದು ಮಹತ್ವದ ಹೇಳಿಕೆ ನೀಡಿದರು; ಸೇನಾದಿನದ ಮುನ್ನಾದಿನ ಜನವರಿ 11, 2020ರಂದು ತನ್ನ ಪತ್ರಿಕಾಗೋಷ್ಠಿಯಲ್ಲಿ ಸಶಸ್ತ್ರ ಪಡೆಗಳ ವಿಧೇಯತೆ ಯಾವುದರ ಮೇಲೆ ಪ್ರತಿಜ್ಞೆ ಕೈಗೊಳ್ಳಲಾಗಿದೆಯೋ ಅದಕ್ಕೇ ಮಾತ್ರ ಇರುತ್ತದೆ ಎಂದರು. ಇದರರ್ಥ "ಸಂವಿಧಾನದ ಪೀಠಿಕೆಯಲ್ಲಿ ಪ್ರತಿಷ್ಠಾಪಿಸಿರುವ ಮೂಲ ಮೌಲ್ಯಗಳಿಗೆ, ಅರ್ಥಾತ್ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಕ್ಕೆ" ಎಂದು.

ಈ ಮಾದರಿ ಸಂದೇಶವನ್ನು ನೀಡಿದ ಕೆಲವು ದಿನಗಳ ನಂತರ, ಸೇನಾ ದಿನದಂದು ಭಾಷಣ ಮಾಡುತ್ತಾ ತನಗೆ ವಿಧಿಸಿದ ದಾರಿಯಿಂದ ಸರಿದು "ಕಲಮು 370ರ ರದ್ಧತಿ ಒಂದು ಚಾರಿತ್ರಿಕ ಹೆಜ್ಜೆ", ಇದು "ಜಮ್ಮು ಮತ್ತು ಕಾಶ್ಮೀರವನ್ನು ಮುಖ್ಯಧಾರೆಯೊಂದಿಗೆ ಸಮಗ್ರಗೊಳಿಸಲು ನೆರವಾಗುತ್ತದೆ" ಎಂದರು. ಇಲ್ಲಿಯೂ ಮತ್ತೆ ಸೇನಾಧಿಕಾರಿ ರಾಜಕೀಯ ಜಲಧಾರೆಯಲ್ಲಿ ಕಾಲಿಟ್ಟಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಒಳಗೆ ಮತ್ತು ಹೊರಗೆ ಜನರು ಕಲಮು 370ರ ರದ್ಧತಿಯನ್ನು ಸಂವಿಧಾನದ ಜಾತ್ಯತೀತ ಮತ್ತು ಒಕ್ಕೂಟ ಸ್ವರೂಪದ ಮೇಲೊಂದು ಪ್ರಹಾರ ಎಂದು ಕಾಣುತ್ತಿದ್ದಾರೆ. ವಿಷಯ ಈಗ ಸುಪ್ರಿಂ ಕೋರ್ಟಿನ ಮುಂದಿದೆ, ಅದು ಇದರ ಸಂವಿಧಾನ ಬದ್ಧತೆ ಮತ್ತು ಕಾನೂನುಬದ್ಧತೆಯನ್ನು ಘೋಷಿಸಬೇಕಾಗಿದೆ. ಅಧಿಕಾರಸ್ಥ ಮುಖಂಡರ ಮೇಲೆ ಎಂತಹ ಒತ್ತಡವಿದೆಯೆಂದರೆ, ಅವರು ಇಂತಹ ಸಾರ್ವಜನಿಕ ಅಧಿಕಾರಯುಕ್ತ ಹೇಳಿಕೆಗಳನ್ನು ಕೊಡಬೇಕಾಗುತ್ತದೆ ಎಂದು ಭಾವಿಸುತ್ತಿರುವುದು ಸ್ವಯಂವೇದ್ಯ.

ಜನವರಿ 26 ರಂದು ಗಣತಂತ್ರ ಸಂವಿಧಾನವನ್ನು ಅಂಗೀಕರಿಸಿ 70 ವರ್ಷಗಳಾಗುತ್ತಿವೆ. ಭಾರತ ಸಂವಿಧಾನಿಕ ಯೋಜನೆಯ ಪ್ರಕಾರ ಒಂದು ಸಂಸದೀಯ ಪ್ರಜಾಪ್ರಭುತ್ವವಾಗಿದೆ ಮತ್ತು ಸಶಸ್ತ್ರ ಪಡೆಗಳು ನಾಗರಿಕ ಕಾರ್ಯಾಂಗದ ಅಡಿಯಲ್ಲಿ ದೇಶದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸಲು ಬದ್ಧವಾಗಿರುವ ಒಂದು ವೃತ್ತಿಪರ ಪಡೆಯಾಗಿ ಸೇವೆ ಸಲ್ಲಿಸಬೇಕು.

ಸಶಸ್ತ್ರ ಪಡೆಗಳಿಗೆ ವಿಧಿಸಿರುವ ಈ ಸಂವಿಧಾನಿಕ ಪಾತ್ರವನ್ನು ಶಿಥಿಲಗೊಳಿಸುವುದು ಮತ್ತು ರಾಜಕೀಯಕರಣಗೊಳಿಸುವುದು ಗಣತಂತ್ರಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯದ ಲಕ್ಷಣ. ಸಶಸ್ತ್ರ ಪಡೆಗಳ ಪಾತ್ರ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಪ್ರಜಾಸತ್ತಾತ್ಮಕ ತಪಾಸಣೆಗೆ ಒಳಗಾಗಬೇಕು. ಸಶಸ್ತ್ರ ಪಡೆಗಳ ಮುಖಂಡರಿಂದ ರಾಜಕೀಯ ವಿಷಯಗಳಲ್ಲಿ ಅಧಿಕಾರಯುಕ್ತ ಹೇಳಿಕೆಗಳು ತಕ್ಷಣವೇ ನಿಲ್ಲಬೇಕು.

"ಎನ್‌ಪಿಆರ್ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ- ಎನ್‌ಆರ್‌ಸಿಗೆ ಕಾಗದಪತ್ರ ತೋರಿಸುವುದಿಲ್ಲ"

ಪುಟ 2 ರಿಂದ

ಸೇರ್ಪಡೆಯಾಗುವಾಗ ಅಲ್ಲಿಯ ಜನತೆಗೆ ನೀಡಿರುವ ಆಶ್ವಾಸನೆಯನ್ನು ಗೌರವಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಪುನಃ ನೆಲೆಗೊಳಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ. ಮೂವರು ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ ಹೆಚ್ಚಿನ ರಾಜಕೀಯ ಮುಖಂಡರನ್ನು ಮತ್ತು ಸಾವಿರಾರು ಕಾರ್ಯಕರ್ತರನ್ನು ಸ್ಥಾನಬದ್ಧತೆಗೊಳಪಡಿಸಿ ನಾಲ್ಕು ತಿಂಗಳುಗಳು ದಾಟಿವೆ. ಅವರನ್ನು ಕೆಲವರನ್ನು ಕುಖ್ಯಾತ ಸಾರ್ವಜನಿಕ ಭದ್ರತಾ ಕಾಯ್ದೆಯ ಅಡಿಯಲ್ಲಿ ಸ್ಥಾನಭದ್ಧತೆಯಲ್ಲಿಡಲಾಗಿದೆ. ಇವರೆಲ್ಲರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಸಂಪರ್ಕ ಮತ್ತು ಸಾರ್ವಜನಿಕ ಸಾರಿಗೆಯ ಮೇಲಿನ ನಿರ್ಬಂಧಗಳು, ಕೆಲವನ್ನು ಸಡಿಲಿಸಲಾಗಿದೆ ಎಂಬ ಪ್ರಕಟಣೆಯ ನಂತರವೂ ಮುಂದುವರೆಯುತ್ತಿವೆ. ಜಮ್ಮು ಮತ್ತು ಕಾಶ್ಮೀರದ ಅರ್ಥವ್ಯವಸ್ಥೆಯ ಮೇಲೆ ಮತ್ತು ಜನಗಳ ದೈನಂದಿನ ಬದುಕಿನ ಮೇಲೆ ವಿನಾಶಕಾರೀ ಪ್ರಭಾವ ಬಿದ್ದಿದೆ. ಹೆಚ್ಚುತ್ತಿರುವ ಸಂಕಟಗಳು ಮತ್ತು ಮತ್ತು ಸಾಮಾನ್ಯ ಜೀವನ ಈಗಲೂ ಅಸ್ತವ್ಯಸ್ತಗೊಂಡಿರುವುದು ಇದನ್ನು ತೋರಿಸುತ್ತದೆ.

ಈ ರಾಜ್ಯದ ಮೇಲೆ ಹೇರಿರುವ ಎಲ್ಲ ನಿರ್ಬಂಧಗಳನ್ನು ತೆಗೆಯಬೇಕು, ಸ್ಥಾನಬದ್ಧತೆಯಲ್ಲಿಟ್ಟಿರುವ ಎಲ್ಲ ರಾಜಕೀಯ ಮುಖಂಡರನ್ನು ಮತ್ತು ಇತರರನ್ನು ಬಿಡುಗಡೆ ಮಾಡಬೇಕು, ಇಂಟರ್ನೆಟ್ ಮತ್ತು ಸಂಪರ್ಕದ ಮೇಲಿನ ನಿರ್ಬಂಧವನ್ನು ತೆಗೆಯಬೇಕು ಮತ್ತು ಸಂವಿಧಾನ ಭರವಸೆ ನೀಡಿರುವ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಮತ್ತೆ ನೆಲೆಗೊಳಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಆರ್ಥಿಕ ಸಂಕಟ –ಮೋದಿ ಸರಕಾರದ ಆರ್ಥಿಕ ಧೋರಣೆಗಳಿಂದಾಗಿಯೇ

ಅರ್ಥ ವ್ಯವಸ್ಥೆ ಸ್ಥಗಿತತೆಗೆ ಇಳಿದೇ ಬಿಡುತ್ತಿರಲು, ಜತೆಗೆ ಜಿಡಿಪಿ ಸತತವಾಗಿ ಇಳಿಯುತ್ತಿರುವಂತಾಗಿರುವುದು ಮೋದಿ ಸರಕಾರ ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳಿಂದಾಗಿಯೇ ಎಂದು ಕೇಂದ್ರ ಸಮಿತಿ ಖಂಡಿಸಿದೆ. ಇದರ ಫಲಿತಾಂಶವಾಗಿ ನಮ್ಮ ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಹೊರೆಗಳು ಬಿದ್ದಿವೆ, ಕೃಷಿ ಸಂಕಟವನ್ನು ಆಳಗೊಂಡಿದೆ, ಬೆಲೆಗಳಲ್ಲಿ ತೀವ್ರ ಏರಿಕೆಯಾಗಿದೆ (ಚಿಲ್ಲರೆ ಹಣದುಬ್ಬರ 6.35%–ಇದು ಕಳೆದ 5ವರ್ಷಗಳಲ್ಲಿ ಅತೀ ಹೆಚ್ಚು), ನಿರುದ್ಯೋಗ ಹೆಚ್ಚುತ್ತಿದೆ(ಕಳೆದ 50 ವರ್ಷಗಳಲ್ಲಿ ಅತೀ ಹೆಚ್ಚು), ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾ ಘಟಕಗಳು ಮುಚ್ಚುತ್ತಿವೆ, ಮತ್ತು ಲಕ್ಷಾಂತರ ಕಾರ್ಮಿಕರ ಲೇ–ಆಫ್ ಆಗುತ್ತಿದೆ.

ನಮ್ಮ ಬಹುಪಾಲು ಜನಗಳ ಖರೀದಿ ಸಾಮರ್ಥ್ಯದಲ್ಲಿ ತೀವ್ರ ಇಳಿಕೆಯಾಗಿರುವುದರಿಂದಾಗಿ ಈ ಆರ್ಥಿಕ ಬಿಕ್ಕಟ್ಟು ಉಂಟಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಗ್ರಾಹಕರು ಮಾಡುವ ವೆಚ್ಚದ ಪ್ರವಾಹದಲ್ಲಿ 8.8%ದಷ್ಟು ಇಳಿಕೆಯಾಗಿದೆ. ಅರ್ಥವ್ಯವಸ್ಥೆ ನೆಟ್ಟಗಾಗಬೇಕಾದರೆ ಅದಕ್ಕಿರುವ ಪರಿಹಾರವೆಂದರೆ ಜನಗಳ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವುದು, ಈ ಮೂಲಕ ಆಂತರಿಕ ಬೇಡಿಕೆಗಳ ಮಟ್ಟವನ್ನು ಹೆಚ್ಚಿಸುವುದು, ಇದರಿಂದ ಮುಚ್ಚಿದ ಕಾರ್ಖಾನೆಗಳನ್ನೆಲ್ಲ ತೆರೆಯುವಂತಾಗುತ್ತದೆ.

ಇದರ ಬದಲು ಮೋದಿ ಸರಕಾರ ಕಾರ್ಪೊರೇಟ್ ತೆರಿಗೆಗಳನ್ನು ಇಳಿಸಿ ಶ್ರೀಮಂತರಿಗೆ ಭಾರೀ ರಿಯಾಯ್ತಿಗಳನ್ನು ಕೊಡುತ್ತಿದೆ. ಅದರ ಬದಲು ಈ 2.5ಲಕ್ಷ ಕೋಟಿ ರೂ.ಗಳ ಪ್ಯಾಕೇಜನ್ನು ಸಾರ್ವಜನಿಕ ಹೂಡಿಕೆಗಳಿಗೆ ಬಳಸಿದರೆ, ನಮ್ಮ ಬಹು ಆವಶ್ಯಕವಾಗಿರುವ ಮೂಲರಚನೆಗಳನ್ನು ಕಟ್ಟಬಹುದಿತ್ತು, ಅದರಿಂದ ಲಕ್ಷಾಂತರ ಹೊಸ ಕೆಲಸಗಳನ್ನು ಸೃಷ್ಟಿಸಬಹುದಿತ್ತು. ಅದು ನಮ್ಮ ಹತಾಶ ಯುವಜನತೆಗೆ ಉದ್ಯೋಗಗಳನ್ನು ಒದಗಿಸುತ್ತಿತ್ತು. ಅವರು ತಮ್ಮ ಆದಾಯಗಳನ್ನು ಖರ್ಚು ಮಾಡಲಾರಂಭಿಸಿದಂತೆ, ಆಂತರಿಕ ಬೇಡಿಕೆ ಹೆಚ್ಚಿ ಅರ್ಥವ್ಯವಸ್ಥೆಯನ್ನು ನೆಟ್ಟಗಾಗಿಸಲು ಬೇಕಾದ ಹುರುಪನ್ನು ನೀಡುತ್ತಿತ್ತು.

ಆದರೆ ಮೋದಿ ಸರಕಾರ ದೇಶಿ–ವಿದೇಶಿ ಕಾರ್ಪೊರೇಟ್‌ಗಳ ಲಾಭಗಳನ್ನು ಗರಿಷ್ಟಗೊಳಿಸಲು ಹೆಚ್ಚಿನ ದಾರಿಗಳನ್ನು ಕಲ್ಪಿಸಲು ಬದ್ಧವಾಗಿದೆಯೇ ಹೊರತು ಜನಪರವಾದ ಪರ್ಯಾಯವನ್ನು ಅದು ತಿರಸ್ಕರಿಸುತ್ತದೆ. ಈ ಮೂಲಕ ನಮ್ಮ ಬಹುಪಾಲು ಜನಗಳು ಸಂಕಟದಲ್ಲಿ ನರಳುವಂತೆ ಮಾಡುತ್ತಿದೆ.

ಕೇರಳದ ವಿರುದ್ಧ ತಾರತಮ್ಯ ನಿಲುವು

ಕೇಂದ್ರ ಸರಕಾರ ಕೇರಳದ ಹಣಕಾಸು ಅಗತ್ಯಗಳ ಬಗ್ಗೆ ಒಂದು ತಾರತಮ್ಯದ ಮತ್ತು ನಕಾರಾತ್ಮಕ ನಿಲುವನ್ನು ತಳೆಯುತ್ತಿದೆ. ಕೇರಳ 2019–20ಕ್ಕೆ ರೂ.24,915 ಕೋಟಿ ಸಾರ್ವಜನಿಕ ಸಾಲಕ್ಕೆ ಅರ್ಹವಾಗಿದೆ. ಕೇಂದ್ರ ಸರಕಾರ ಇದನ್ನು 2016–17ರಲ್ಲಿ ಸಾರ್ವಜನಿಕ ಖಾತೆ ಸಾಲ ಹೆಚ್ಚಿದೆ, ಅದನ್ನು ಸರಿಹೊಂದಿಸಬೇಕಾಗಿದೆ ಎನ್ನುತ್ತ ಏಕಪಕ್ಷೀಯವಾಗಿ ರೂ.16,602 ಕೋಟಿಗೆ ಇಳಿಸಿದೆ,

ಡಿಸೆಂಬರ್‌ನಲ್ಲಿ ತೆರಬೇಕಾದ 1600 ಕೋಟಿ ರೂ.ಗಳ ಜಿಎಸ್‌ಟಿ ಪರಿಹಾರವನ್ನು ತೆತ್ತಿಲ್ಲ. ಮನರೇಗ ಸ್ಕೀಮಿನಲ್ಲಿ 1215 ಕೋಟಿ ರೂ. ಬಾಕಿ ಮತ್ತು ಭತ್ತ ಖರೀದಿಗೆ 1035 ಕೋಟಿ ರೂ.ಗಳನ್ನೂ ಅದು ಕೊಡಬೇಕಾಗಿದೆ. ನೈಸರ್ಗಿಕ ವಿಪತ್ತು ಪರಿಹಾರಕ್ಕೆ ರೂ.2100 ಕೋಟಿ ರೂ. ದಾವೆಯನ್ನು ಸಲ್ಲಿಸಿದ್ದರೂ ಯಾವುದೇ ಹಣ ನೀಡದೆ ಕೇರಳವನ್ನು ವಂಚಿಸಲಾಗಿದೆ.

ಕೇಂದ್ರ ತನ್ನ ಈ ತಾರತಮ್ಯದ ನಿಲುವನ್ನು ಕೊನೆಗೊಳಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ. ವಿವಿಧ ಬಾಬ್ತುಗಳಲ್ಲಿ ಕೇರಳಕ್ಕೆ ಸಲ್ಲಬೇಕಾದ ನಿಧಿಗಳು ಸಿಗಬೇಕು. 2019ರಲ್ಲಿ ಗಂಭೀರ ಪ್ರವಾಹವನ್ನು ಅನುಭವಿಸಿರುವ ಕೇರಳಕ್ಕೆ ನೈಸರ್ಗಿಕ ವಿಪತ್ತು ಪರಿಹಾರ ನಿಧಿಯಿಂದಲೂ ಹಣ ಒದಗಿಸಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.



‘ಬೊಲ್ಸೆನಾರೊ ಭಾರತಕ್ಕೆ ಬರುವುದು ಬೇಡ!’

ಆರೆಸ್ಸೆಸ್ ಮತ್ತು ಬಿಜೆಪಿಗಳ ಅವರ ಜೊತೆಗೆ ಸೈದ್ಧಾಂತಿಕ ಬಾಂಧವ್ಯ ಒಂದೇ ಬೊಲ್ಸೆನಾರೊ ಅವರನ್ನು ಆಹ್ವಾನಿಸಲು ಇರುವ ಏಕಮಾತ್ರ ಕಾರಣ. ಮಹಿಳಾ–ದ್ವೇಷ, ಸರ್ವಾಧಿಕಾರ, ಬಹುತ್ವದ ಕುರಿತು ದ್ವೇಷ ಮತ್ತು ಅಸಹಿಷ್ಣುತೆ – ಇವು ಆರೆಸ್ಸೆಸ್–ಬಿಜೆಪಿ ಮತ್ತು ಬೊಲ್ಸೊನಾರೊ ಅವರುಗಳಿಗೆ ಇರುವ ಸಮಾನ ಗುಣಗಳು. ಇದು ಬಿಟ್ಟರೆ ಬೊಲ್ಸೆನಾರೊರನ್ನು ಆಹ್ವಾನಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಪ್ರಜಾಪ್ರಭುತ್ವ ಮತ್ತು ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲರೂ ದೃಢವಾಗಿ ಮತ್ತು ಗಟ್ಟಿಯಾಗಿ ‘ಬೊಲ್ಸೆನಾರೊ ಭಾರತಕ್ಕೆ ಬರುವುದು ಬೇಡ!’ ಎಂದು ಘೋಷಿಸಬೇಕಾಗಿದೆ.

–ಪ್ರಕಾಶ ಕಾರಟ್

ಬ್ರೆಜಿಲ್ ಅಧ್ಯಕ್ಷರಾದ ಜೈರ್ ಬೊಲ್ಸೆನಾರೊ ಭಾರತದ ಅಧಿಕೃತ ಭೇಟಿ ಕೈಗೊಳ್ಳಲಿದ್ದು ಮೋದಿ ಸರಕಾರದ ಆಹ್ವಾನದ ಮೇರೆಗೆ ಅವರು ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿರುತ್ತಾರೆ. ಸಂವಿಧಾನದ 70ನೇ ವಾರ್ಷಿಕ ಆಚರಿಸುತ್ತಿರುವ ಭಾರತದ ಜನತೆಗೆ ಇದೊಂದು ಅವಮಾನದ ವಿಷಯ. ಏಕೆಂದರೆ ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಆಶಯಗಳಿಗೆ ತದ್ವಿರುದ್ಧವಾದ ವ್ಯಕ್ತಿ ಈ ಬೊಲ್ಸೆನಾರೊ.

ಬೊಲ್ಸೆನಾರೊ ಬ್ರೆಜಿಲಿನ ಬುಡಕಟ್ಟು ಜನರ ಮೇಲೆ ಸದಾ ಬೈಗಳು ಸುರಿಯುವ, ‘ಬಿಳಿಯರ ಶ್ರೇಷ್ಠತೆ’ಯ ಕುರಿತು ಹೆಮ್ಮೆ ಪಡುವ ಜನಾಂಗವಾದಿ. ಬುಡಕಟ್ಟು ಜನರು ವಾಸಿಸುವ ‘ಮೀಸಲು ಪ್ರದೇಶ’ಗಳು ಕೃಷಿ–ಉದ್ಯಮ ಮತ್ತು ಬಹುರಾಷ್ಟ್ರೀಯ ಗಣಿ ಹಿತಾಸಕ್ತಿಗಳಿಗೆ ಒಂದು ತೊಡಕು. ಆದ್ದರಿಂದ ಅವರನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕೆಂದು ಖುಲ್ಲಂ ಖುಲ್ಲಾ ಹೇಳಿದ್ದಾರೆ. ಅವರು ಅಧ್ಯಕ್ಷರಾದ ಮೇಲೆ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡದ್ದು ಇಮ್ಮಡಿಯಾಗಿದೆ. ಅರಣ್ಯ ಕಾಯಿದೆಯನ್ನು ದುರ್ಬಲಗೊಳಿಸಿ ಮತ್ತು ನ್ಯಾಯ ಇಲಾಖೆಯ ಬುಡಕಟ್ಟು ಜನರ ವಿಷಯದ ಕಚೇರಿಯ ಬುಡಕಟ್ಟು ಜನರ ಪ್ರದೇಶಗಳ ನಿಬಂಧನೆಗಳ ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಕಿತ್ತು ಹಾಕಿ ಅಮೆಜಾನ್ ಅರಣ್ಯ ಸಂಪತ್ತಿನ ಲೂಟಿಗೆ ಕುಮ್ಮಕ್ಕು ಕೊಟ್ಟಿದ್ದಾರೆ. ಉತ್ತರ ಅಮೆರಿಕದಲ್ಲಿ ‘ರೆಡ್ ಇಂಡಿಯನ್’ ಎಂದು ಕರೆಯುವ ಬುಡಕಟ್ಟು ಜನರ ನರಮೇಧ ಮಾಡಿದಂತೆ, ಮಾಡಲು ಬ್ರೆಜಿಲಿನ ಸೈನ್ಯಕ್ಕೆ ಸಾಧ್ಯವಾಗದ್ದಕ್ಕೆ ಅವರು ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ.

ಬೊಲ್ಸೆನಾರೊ ಮಹಿಳೆಯರನ್ನು ಮತ್ತು ಸಮಾಜಕ್ಕೆ ಅವರ ಕೊಡುಗೆಯನ್ನು ಕೀಳಾಗಿ ಕಾಣುವ ಮಹಿಳಾ–ದ್ವೇಷಿ. ಪಾರ್ಲಿಮೆಂಟಿನ ಮಹಿಳಾ ಸದಸ್ಯರನ್ನು ಖುಲ್ಲಂ ಖುಲ್ಲಾ ಯಾವುದೇ ನಾಚಿಕೆಯಿಲ್ಲದೆ ನಿಂದಿಸುವ ವ್ಯಕ್ತಿ.

ಬೊಲ್ಸೆನಾರೊ ಪ್ರಜಾಪ್ರಭುತ್ವವನ್ನು ಸಹ ಖುಲ್ಲಂ ಖುಲ್ಲಾ ವಿರೋಧಿಸುತ್ತಾರೆ. ಮತದಾನ ದೇಶದಲ್ಲಿ ಯಾವುದೇ ಬದಲಾವಣೆಯನ್ನು ತರುವುದಿಲ್ಲ. ಕೊಲೆಗಳು ಮತ್ತು ಆಂತರಿಕ ಯುದ್ಧದಿಂದ ಮಾತ್ರವೇ ಬದಲಾವಣೆ ಸಾಧ್ಯ ಎಂಬ ನುಡಿ ಮುತ್ತುಗಳನ್ನು ಉದುರಿಸಿದಾತ. ಪಾರ್ಲಿಮೆಂಟು, ಕೋರ್ಟು ಸೇರಿದಂತೆ ಯಾವುದೇ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ಆತನಿಗೆ ಯಾವುದೇ ಗೌರವವಿಲ್ಲ.

ಬ್ರೆಜಿಲಿನಲ್ಲಿ 1964ರಲ್ಲಿ ಮಿಲಿಟರಿ ಅಧಿಕಾರ ವಹಿಸಿಕೊಂಡದ್ದು ಒಂದು ಕ್ಷಿಪ್ರಕ್ರಾಂತಿ ಮತ್ತು 1985ರ ವರೆಗಿನ ಅದರ ಆಳ್ವಿಕೆ ಸರ್ವಾಧಿಕಾರ ಅಲ್ಲ ಅಂತ ಆತನ ನಂಬಿಕೆ. ಆ ಭೀಕರ ಸರ್ವಾಧಿಕಾರ ಮತ್ತು ಅಮಾಯಕ ನಾಗರಿಕರಿಗೆ ಕೊಡಲಾದ ಚಿತ್ರಹಿಂಸೆಯನ್ನು ‘ಗತವೈಭವವೋ’ ಎಂಬಂತೆ ಅದನ್ನು ಹೊಗಳುತ್ತಾರೆ ಮತ್ತು ಅದರ ಮರುಕಳಿಕೆಗೆ ಆಶಿಸುತ್ತಾರೆ. ಬ್ರೆಜಿಲಿನಲ್ಲಿ ನಡೆದ ಮಿಲಿಟರಿ ಕ್ಷಿಪ್ರಕ್ರಾಂತಿಯ ಮಿಲಿಟರಿ ಸಂಭ್ರಮಾಚರಣೆಗೆ ಆತ ಆಜ್ಞೆ ಮಾಡಿದ್ದಾರೆ.

ಬೊಲ್ಸೆನಾರೊ ಫ್ಯಾಸಿಸ್ಟ್ ಸಿದ್ಧಾಂತಗಳ ಕುರಿತು ತನ್ನ ಒಲವನ್ನು ಪ್ರತಿಪಾದಿಸಲು ಯಾವುದೇ ಹಿಂಜರಿಕೆಯನ್ನು ತೋರಿಸಿಲ್ಲ. ನಾಜಿಯವರು ನಡೆಸಿದ ಯಹೂದಿಯರ ಹತ್ಯಾಕಾಂಡವನ್ನು ಕ್ಷಮಿಸಬಹುದು, ಆದರೆ ಕಮ್ಯುನಿಸ್ಟರು ಮತ್ತು ಅವರ ಎಡ–ಪಂಥೀಯರ ಜೀವ ಉಳಿಸಿದ್ದನ್ನು ಯಾವತ್ತೂ ಕ್ಷಮಿಸಲು ಸಾಧ್ಯವಿಲ್ಲ ಎಂದೂ ಹೇಳಲು ಹಿಂಜರಿದಿಲ್ಲ. ಎಲ್ಲಾ ‘ಎಡಪಂಥೀಯ’ರನ್ನು ಇಲ್ಲವಾಗಿಸಲು ಪಣ ತೊಟ್ಟಿರುವ ವ್ಯಕ್ತಿ ಈತ.

ಇಂತಹ ಸರ್ವಾಧಿಕಾರದ ಉತ್ಸಾಹಿ ಬೆಂಬಲಿಗ ನಮ್ಮ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಬಿಡಿ, ಯಾವುದೇ ರೀತಿಯಲ್ಲಿ ಭಾಗವಹಿಸುವುದು ಖಂಡನಾರ್ಹ.

ನಮ್ಮ ಗಣರಾಜ್ಯದ ಪ್ರಜಾಸತ್ತಾತ್ಮಕ, ಸೆಕ್ಯುಲರ್, ಸಮಾಜವಾದಿ ಸಂವಿಧಾನವನ್ನೂ, ಹಾಗೂ ಅದರ ವೈವಿಧ್ಯಮಯ, ಬಹು–ಸಂಸ್ಕೃತಿ, ಬಹು–ಧರ್ಮೀಯ, ಮತ್ತು ಬಹು–ಭಾಷಾ ಪರಂಪರೆಯ ಕುರಿತು ಸಂಭ್ರಮಿಸುವ ಗಣರಾಜ್ಯೋತ್ಸವದ ಸಮಾರಂಭದಲ್ಲಿ ಭಾಗವಹಿಸಲು ಯೋಗ್ಯ ವ್ಯಕ್ತಿ ಬೊಲ್ಸನಾರೊ ಅಲ್ಲವೇ ಅಲ್ಲ.

ಆರೆಸ್ಸೆಸ್ ಮತ್ತು ಬಿಜೆಪಿಗಳ ಸೈದ್ಧಾಂತಿಕ ಬಾಂಧವ್ಯ ಒಂದೇ ಬೊಲ್ಸೆನಾರೊ ಅವರನ್ನು ಆಹ್ವಾನಿಸಲು ಇರುವ ಏಕಮಾತ್ರ ಕಾರಣ. ಮಹಿಳಾ–ದ್ವೇಷ, ಸರ್ವಾಧಿಕಾರ, ಬಹುತ್ವದ ಕುರಿತು ದ್ವೇಷ ಮತ್ತು ಅಸಹಿಷ್ಣುತೆ – ಇವು ಆರೆಸ್ಸೆಸ್–ಬಿಜೆಪಿ ಮತ್ತು ಬೊಲ್ಸೊನಾರೊ ಅವರುಗಳಿಗೆ ಇರುವ ಸಮಾನ ಗುಣಗಳು. ಇದು ಬಿಟ್ಟರೆ ಬೊಲ್ಸೆನಾರೊರನ್ನು ಆಹ್ವಾನಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಪ್ರಜಾಪ್ರಭುತ್ವ ಮತ್ತು ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲರೂ ದೃಢವಾಗಿ ಮತ್ತು ಗಟ್ಟಿಯಾಗಿ ‘ಬೊಲ್ಸೆನಾರೊ ಭಾರತಕ್ಕೆ ಬರವುದು ಬೇಡ!’ ಎಂದು ಘೋಷಿಸಬೇಕಾಗಿದೆ.

ಕಲಬುರ್ಗಿಯಲ್ಲಿ ಸೀತಾರಾಂ ಯೆಚೂರಿ ಟೀಕೆ – ಹಿಂದೂ ರಾಷ್ಟ್ರದ ಹುನ್ನಾರ



ಪೌರತ್ವ ತಿದ್ದುಪಡಿ ಕಾಯಿದೆ ಸಿಎಎ, ರಾಷ್ಟ್ರೀಯ ಪೌರತ್ವ ನೋಂದಣಿ ಎನ್‌ಆರ್‌ಸಿ ವಿರೋಧಿಸಿ ಕಲಬುರಗಿಯಲ್ಲಿ ನಡೆಯುತ್ತಿರುವ ಸಮಾವೇಶದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಜನತೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.

‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಅಣತಿಯಂತೆ ಬಿಜೆಪಿಯು ಧಾರ್ಮಿಕ ಅಲ್ಪಸಂಖ್ಯಾತರನ್ನು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಪಟ್ಟಿಯಿಂದ ಉದ್ದೇಶ ಪೂರ್ವಕವಾಗಿ ಹೊರಗಿಟ್ಟು ದೇಶ ಬಿಡಿಸುವ ಮೂಲಕ ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವ ಹುನ್ನಾರ ಮಾಡುತ್ತಿದೆ’ ಎಂದು ಸಿಪಿಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಆರೋಪಿಸಿದರು.

ಕಲಬುರಗಿ ನಗರದಲ್ಲಿ 22 ಜನವರಿ 2020 ರಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎನ್‌ಆರ್‌ಸಿ, ಎನ್‌ಪಿಆರ್‌ಗೆ ಯಾವುದೇ ದಾಖಲೆಗಳನ್ನು ನೀಡದಿರುವ ಮೂಲಕ ಅಸಹಕಾರ ಚಳವಳಿ ನಡೆಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಜಾಗೃತಿ ಮೂಡಿಸಲು ಪಕ್ಷದಿಂದ ➚







ಸಂಪರ್ಕ ಸಂಕಲ್ಪ ಪ್ರಚಾರಾಂದೋಲನಕ್ಕೆ ಚಾಲನೆ ನಾಲ್ಕು ಪುಸ್ತಕಗಳ ಬಿಡುಗಡೆ

ಕಮ್ಯೂನಿಸ್ಟ್ ಪಕ್ಷದ ಶತಮಾನೋತ್ಸವ ಕಾರ್ಯಕ್ರಮ ಹಾಗೂ ಸರಕಾರದ ಸುಳ್ಳುಗಳನ್ನು ಮನೆ ಮನೆ ತಲುಪಿಸುವ ಸಂಪರ್ಕ ಸಂಕಲ್ಪ ಪ್ರಚಾರಾಂದೋಲನ ಕಾರ್ಯಕ್ರಮಕ್ಕೆ ಕೇರಳದ ಮಾಜಿ ಸಚಿವರಾದ ಎಂ.ಎ ಬೇಬಿ ಚಾಲನೆ ನೀಡಿದರು. ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ ಕೃತಿಯನ್ನು ಖ್ಯಾತ ಚಲನಚಿತ್ರ ನಿರ್ದೇಶಕರು ಎಂ.ಎಸ್. ಸತ್ಯು ಬಿಡುಗಡೆ ಮಾಡಿದರು. ಕಮ್ಯೂನಿಸ್ಟ್ ಪಕ್ಷ @100 ಸಾಹಿತಿ ಕೆ ಷರೀಫಾ ಬಿಡುಗಡೆ ಮಾಡಿದರು. ಪ್ರಚಾರ ಅಭಿಯಾನ ಮಾತುಕತೆ ಅಂಶಗಳ ಕೃತಿಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಮತ್ತು ಮೋದಿ – ಶಾ ಕಾರ್ಖಾನೆಯ ಹತ್ತು ಸುಳ್ಳುಗಳು ಕೃತಿಯನ್ನು ಸಿಪಿಐ(ಎಂ) ರಾಜ್ಯ ಮುಖಂಡ ಮೀನಾಕ್ಷಿ ಸುಂದರಂ ಬಿಡುಗಡೆ ಮಾಡಿದರು.

ಸಿಪಿಐ(ಎಂ) ಮುಖಂಡರಾದ ಕೆ.ಎನ್. ಉಮೇಶ್, ಪ್ರತಾಪ್ ಸಿಂಹ, ಎಚ್.ಎನ್ ಗೋಪಾಲಗೌಡ, ಗೌರಮ್ಮ, ಲೀಲಾವತಿ, ಕೆ.ಎಸ್. ವಿಮಲಾ, ಕೆ. ಶಂಕರ, ನಿತ್ಯಾನಂದಸ್ವಾಮಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯ ಮುಖಂಡ ಕೆ. ಪ್ರಕಾಶ್ ವಹಿಸಿದ್ದರು. ಗೋಪಾಲಕೃಷ್ಣ ಅರಳಹಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಖ್ಯಾತ ಗಾಯಕ ಜನಾರ್ಧನ (ಜನ್ನಿ) ತಂಡದವರು ಕ್ರಾಂತಿಗೀತೆ ಹಾಡಿದರು. ಬೆಂಗಳೂರು ಕ್ಯಾಂಪಸ್ ಥಿಯೇಟರ್ ತಂಡದವರು "ಕೆಂಪು ನದಿ" ನಾಟಕ ಪ್ರದರ್ಶನ ನಡೆಸಿದರು.



ಎಂ.ಎಸ್. ಸತ್ಯು, ಖ್ಯಾತ ಚಲನಚಿತ್ರ ನಿರ್ದೇಶಕರು





ಕೆ ಷರೀಫಾ, ಕವಯತ್ರಿ



ಎಂ.ಎ ಬೇಬಿ, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು

➘ ಮನೆ ಮನೆಗೆ ತೆರಳುವ ಅಭಿಯಾನ ನಡೆಸಲಿದ್ದೇವೆ. ನಮ್ಮ ವಿರೋಧ ಇರುವುದು ಎನ್‌ಆರ್‌ಸಿ, ಎನ್‌ಪಿಆರ್‌ಗೆ ಹೊರತು ಜನಗಣತಿಗಲ್ಲ' ಎಂದು ಸ್ಪಷ್ಟಪಡಿಸಿದರು.

"ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿ ಮಾಡುತ್ತಿಲ್ಲ. ದೇಶದ ಆರ್ಥಿಕ ವ್ಯವಸ್ಥೆ ಹಾಳಾಗಿದೆ. ಕೇಂದ್ರ ಸರ್ಕಾರದ ಪ್ರಕಾರ 4.8 ಜಿಡಿಪಿ ಇದೆ. ಆದರೆ, ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರಕಾರ ಭಾರತದ ಆರ್ಥಿಕ ವ್ಯವಸ್ಥೆ ಕುಸಿದಿದ್ದು, ಜಿಡಿಪಿ ಶೇ 2.8 ಇದೆ' ಎಂದರು. ಆಟೊಮೊಬೈಲ್ ಮತ್ತು ಜವಳಿ ಉದ್ಯಮದಲ್ಲಿ 30 ಲಕ್ಷ ಉದ್ಯೋಗಗಳು ಕಡಿತಗೊಂಡಿವೆ ಎಂದು ದೂರಿದರು.

'ಜನವರಿ 23 ರಂದು ನೇತಾಜಿ ಸುಭಾಷ್‌ಚಂದ್ರ ಬೋಸರ ಜನ್ಮ ದಿನದಂದು ಪ್ರಾರಂಭ ಮಾಡಿ ಜ. 26ನೇ ದಿವಸವನ್ನು ಸಂವಿಧಾನ ಶಪಥ ದಿನವನ್ನಾಗಿ ಆಚರಿಸಲಾಗುವುದು. ಜನವರಿ 30 ರಂದು ಗಾಂಧೀಜಿಯವರ ಹುತಾತ್ಮ ದಿನದಂದು ಗಾಂಧೀಜಿ ಕೊಂದವರ ವಿರುದ್ಧ ಪ್ರತಿಭಟಿಸಲಾಗುವುದು' ಎಂದು ಯೆಚೂರಿ ತಿಳಿಸಿದರು.



ಕೇರಳ ಹಾಗೂ ಪಂಜಾಬ್ ಸರ್ಕಾರಗಳು ಸಿಎಎ ಕಾಯ್ದೆ ಜಾರಿಗೊಳಿಸುವುದಿಲ್ಲ ಎಂದು ವಿಧಾನಸಭೆಯಲ್ಲಿ ನಿರ್ಣಯ ಕೈಗೊಂಡಿವೆ ಎಂದು ಹೇಳಿದರು.




ಗೃಹ ಸಚಿವ ಅಮಿತ್ ಶಾ ಬ್ರಿಟಿಷರ ಹಾಗೆ ಆಡಳಿತ ನಡೆಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಸಿಎಎ ವಾಪಸ್ ತೆಗೆದುಕೊಳ್ಳುದಿಲ್ಲವೆಂದು ಹೇಳುತ್ತಾರೆ. ಬ್ರಿಟಿಷರು ಇದೇ ತರಹ ಮಾತನಾಡುತ್ತಿದ್ದರು. ಜನಪ್ರತಿನಿಧಿಗಳು ಜನರ ಸೇವಕರಾಗಬೇಕು. ಆದರೆ ಪ್ರಧಾನಿ ನರೇಂದ್ರ ಮೋದಿ ಆಡಳಿತ ಜನರಿಗೆ ಕಂಟಕಪ್ರಾಯವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕಾಶ್ಮೀರವನ್ನು ನಾಶಮಾಡಲಾಗಿದೆ. ಕಾಶ್ಮೀರ ಜನತೆಯನ್ನು ಗೃಹಬಂಧನದಲ್ಲಿಟ್ಟು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಅವರ ಪರವಾಗಿ ಪ್ರಶ್ನೆ ಮಾಡುವವರನ್ನು ಬಂಧಿಸಲಾಗುತ್ತಿದೆ. ಸಂವಿಧಾನ ರಕ್ಷಣೆಗಾಗಿ ಜನತೆ ಎದ್ದುನಿಲ್ಲಬೇಕಾಗಿದೆ ಎಂದು ಹೇಳಿದರು.

ದೇಶದ ಸ್ವಾತಂತ್ರ್ಯ ಚಳುವಳಿಯ ಹುತಾತ್ಮರ ದಿನ ರಾಜ್ಯಾದ್ಯಂತ ಮಾನವ ಸರಪಳಿ

ರಾಜ್ಯಾದ್ಯಂತ ತಾಲೂಕು, ಜಿಲ್ಲಾ, ಕೇಂದ್ರಗಳಲ್ಲಿ ನಗರಗಳ ವಿವಿಧ ಭಾಗಗಳಲ್ಲಿ ಮಾನವ ಸರಪಳಿಯ ಬೃಹತ್ ಕಾರ್ಯಕ್ರಮ

ದ್ವೇಷ ತೊಲಗಲಿ – ಸಹಬಾಳ್ವೆ ಬಲಗೊಳ್ಳಲಿ
2020 ಜನವರಿ 30 ಮಹಾತ್ಮ ಹುತಾತ್ಮನಾದ ದಿನ



ಜನವರಿ 30 (1948) ಗಾಂಧೀಜಿಯವರನ್ನು ಗುಂಡಿಕ್ಕಿ ಕೊಂದ ದಿನ. ಇಡೀ ದೇಶವೇ ದುಃಖದ ಕಡಲಲ್ಲಿ ಮುಳುಗಿದ ದಿನ. ಅದರ ನೆನಪಿನಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬಲಿದಾನ ಮಾಡಿದ ಹುತಾತ್ಮರ ದಿನವಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ.

ಗಾಂಧೀಜಿಯವರನ್ನು ಕೊಲ್ಲಲು ಅಂದು ನಾಲ್ಕು ಪ್ರಯತ್ನಗಳು ನಡೆದಿದ್ದವು. ಇಂದು ದಿನ ದಿನವೂ ಅವರ ಸತ್ಯಾಗ್ರಹದ ಆಶಯಗಳನ್ನು ಹತ್ಯೆ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಹಿಂಸೆ ತಾಂಡವವಾಡುತ್ತಿದೆ. ಮಹಿಳೆಯರ ಮೇಲೆ ಹಿಂಸೆ, ದಲಿತರು, ಬುಡಕಟ್ಟು ಸಮುದಾಯಗಳ ಮೇಲೆ ಧಾಳಿ, ರೈತರು ಕೂಲಿಕಾರರ ಮೇಲೆ ಹಿಂಸೆ, ಅಲ್ಪ ಸಂಖ್ಯಾತರ ಮೇಲೆ ಹಿಂಸೆ, ವಿವಿಧ ಸ್ವರೂಪದ ದೌರ್ಜನ್ಯ, ಕೊಲೆಗಳು,. ನಮ್ಮ ನಾಡಿನ ಭವಿಷ್ಯವಾಗಿರುವ ವಿದ್ಯಾರ್ಥಿ– ಯುವಜನರ ದ್ವನಿಯನ್ನು ದಮನಿಸಲಾಗುತ್ತಿದೆ. ಈ ಯುವ ಚೇತನಗಳ ಮೇಲೆ ಹಿಂಸಾಕಾಂಡ ಹರಿಯ ಬಿಡಲಾಗಿದೆ.

ಇತ್ತೀಚೆಗೆ ದೇಶಾದ್ಯಂತ ನಡೆದ ಚಳುವಳಿಗಳಲ್ಲಿ ಸರ್ಕಾರಗಳ ಗುಂಡೇಟಿನಿಂದ ಮೂವತ್ತು ಹತ್ಯೆಗಳು! ಸಮಾಜ ದೊಳಗೆ ವಿವಿಧ ನೆಪವೊಡ್ಡಿ ಹಲವು ಗೂಂಡಾ ಗುಂಪುಗಳ ಧಾಳಿಗಳು, ಕಗ್ಗೊಲೆಗಳು. ಇಂತಹ ಅಟ್ಟಹಾಸ, ಹಿಂಸೆ, ದೌರ್ಜನ್ಯಗಳ ಈ ತಾಂಡವದ ವಿರುದ್ಧ ಜನರು ಬೃಹತ್ ಪ್ರಮಾಣದಲ್ಲಿ ಒಗ್ಗೂಡಿ ಸೆಣಸಬೇಕಿದೆ.

ಅಂದು ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ಸಾವಿರಾರು ಯೋಧರ ಆಶಯಗಳನ್ನು ಮಣ್ಣುಗೂಡಿಸುವ ಕುತಂತ್ರಗಳು ನಡೆಯುತ್ತಿವೆ. ಈ ಸ್ವಾತಂತ್ರ್ಯ ಹೋರಾಟದ ಆಶಯಗಳ ಸಾಕಾರವಾದ, ಡಾ.ಅಂಬೇಡ್ಕರ್‌ರವರ ನೇತೃತ್ವದಲ್ಲಿ ರಚಿಸಿದ ಸಂವಿಧಾನದ ಮೇಲೆ, ವರ್ತಮಾನಕ್ಕೂ ಮತ್ತು ಭವಿಷ್ಯತ್ತಿಗೂ ಬೆಳಕಾಗಿರುವ ಅದರ ಮೂಲ ಉನ್ನತ ಆಶಯಗಳ ಮೇಲೆ ಧಾಳಿಗಳೂ ನಡೆದಿವೆ. ದೇಶದ ಪ್ರಜಾಪ್ರಭುತ್ವದ ಖಾತರಿಯಾದ ಸಂವಿಧಾನಕ್ಕೆ ವಿರುದ್ಧವಾಗಿ ಇಂದು ಹಲವಾರು ಕಾನೂನುಗಳನ್ನು ರಚಿಸಲಾಗಿದೆ.

ಸಮಾನತೆ, ಸೋದರತ್ವ, ಸೆಕ್ಯುಲರ್ ತತ್ವಗಳನ್ನು ಗಾಳಿಗೆ ತೂರುವ ಪೌರತ್ವ ತಿದ್ದುಪಡಿ ಕಾಯ್ದೆಯಂತಹ– ಅಂಂ–ಓಖಿಅ– ಓಕಖ ಮೂಲಕ ಅತ್ಯಂತ ಅಪಾಯಕಾರಿ ಕ್ರಮಗಳನ್ನು ಜಾರಿಗೊಳಿಸುವ ಪ್ರಯತ್ನ ಸಾಗಿದೆ. ಇದು ಹಿಂದೂ, ಮುಸ್ಲಿಂ ಮುಂತಾದ ಎಲ್ಲಾ ಧರ್ಮೀಯರು, ಒಟ್ಟಾರೆ ಭಾರತೀಯರನ್ನು ತೀವ್ರವಾಗಿ ಭಾಧಿಸಲಿದೆ, ಯಾತನಾಮಯ ಸ್ಥಿತಿಗೆ ತಳ್ಳಲಿದೆ. ಈ ಹಿಂಸೆ,

ದೌರ್ಜನ್ಯ, ಸಂವಿಧಾನದ ತತ್ವಗಳ ಉಲ್ಲಂಘನೆಯ ವಿರುದ್ಧ ಇಡೀ ದೇಶವೇ ಸಿಡಿದೆದ್ದಿದೆ. ಆದರೂ ದೇಶವನ್ನು ಆಳುವವರು ಜನರ ಈ ಭಾವನೆಗಳಿಗೆ ಬೆಲೆ ಕೊಡದೆ ಗಾಂಧೀಜಿಯ ಆಶಯಗಳನ್ನು ಮಣ್ಣುಗೂಡಿಸುವ ದುಷ್ಟ ಯೋಜನೆಯನ್ನು ಮುಂದುವರೆಸುತ್ತಿದ್ದಾರೆ.

ಗಾಂಧೀಜಿ ಹೇಳಿದ್ದರು 'ಭಾರತೀಯರಿಗೆ ನಾನು ತೋರಿದ ದಾರಿ ಪ್ರೀತಿಯ ದಾರಿ, ದ್ವೇಷದ ದಾರಿಯಲ್ಲ' ಎಂದು.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 2020 ರ ಜನವರಿ 30 ರಂದು ಎಲ್ಲಾ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ , ನಗರಗಳ ಬಡಾವಣೆಗಳಲ್ಲಿ ಬೆಳಗ್ಗೆ 11 ಗಂಟೆಗೆ ಗಾಂಧೀಜಿಯವರಿಗೆ ಗೌರವ ಸಲ್ಲಿಸುವ ಸೈರನ್ ಕೂಗಿನ ಸಮಯಕ್ಕನುಗುಣವಾಗಿ ಶ್ರದ್ಧಾಂಜಲಿ ಅರ್ಪಿಸಿ ಬೃಹತ್ ಮಾನವ ಸರಪಳಿಗಳನ್ನು ರಚಿಸಬೇಕು.

'ಮಾನವ ಕುಲಂ ತಾನೊಂದೆ ವಲಂ' ಎಂಬ ಕನ್ನಡದ ಆದಿ ಕವಿ ಪಂಪನ ವಾಣಿ, ನಮ್ಮ ನಾಡಗೀತೆಯ ಭಾವನೆಯಂತೆ 'ಸರ್ವ ಜನಾಂಗದ ಶಾಂತಿಯ ತೋಟ, ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರಸಿಕ, ಜೈನರುದ್ಯಾನ'ವಾಗಿ ಕರ್ನಾಟಕ, ಭಾರತ ಮೆರೆಯಬೇಕು.

ಭಾರತದಲ್ಲಿ ಹಿಂಸೆ, ದ್ವೇಷ ನಾಶವಾಗಲಿ. ನೆಮ್ಮದಿ, ಸಹಬಾಳ್ವೆಯ ಬದುಕು ಎಲ್ಲ ಜನರದ್ದಾಗಲಿ.

ಬಹುತ್ವ ಭಾರತ ಎಂದರೆ ಮಾತ್ರವೇ, 'ಸಮೃದ್ಧ ಭಾರತ, ಸದೃಢ ಭಾರತ' ಎಂಬುದನ್ನು ಮರೆಯದಿರೋಣ.

ಬನ್ನಿ, ದ್ವೇಷ, ತ್ವೇಷ ತೊಲಗಿಸೋಣ. ಸೌಹಾರ್ದತೆ, ಸಹಬಾಳ್ವೆ ಬಲಗೊಳಿಸೋಣ. ಭಾರತೀಯರು ನಾವು ನಾವೆಲ್ಲಾ ಒಂದೇ ಎಂದು ಸಾರೋಣ.

ಜನವರಿ 30 ರಂದಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತು ತಮ್ಮ ಗೆಳೆಯರು ಸಂಘ–ಸಂಸ್ಥೆಗಳ ಎಲ್ಲರನ್ನು ಎಲ್ಲರನ್ನೂ ಪಾಲ್ಗೊಳಿಸಿ ಭಾರತ ದೇಶವನ್ನು ಸಂರಕ್ಷಿಸಿ ಎಂದು ವಿನಂತಿಯನ್ನು ಮಾಡುತ್ತೇವೆ.

ನ್ಯಾ. ವಿ.ಗೋಪಾಲಗೌಡ ನಿವೃತ್ತ ನ್ಯಾಯಾಧೀಶರು ಭಾರತದ ಸರ್ವೋಚ್ಚ ನ್ಯಾಯಾಲಯ, ಡಾ.ಕೆ. ಮರುಳಸಿದ್ಧಪ್ಪ ಸಾಹಿತಿಗಳು, ಡಾ. ಬರಗೂರು ರಾಮಚಂದ್ರಪ್ಪ ಸಾಹಿತಿಗಳು, ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಾಹಿತಿಗಳು, ಪ್ರಸನ್ನ ಹೆಗ್ಗೋಡು ರಂಗ ನಿರ್ದೇಶಕರು, ಪ್ರೊ.ಅರವಿಂದ ಮಾಲಗತ್ತಿ ಸಾಹಿತಿಗಳು, ಎಸ್.ಜಿ.ಸಿದ್ಧರಾಮಯ್ಯ ಸಾಹಿತಿಗಳು, ಪ್ರೊ. ಜಿ.ಕೆ. ಗೋವಿಂದರಾವ್ ಚಿಂತಕರು, ಸೈಯ್ಯದ್ ಜಮೀರ್ ಪಾಷಾ ನಿವೃತ್ತ ಐ.ಎ.ಎಸ್. ಅಧಿಕಾರಿಗಳು, ಡಾ.ಸುಕನ್ಯಾ ಕವಯತ್ರಿ, ಡಾ.ಕೆ.ಶರೀಫಾ ಕವಯತ್ರಿ, ಡಾ.ವಿಜಯಾ ಪತ್ರಕರ್ತರು, ಅಮೀರ್ ಜಾನ್ ಖಾದ್ರಿ ಸಾಮಾಜಿಕ ಪ್ರಮುಖರು, ಸೂಫಿ ವಲೀಬಾ ಸೂಫಿ ಸಂತರ ಸಂಘದ ಪ್ರಮುಖರು, ಮಾವಳ್ಳಿ ಶಂಕರ್‌ರಾಜ್ಯ ಸಂಚಾಲಕರು ಡಿ.ಎಸ್.ಎಸ್.(ಅಂ), ಲಕ್ಷ್ಮೀನಾರಾಯಣ ನಾಗವಾರ ರಾಜ್ಯ ಸಂಚಾಲಕರು ಡಿ.ಎಸ್.ಎಸ್., ಮುನಿಸ್ವಾಮಿ ಸಂಚಾಲಕರು ದಲಿತ ಸಂಘಟನೆಗಳ ಒಕ್ಕೂಟ, ಸೌಹಾರ್ದ ಕರ್ನಾಟಕ ಮತ್ತು ವಿವಿಧ ಸಂಘ ಸಂಸ್ಥೆಗಳು, ವಿವಿಧ ಕ್ಷೇತ್ರಗಳ ಮುಂತಾದವರಿರುತ್ತಾರೆ.

ಸಂಪರ್ಕ ಸಂಕಲ್ಪ ಪ್ರಚಾರಾಂದೋಲನಕ್ಕೆ ಚಾಲನೆ...

ಪುಟ 9 ರಿಂದ





ಖ್ಯಾತ ಗಾಯಕ ಜನಾರ್ಧನ (ಜನ್ನಿ) ತಂಡದ ಕ್ರಾಂತಿಗೀತೆ

ಅಖಿಲ ಭಾರತ ಕೇಂದ್ರದ ರಚನೆ





1920ರಲ್ಲೇ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾಗಿದ್ದಾಗ್ಯೂ, ಆ ಇಡೀ ದಶಕದ ಉದ್ದಕ್ಕೂ, ನಿರಂತರವಾದ ಒಂದು ಕೇಂದ್ರ ನಾಯಕತ್ವವಿಲ್ಲದೇ ಅದು ತನ್ನ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿತ್ತು. ವಿವಿಧ ಕಮ್ಯುನಿಸ್ಟ್ ಗುಂಪುಗಳಾಗಿ ಹಲವರು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾಗ್ಯೂ, ಅದರಲ್ಲಿ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕವಾಗಿ ಕೂಡ ಏಕರೂಪತೆ ಇರಲಿಲ್ಲ. ಒಂದು ಸಮರ್ಥವಾದ ಕೇಂದ್ರ ಸಂಘಟನೆಯಿಲ್ಲದೆ, ಈ ಚಟುಟಿಕೆಗಳಿಗೆ ನಾಯಕತ್ವ ಒದಗಿಸಲಾಗಲಿಲ್ಲ. ಮೀರತ್ ಖೈದಿಗಳ ಬಿಡುಗಡೆಯೊಂದಿಗೆ, ಅವರ ಬಂಧನದಿಂದಾಗಿ ಕಡಿದುಹೋಗಿದ್ದ ಹಳೆಯ ಸಂಪರ್ಕಗಳು ಮರುಜೋಡಣೆಯಾದವು ಮಾತ್ರವಲ್ಲ, ಅನೇಕ ಹೊಸ ವ್ಯಕ್ತಿಗಳು ಮತ್ತು ಗುಂಪುಗಳು ಪಕ್ಷದತ್ತ ಆಕರ್ಷಿತರಾದರು. ಸೋವಿಯತ್ ಯೂನಿಯನ್ನಿನ ಉದಯ ಮತ್ತು ಫ್ಯಾಸಿಸಂನ ಬೆಳವಣಿಗೆಯಂತಹ ಘಟನೆಗಳು ಕಾಂಗ್ರೆಸ್ ನಾಯಕರನ್ನು ಮಾತ್ರವಲ್ಲ ಸಾಮಾನ್ಯ ಜನರನ್ನೂ ಆಕರ್ಷಿಸಿದವು. ಸಮಾಜವಾದಿ ಮತ್ತು ಸಮತಾವಾದಿ ಸಿದ್ಧಾಂತಗಳ ಬೆಳವಣಿಗೆಗೆ ಅನುಕೂಲಕರ ವಾತಾವರಣದ ಈ ಸನ್ನಿವೇಶದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ನಿರಂತರ ಕಾರ್ಯನಿರ್ವಹಣೆಯ ಕೇಂದ್ರ ನಾಯಕತ್ವದೊಂದಿಗೆ ಹೊರಹೊಮ್ಮಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

1920ರ ದಶಕದ ಕೊನೆಯ ಮತ್ತು 1930ರ ದಶಕದ ಆರಂಭದ ಅವಧಿಯಲ್ಲಿ ಭಾರತದ ಆಂತರಿಕ ಸನ್ನಿವೇಶ ಸಾಕಷ್ಟು ಸಂಕೀರ್ಣವಾಗಿತ್ತು. ಇಡೀ ಬಂಡವಾಳಶಾಹೀ ಜಗತ್ತನ್ನು ಆವರಿಸಿದ್ದ 'ಮಹಾ ಕುಸಿತ' (ಆರ್ಥಿಕ ಕುಸಿತ)ದ ಪರಿಣಾಮಗಳು ಭಾರತದ ಜನರ ಮೇಲೆ ಬಹಳ ಯಾತನಾಮಯವಾಗಿದ್ದವು. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ತಮ್ಮ ದೇಶವು ಎದುರಿಸುತ್ತಿದ್ದ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಅದರ ಹೊರೆಯನ್ನು ಭಾರತದ ಜನರ ಮೇಲೆ ಹೇರಲು ಯತ್ನಿಸುತ್ತಿತ್ತು. ಅದರ ಪರಿಣಾಮವಾಗಿ, ಬ್ರಿಟಿಷ್ ಆಳ್ವಿಕೆಯ ವಿರುದ್ಧ ಪ್ರತಿಭಟನೆಗಳು ಮತ್ತು ಆಕ್ರೋಶ ಮುಗಿಲು ಮುಟ್ಟಿದವು ಹಾಗೂ ವ್ಯಾಪಕವಾದವು. ಬೊಂಬಾಯಿ, ಶೋಲಾಪುರಗಳ ಜವಳಿ ಗಿರಣಿಗಳಲ್ಲಿ ಹಾಗೂ ಕಲ್ಕತ್ತಾದ ಸಣಬು ಕೈಗಾರಿಗೆಗಳಲ್ಲಿ ಭುಗಿಲೆದ್ದ ಕಾರ್ಮಿಕರ ಭಾರಿ ಮುಷ್ಕರಗಳು ಕಾರ್ಮಿಕ ವರ್ಗದ ಮಡುಗಟ್ಟಿದ್ದ ಆಕ್ರೋಶದ ಕೆಲವು ನಿದರ್ಶನಗಳಷ್ಟೆ. 1930–31 ರ ಅವಧಿಯಲ್ಲಿ ಕಾರ್ಮಿಕ ವರ್ಗದ ಮುಷ್ಕರಗಳ ಸಂಖ್ಯೆ ಮತ್ತು ಮಾನವ ದಿನಗಳ ನಷ್ಟವು ಶಿಖರಕ್ಕೇರಿತ್ತು. ಗರಿಗೆದರುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಎಲ್ಲಾ ಪ್ರಮುಖ ನಾಯಕರುಗಳನ್ನು ಬಂಧಿಸಿ ಮೀರತ್ ಪಿತೂರಿ ಪ್ರಕರಣದಲ್ಲಿ ಸಿಲುಕಿಸಿ ವಿಚಾರಣೆ ನಡೆಸುತ್ತಿದ್ದ ಕಾರಣ ಈ ಮೇಲಿನ ಅನುಕೂಲಕರ ವಾತಾವರಣವನ್ನು ಬಳಸಿಕೊಳ್ಳಲು ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಅದೂ ಅಲ್ಲದೇ, ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದಲ್ಲಿ ಬಂಡವಾಳಶಾಹಿಗಳ ಪಾತ್ರವೇನು ಎನ್ನುವುದರ ಬಗ್ಗೆ ಸರಿಯಾದ ಸೈದ್ಧಾಂತಿಕ ಸ್ಪಷ್ಟತೆಯನ್ನು ಆಗಿನ್ನೂ ಅದು ಪಡೆದಿರಲಿಲ್ಲ.

ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಆರಂಭದ ಅವಧಿಯಲ್ಲಿ, ಎಂ.ಎನ್.ರಾಯ್ ಅತ್ಯಂತ ಉಪಯುಕ್ತ ಪಾತ್ರ ವಹಿಸಿದ್ದರು. ಆದರೆ, ಎಂ.ಎನ್.ರಾಯ್ ಅವರನ್ನು ಕಾಮಿಂಟರ್ನ್‌ನಿಂದ ಉಚ್ಛಾಟನೆ ಮಾಡಿದ ಮೇಲೆ, ಎಂ.ಎನ್.ರಾಯ್ ಮತ್ತು ಟ್ರಾಟ್ಸ್ಕಿಯನ್ನು ಅನುಸರಿಸುವ ಕೆಲವು ಗುಂಪುಗಳು ಹುಟ್ಟಿಕೊಂಡವು ಮತ್ತು ಅವು ಅಂತರ್ರಾಷ್ಟ್ರೀಯ ನಾಯಕತ್ವದ ವಿರುದ್ಧ ಕೆಲಸ ಮಾಡಲು ಶುರುಮಾಡಿದವು. ಈ ಸಂಘಟನೆಗಳು ಪಕ್ಷಕ್ಕೆ ಸಮಸ್ಯೆಗಳನ್ನು ಒಡ್ಡಿದವು ಕೂಡ.

ಭಾರತದ ಸನ್ನಿವೇಶದಲ್ಲಿ ಒಂದು ಬುಡಮಟ್ಟದ ಬದಲಾವಣೆ ತರಲು ಮತ್ತು ದೇಶದಲ್ಲಿ ಸಾಮ್ರಾಜ್ಯಶಾಹೀ–ವಿರೋಧಿ ಹೋರಾಟವನ್ನು ಮುಂದುವರಿಸಲು ಸಮರ್ಥ ನಾಯಕತ್ವವೊಂದನ್ನು ಒಗ್ಗೂಡಿಸುವ ದಿಕ್ಕಿನಲ್ಲಿ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಮುಖಂಡರು ಪ್ರಯತ್ನ ಮಾಡಿದರು. ಹಲವಾರು ಬಾರಿ ಅಂತರ್ರಾಷ್ಟ್ರೀಯದ ಪ್ರತಿನಿಧಿಗಳು ಭಾರತಕ್ಕೆ ಬಂದರು; ಬಗೆಬಗೆಯ ಕಮ್ಯುನಿಸ್ಟ್ ಗುಂಪುಗಳ ಜತೆ ಸಂಪರ್ಕ ಮಾಡಿದರು ಮತ್ತು ಅಂದಿನ ರಾಜಕೀಯ ಸನ್ನಿವೇಶ ಕುರಿತ ತಮ್ಮ ತಿಳುವಳಿಕೆಯ ಆಧಾರದಲ್ಲಿ ಸಲಹೆಗಳನ್ನು ನೀಡಿದರು. ಮೀರತ್ ಪ್ರಕರಣ ಮತ್ತು ಆರೋಪಿಗಳ ಬಂಧನ ಪಕ್ಷದ ಸಂಘಟನೆಗೆ ಭಾರಿ ಪೆಟ್ಟು ಕೊಟ್ಟಿತ್ತು; ತ್ವರಿತವಾಗಿ ಬದಲಾಗುತ್ತಿದ್ದ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸನ್ನಿವೇಶಗಳನ್ನು ಗ್ರಹಿಸಿ ಸೂಕ್ತವಾದ ಹಾಗೂ ಸಕಾಲಿಕ ನಾಯಕತ್ವ ನೀಡಲು ಸಾಧ್ಯವಾಗಲಿಲ್ಲ.

1920ರಲ್ಲೇ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾಗಿದ್ದಾಗ್ಯೂ, ಆ ಇಡೀ ದಶಕದ ಉದ್ದಕ್ಕೂ, ನಿರಂತರವಾದ ಒಂದು ಕೇಂದ್ರ ನಾಯಕತ್ವವಿಲ್ಲದೇ ಅದು ತನ್ನ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿತ್ತು. ಹೌದು, ಆಗ ಒಂದು ಕಮ್ಯುನಿಸ್ಟ್ ಪಕ್ಷ ಇತ್ತು ಮತ್ತು ಪಕ್ಷದ ಪ್ರತಿಯೊಬ್ಬ ಸದಸ್ಯರೂ ಎಡೆಬಿಡದ ರಾಜಕೀಯ ಹಾಗೂ ಸಂಘಟನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಆದರೆ, ಅವರ ಚಟುವಟಿಕೆಗಳ ಪ್ರಧಾನ ಕ್ಷೇತ್ರವು, ಮುಖ್ಯವಾಗಿ 1920ರ ದಶಕದ ದ್ವಿತೀಯಾರ್ಧದಲ್ಲಿ ಕಾರ್ಮಿಕರ ಮತ್ತು ರೈತರ ಪಕ್ಷದ ಮೂಲಕ ನಡೆಯುತ್ತಿತ್ತು. ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟುವ ಕಡೆ ಅವರ ಗಮನವೆಲ್ಲಾ ಕೇಂದ್ರೀಕೃತವಾಗಿತ್ತು, ಅದರಲ್ಲಿ ಕಮ್ಯುನಿಸ್ಟರಲ್ಲದವರೂ ಪಾತ್ರ ವಹಿಸುತ್ತಿದ್ದರು. ಯಾವುದೇ ಸಮಯದಲ್ಲಿ ತಮ್ಮ ಮೇಲೆ ದಾಳಿಯಾಗಬಹುದು ಮತ್ತು ಆದಕಾರಣ ಭೂಗತರಾಗಿ ಕೆಲಸ ಮಾಡಬೇಕೆಂಬ ಅರಿವನ್ನು ಪಕ್ಷದ ನಾಯಕತ್ವ ಹೊಂದಿರಲಿಲ್ಲ. ಅದರ ಪರಿಣಾಮವಾಗಿ, ಯಾವಾಗ ಕಮ್ಯುನಿಸ್ಟರು ಮತ್ತು ಅವರ ಜತೆಯಲ್ಲಿ ಕಾರ್ಮಿಕರ ಮತ್ತು ರೈತರ ಪಕ್ಷದ ಒಡನಾಡಿಗಳು ದಾಳಿಗೆ ಒಳಗಾದರೋ, ಆಗ ಪಕ್ಷದ ಸಂಘಟನೆಯು ವಸ್ತುಶಃ ಅಸ್ತಿತ್ವ ಕಳೆದುಕೊಂಡಿತು.

ಭಾರತೀಯ ಕಮ್ಯುನಿಸ್ಟರ ಮೇಲೆ ಮೀರತ್ ಪ್ರಕರಣವನ್ನು ಹೊರಿಸಿದ ಆ ಸಮಯದಲ್ಲಿ ಆಗತಾನೇ ಅವರು ಒಂದು ಬಹಿರಂಗ ಹಾಗೂ ಕೇಂದ್ರೀಕೃತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸುವ ಸಾಧ್ಯತೆಯನ್ನು ಪರೀಕ್ಷಿಸಲು ಆರಂಭಿಸಿದ್ದರಷ್ಟೆ. ಅದನ್ನು ಡಿಸೆಂಬರ್ 27–29, 1928ರ ಅವಧಿಯಲ್ಲಿ ಕಲ್ಕತ್ತಾದಲ್ಲಿ ಸಿಪಿಐನ ಕಾರ್ಯಕಾರಿ ಸಮಿತಿಯ ಒಂದು ಗುಪ್ತ ಸಭೆಯಲ್ಲಿ ಚರ್ಚೆ ಮಾಡಲಾಗಿತ್ತು. ಆದರೆ, ಯಾವುದೇ ಕ್ರಮ ಕೈಗೊಳ್ಳುವ ಮುಂಚೆಯೇ, ಈ ವಿಷಯದಲ್ಲಿ ಒಂದು ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳುವ ಮೊದಲೇ, ಬಹುತೇಕ ಎಲ್ಲಾ ಮೇಲ್ಮಟ್ಟದ ನಾಯಕರನ್ನು ಬಂಧಿಸಲಾಯಿತು; ಇದು ಎಲ್ಲಾ ಕೇಂದ್ರಗಳಲ್ಲಿನ ಕಮ್ಯುನಿಸ್ಟ್ ಚಟುವಟಿಕೆಗಳಲ್ಲಿ ದೊಡ್ಡ ಕಂದರವನ್ನು ಉಂಟುಮಾಡಿತು.

ಬಂಗಾಳದಲ್ಲಿ ಮಾತ್ರ ಮುಂದಾಳತ್ವದಲ್ಲಿದ್ದ ಅಬ್ದುಲ್ ಹಲೀಮ್ ಅವರನ್ನು ಬ್ರಿಟಿಷ್ ಪೋಲಿಸರು ಕಾರಾಗೃಹಕ್ಕೆ ಕಳಿಸಲಿಲ್ಲ. ಮದ್ರಾಸಿನಲ್ಲಿ, ಸಿಂಗಾರವೇಲು ಚೆಟ್ಟಿಯಾರ್ 18 ತಿಂಗಳ ನಂತರ ಆಗಸ್ಟ್ 1930 ರಲ್ಲಿ ಜೈಲಿನಿಂದ ಹೊರಬಂದರು. ಅವರು ಪೆರಿಯಾರರ 'ಸ್ವಾಭಿಮಾನಿ ಚಳುವಳಿ'ಯಲ್ಲಿ ಸೇರಿಕೊಂಡರು ಮತ್ತು ಅದರೊಳಗಿದ್ದ ಎಡಪಂಥೀಯರ ಮೇಲೆ ಪ್ರಭಾವ ಬೀರಿದರು. 1932ರಲ್ಲಿ ತಮ್ಮ ಬಂಧನಕ್ಕೆ ಮೊದಲೇ, ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಕಮ್ಯುನಿಸ್ಟ್ ಸಂಘಟನೆಯ ಪುನಶ್ಚೇತನಕ್ಕೆ ಕಾರಣಕರ್ತರಾಗಿದ್ದ ಅಮೀರ್ ಹೈದರ್ ಖಾನ್ ಜತೆ ಕೂಡ ಚೆಟ್ಟಿಯಾರ್ ಸಂಪರ್ಕದಲ್ಲಿದ್ದರು. ಕಾನ್ಪುರದಲ್ಲಿ, ಖಾಲಿ ಸ್ಥಾನ ತುಂಬಲು ಯಾರೂ ಇರಲೇ ಇಲ್ಲ. ಲಾಹೋರಿನಲ್ಲಿ, ಮಜೀದ್ ಮತ್ತು ಸೆಹ್ಗಲ್ ಅವರ ಬಂಧನದ ನಂತರ ಅವರ ಜಾಗ ಭರ್ತಿ ಮಾಡಲು ಒಬ್ಬರೂ ಇರಲಿಲ್ಲ. ಬೊಂಬಾಯಿಯಲ್ಲಿ, ಎಸ್.ವಿ.ದೇಶಪಾಂಡೆ ಮತ್ತು ಬಿ.ಟಿ.ರಣದಿವೆಯವರು ಕಾರ್ಮಿಕ ಸಂಘಗಳಲ್ಲಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕ್ರಿಯಾಶೀಲರಾಗಿದ್ದರು.

ವಿವಿಧ ಕಮ್ಯುನಿಸ್ಟ್ ಗುಂಪುಗಳಾಗಿ ಹಲವರು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾಗ್ಯೂ, ಅದರಲ್ಲಿ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕವಾಗಿ ಕೂಡ ಏಕರೂಪತೆ ಇರಲಿಲ್ಲ. ಒಂದು ಸಮರ್ಥವಾದ ಕೇಂದ್ರ ಸಂಘಟನೆಯಿಲ್ಲದೆ, ಈ ಚಟುಟಿಕೆಗಳಿಗೆ ನಾಯಕತ್ವ ಒದಗಿಸಲಾಗಲಿಲ್ಲ. ವಿವಿಧ ಕಮ್ಯುನಿಸ್ಟ್ ಗುಂಪುಗಳು ಪರಸ್ಪರರಿಂದ ದೂರವೇ ಇದ್ದವು. ಮೀರತ್ ಪ್ರಕರಣದಿಂದ ಪ್ರಾರಂಭವಾಗಿ ಸರಿ ಸುಮಾರು ನಾಲ್ಕೂವರೆ ವರ್ಷ ಕಾಲ ಜೈಲಿನಿಂದ ಹೊರಗಡೆಯಿದ್ದ ಕಮ್ಯುನಿಷ್ಟರು ಭಿನ್ನಾಭಿಪ್ರಾಯಗಳು ಮತ್ತು ಗುಂಪುಗಾರಿಕೆಯ ಅವಧಿಯಾಗಿತ್ತು.

ಮಿರತ್ ಬಂಧನಗಳ ನಂತರದ ಮೊದಲ ಸವಾಲು ಒಂದು ಅಖಿಲ ಭಾರತ ಕೇಂದ್ರ ಕಟ್ಟುವುದಾಗಿತ್ತು. 1933ರ ಕೊನೆಯಲ್ಲಿ ಮೀರತ್ ಪ್ರಕರಣದ ಆರೋಪಿಗಳ ಬಿಡುಗಡೆಯಾಗುವ ತನಕ ಆ ನಿಟ್ಟಿನಲ್ಲಿ ಮಾಡಿದ ಪ್ರಯತ್ನಗಳು ಯಾವುದೇ ಸ್ಪಷ್ಟ ಫಲಿತಾಂಶ ದೊರಕಿಸಲಿಲ್ಲ. ಈ ಮಧ್ಯೆ, 1933ರ ಆರಂಭದಲ್ಲಿ ಜಾಮೀನು ಪಡೆದು ಹೊರ ಬಂದ ಡಾ.ಅಧಿಕಾರಿಯವರು ಭಾರತದ ವಿವಿಧ ಭಾಗಗಳಲ್ಲಿದ್ದ ಹಲವಾರು ಮಾರ್ಕ್ಸ್‌ವಾದಿಗಳನ್ನು ಮತ್ತು ಎಡಪಂಥೀಯ ಗುಂಪುಗಳನ್ನು ಅಣಿನೆರೆಸಿ ಒಂದು ಐಕ್ಯ ಪಕ್ಷ ಪುನರ್ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮೀರತ್ ಖೈದಿಗಳ ಬಿಡುಗಡೆಯೊಂದಿಗೆ, ಅವರ ಬಂಧನದಿಂದಾಗಿ ಕಡಿದುಹೋಗಿದ್ದ ಹಳೆಯ ಸಂಪರ್ಕಗಳು ಮರುಜೋಡಣೆಯಾದವು ಮಾತ್ರವಲ್ಲ, ಅನೇಕ ಹೊಸ ವ್ಯಕ್ತಿಗಳು ಮತ್ತು ಗುಂಪುಗಳು ಪಕ್ಷದತ್ತ ಆಕರ್ಷಿತರಾದರು. ಜೈಲಿನಿಂದ ಹೊರ ಬಂದ ಗಣನೀಯ ಸಂಖ್ಯೆಯ ಹಿಂದಿನ ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು ಮತ್ತು ಸಾಮಾನ್ಯ ಕಾಂಗ್ರೆಸ್ಸಿಗರ ಗಮನಾರ್ಹ ವಿಭಾಗವು ಗಾಂಧಿ ವಿಧಾನದ ಹೋರಾಟದಲ್ಲಿನ ದಿವಾಳಿತನದ ಅರಿವಾಗಿ, ಸ್ವಾತಂತ್ರ್ಯ ಚಳುವಳಿಯನ್ನು ಸಮಾಜವಾದ ಮತ್ತು ಸಮತಾವಾದ(ಕಮ್ಯುನಿಸಂ)ದತ್ತ ಕೊಂಡೊಯ್ಯಬೇಕಾದ ಅಗತ್ಯವನ್ನು ಮನಗಂಡರು. ಸೋವಿಯತ್ ಯೂನಿಯನ್ನಿನ ಉದಯ ಮತ್ತು ಫ್ಯಾಸಿಸಂನ ಬೆಳವಣಿಗೆಯಂತಹ ಘಟನೆಗಳು ಕಾಂಗ್ರೆಸ್ ನಾಯಕರನ್ನು ಮಾತ್ರವಲ್ಲ ಸಾಮಾನ್ಯ ಜನರನ್ನೂ ಆಕರ್ಷಿಸಿದವು. ಸಮಾಜವಾದಿ ಮತ್ತು ಸಮತಾವಾದಿ(ಕಮ್ಯುನಿಸಂ) ಸಿದ್ಧಾಂತಗಳ ಬೆಳವಣಿಗೆಗೆ ಅನುಕೂಲಕರ ವಾತಾವರಣದ ಈ ಸನ್ನಿವೇಶದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ನಿರಂತರ ಕಾರ್ಯನಿರ್ವಹಣೆಯ ಕೇಂದ್ರ ನಾಯಕತ್ವದೊಂದಿಗೆ ಹೊರಹೊಮ್ಮಿತು.

ಡಿಸೆಂಬರ್ 1933ರಲ್ಲಿ, ಬಂಗಾಳದ ಕಮ್ಯುನಿಸ್ಟರು ಒಂದು ಅಖಿಲ ಭಾರತ ಸಮ್ಮೇಳನವನ್ನು ಕಲ್ಕತ್ತಾದಲ್ಲಿ ನಡೆಸಿದರು. ಡಾ.ಅಧಿಕಾರಿ, ಅಬ್ದುಲ್ ಹಲೀಮ್, ಸೋಮನಾಥ್ ಲಹಿರಿ, ಡಾ.ರಣೇನ್ ಸೇನ್(ಬಂಗಾಳ), ಪಿ.ಸಿ.ಜೋಶಿ(ಕಾನ್ಪುರ್), ಎಸ್.ಜಿ.ಪತಾಕಾ ಮತ್ತು ಗುರುದೀಪ್ ಸಿಂಗ್(ಪಂಜಾಬ್) ಕಾರ್ಯ ಕಲಾಪಗಳಲ್ಲಿ ಭಾಗವಹಿಸಿದರು. ಈ ಸಭೆಯು ಮೂರು ಕಾರಣಗಳಿಂದ ಪ್ರಮುಖವಾಯಿತು: (ಅ) ಸಿಪಿಐನ ಹಂಗಾಮಿ ಕೇಂದ್ರ ಸಮಿತಿಯನ್ನು ಆರಿಸಲಾಯಿತು; (ಆ) ಒಂದು ಹಂಗಾಮಿ ನಿಬಂಧನೆಗಳ ಕರಡನ್ನು ಅಂಗೀಕರಿಸಲಾಯಿತು; ಮತ್ತು (ಇ) ರಾಜಕೀಯ ಪ್ರತಿಪಾದನೆಗಳ ಕರಡೊಂದನ್ನು ಅಂಗೀಕರಿಸಲಾಯಿತು. ಡಾ.ಅಧಿಕಾರಿಯವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು ಮತ್ತು ಹಂಗಾಮಿ ಸಮಿತಿಗಳನ್ನು ಆದಷ್ಟು ಬೇಗ ಮರುಸಂಘಟಿಸಲು ನಿರ್ಧರಿಸಲಾಯಿತು.

ಕೇಂದ್ರ ಸಮಿತಿ ಮತ್ತು ಪೋಲಿಟ್ ಬ್ಯೂರೋದ ರಚನೆಯು ಉಳಿದೆಲ್ಲಾ ಚಟುವಟಿಕೆಗಳಿಗೆ ನಾಂದಿ ಹಾಡಿತು: ಕಮ್ಯುನಿಸ್ಟರು ಮತ್ತು ಎಡಪಂಥೀಯರಿಗೆ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ದಸ್ತಾವೇಜುಗಳನ್ನು ಒದಗಿಸುವುದು; ಭಾರತೀಯ ರಾಜಕೀಯ **ಪುಟ 14 ಕ್ಕೆ**

ಡಾ. ಅಧಿಕಾರಿ



ಪಿ.ಸಿ. ಜೋಶಿ ಸೋಮನಾಥ್ ಲಹಿರಿ



ಡಾ. ರಣೇನ್ ಸೇನ್



ಅಬ್ದುಲ್ ಹಲೀಮ್



ಮುರಿದ ಅರ್ಥವ್ಯವಸ್ಥೆ– ಸರಿಪಡಿಸಲು ಸಮಾಲೋಚನೆ ಯಾರೊಂದಿಗೆ?

"ಅರ್ಥವ್ಯವಸ್ಥೆ ಮುರಿದು ಬಿದ್ದಿದೆ, ಮುರಿದವರೊಂದಿಗೇ ಪ್ರಧಾನಿಗಳು ಪರಿಹಾರದ ಸಮಾಲೋಚನೆ ನಡೆಸುತ್ತಿದ್ದಾರೆ"– ಇದು ಒಬ್ಬ ಆರ್ಥಿಕ ತಜ್ಞರು ಪ್ರಸಕ್ತ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸುತ್ತ ಹೇಳಿರುವ ಮಾತು. ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ರಾದ್ಧಾಂತ ಸೃಷ್ಟಿಸಿದ ನಂತರ ಆ ಬಗ್ಗೆ ಹೊಸ ಹೊಸ ಸುಳ್ಳುಗಳನ್ನು ಹೇಳುವ ಕೆಲಸವನ್ನು ಗೃಹಮಂತ್ರಿಗಳಿಗೆ ವಹಿಸಿಕೊಟ್ಟು ಪ್ರಧಾನಿಗಳು ಈಗ ಪ್ರತಿದಿನ ಎಂಬಂತೆ ದೇಶದ ಆರ್ಥಿಕ ಅಧೋಗತಿಯು ಬಗ್ಗೆ ಬರುತ್ತಿರುವ ಸೂಚ್ಯಂಕಗಳಿಂದಾಗಿ ಅದರ ಕಡೆಗೇ ಗಮನ ಕೊಡುತ್ತಿದ್ದಾರೆ ಎಂದು ವರದಿಯಾಗಿದೆ. ಕಳೆದ ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯಿಂದ 'ಸಂಪತ್ತಿನ ಸೃಷ್ಟಿಕರ್ತರು' ಎಂದು ಅವರು ಘೋಷಿಸಿರುವ ಅಂಬಾನಿ, ಟಾಟಾ, ಅದಾಣಿ, ಮಿತ್ತಲ್, ಮಹೀಂದ್ರ ಅಗರ್‌ವಾಲ್ ಮುಂತಾದವರೊಂದಿಗೆ ಗಂಭೀರ ಸಮಾಲೋಚನೆಗಳನ್ನು ನಡೆಸುತ್ತಿದ್ದಾರೆ, ಇದುವರೆಗೆ ಸುಮಾರು 120 ಘಟಾನುಘಟಿಗಳೊಂದಿಗೆ ಬಿಡುವಿಲ್ಲದೆ ಮಾತಾಡಿದ್ದಾರೆ, ಮಾತಾಡುತ್ತಿದ್ದಾರೆ ಎಂದು ಅವರ ತುತ್ತೂರಿ ಮಾಧ್ಯಮಗಳು ವರದಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಆರ್ಥಿಕ ವಿಶ್ಲೇಷಕರು ಮೇಲೆ ಹೇಳಿದ ಉದ್ಗಾರ ಮಾಡಿದ್ದಾರೆ. ಏಕೆಂದರೆ ಅವರಿಗೆ ಕಳೆದ ಬಜೆಟ್ ನಂತರ ಹೆಚ್ಚುವರಿಯಾಗಿ ಕೊಟ್ಟ ಸುಮಾರು 2ಲಕ್ಷ ಕೋಟಿ ರೂ.ಗಳ 'ಉತ್ತೇಜನೆ'ಯಿಂದ ಆರ್ಥಿಕ ಮಂದಗತಿ ಸರಿಹೋಗಿಲ್ಲ ಮಾತ್ರವಲ್ಲ, ಇನ್ನಷ್ಟು ದುರ್ಗತಿಗಿಳಿದಿರುವ, ಇನ್ನೊಂದೆಡೆಯಲ್ಲಿ ಬಜೆಟ್ ಅಂಕಿ–ಅಂಶಗಳೆಲ್ಲ ಅಸ್ತವ್ಯಸ್ತಗೊಂಡಿರುವ ಮಾಹಿತಿಗಳೇ ಬರುತ್ತಿವೆ.

ಉದಾಹರಣೆಗೆ, ಜಿಡಿಪಿ ದರ 7% ಇರುತ್ತದೆ ಎಂಬ ಬಜೆಟ್ ಅಂದಾಜನ್ನು ಈಗಾಗಲೇ ಸರಕಾರವೇ 5%ಕ್ಕೆ ಇಳಿಸಿದೆ. ಇದು ಕಳೆದ 44 ವರ್ಷಗಳಲ್ಲೇ ಅತೀ ಕಡಿಮೆ ದರ ಎನ್ನಲಾಗಿದೆ. ಈಗ ಐಎಂಎಫ್ ಅದನ್ನು 4.8%ಕ್ಕಿಳಿಸಿದೆ ಮಾತ್ರವಲ್ಲ. ಜಾಗತಿಕ ಮಂದಗತಿಯಿಂದಾಗಿ ಭಾರತದಲ್ಲಿ ಮಂದಗತಿ ಕಾಣುತ್ತಿದೆ ಎಂಬ ಕೆಲವರ ಸಬೂಬನ್ನು ಅಲ್ಲಗಳೆಯುತ್ತ ಭಾರತದ ಮಂದಗತಿ ಜಾಗತಿಕ ಮಂದಗತಿಗೆ ಕಾರಣವಾಗುತ್ತಿದೆ ಎಂದು ಹೇಳಿರುವುದು ಈಗ ನ್ಯೂಇಂಡಿಯಾದ ಬಗ್ಗೆ ಮಾತಾಡುವ ಅಚ್ಛೆದಿನ್‌ವಾಲಾಗಳನ್ನು ಕಕ್ಕಾಬಿಕ್ಕಿಯಾಗಿಸಿದೆ.

ಈ ನಡುವೆ ಬಂದಿರುವ ಆರ್ಥಿಕ ಮಾಹಿತಿಗಳನ್ನು ನೋಡಿ:

- ಹಣದುಬ್ಬರ ದರ ಕಳೆದ ಐದು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ಏರಿದೆ, ಅದರಲ್ಲೂ ಆಹಾರ ಪದಾರ್ಥಗಳದ್ದೇ ಮೇಲುಗೈ.
- ಕೈಗಾರಿಕಾ ಉತ್ಪಾದನೆಯೂ 13 ವರ್ಷಗಳಲ್ಲಿಯೇ ಅತೀ ಕಡಿಮೆ ಮಟ್ಟಕ್ಕಿಳಿದಿದೆ. ಕೃಷಿ ಉತ್ಪಾದನೆಯೂ ಇಳಿದಿದೆ.
- ಸತತ 5ನೇ ತಿಂಗಳು ರಫ್ತು ಪ್ರಮಾಣ ಇಳಿದಿದೆ.
- ತೆರಿಗೆ ಸಂಗ್ರಹದ ಗುರಿಯಲ್ಲಿ ಸುಮಾರು 2.5 ಟ್ರಿಲಿಯನ್(ಲಕ್ಷ ಕೋಟಿ) ರೂ. ಖೋತಾ ಆಗಬಹುದು ಎಂದು ಈಗ ಅಂದಾಜು ಮಾಡಲಾಗಿದೆ.
- ನಿರುದ್ಯೋಗವಂತೂ ಸ್ವತಂತ್ರ ಭಾರತದಲ್ಲೆ ಅತ್ಯುನ್ನತ ಮಟ್ಟಕ್ಕೇರಿದೆ. 20ರಿಂದ 29 ವರ್ಷ ವಯೋಗುಂಪಿನ ಯುವ ಸ್ನಾತಕ ಉದ್ಯೋಗಾಕಾಂಕ್ಷಿಗಳಲ್ಲಿ 42.8% ಮಂದಿಗೆ ಉದ್ಯೋಗವಿಲ್ಲ.
- ಅಂಬಾನಿಯೇತ್ಯಾದಿಗಳಿಗೆ 2ಲಕ್ಷ'ಕೋಟಿ ರೂ.ಗಳ ಉತ್ತೇಜನೆ ನೀಡಿದರೂ, ಹೂಡಿಕೆ ದರ ಏರಿಕೆ ಕಳೆದ ವರ್ಷದ 10%ಕ್ಕೆ ಹೋಲಿಸಿದರೆ, ಈ ಬಾರಿ 1%ವೂ ಇರಲಿಕ್ಕಿಲ್ಲ ಎಂದು ಅಂದಾಜು ಮಾಡಲಾಗಿದೆ.

ಹಾಗಿದ್ದರೆ, ಉದ್ಯೋಗಾವಕಾಶ ನಿರ್ಮಾಣವಾದರೂ ಹೇಗೆ ಸಾಧ್ಯ? ಬಹುಶಃ ಅವರ ಮುಂದಿರುವ ಪ್ರಶ್ನೆ ಬೇಡಿಕೆಯೇ ಇಲ್ಲದಿದ್ದರೆ ಹೂಡಿಕೆ ಮಾಡುವುದೇಕೆ? ಆದರೂ ಇವನ್ನೆಲ್ಲ ಸರಿ ಪಡಿಸುವುದು ಹೇಗೆ ಎಂದು ಮತ್ತೆ ಅವರನ್ನೇ ಕೇಳುತ್ತಿದ್ದಾರೆ!

ಇನ್ನೊಂದು ಗಮನಾರ್ಹ ಸುದ್ದಿಯೆಂದರೆ ಈ ಎಲ್ಲ 'ಸಮಾಲೋಚನ'ಗಳಲ್ಲಿ ದೇಶದ 'ಮೊದಲ' ಮಹಿಳಾ ಹಣಕಾಸು ಮಂತ್ರಿಗಳೆನಿಸಿಕೊಂಡವರು ಕಾಣಿಸುತ್ತಲೇ ಇಲ್ಲ. ಅವರ ವಾಕ್ಚಾತುರ್ಯವನ್ನು ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ಸಮರ್ಥನೆಗೇ ಮೀಸಲಿಡಲಾಗಿದೆ ಎಂದು ಕಾಣುತ್ತದೆ!

ಘಾಸಿಗೊಂಡ ಆರ್ಥಿಕ –ಗಾಯಗೊಂಡ ವಿದ್ಯಾರ್ಥಿಗಳು –ವ್ಯತ್ಯಾಸವೇ ಕಾಣುತ್ತಿಲ್ಲ



ವ್ಯಂಗ್ಯಚಿತ್ರ: ಅಲೋಕ್ ನಿರಂತರ

ನ್ಯೂ ಇಂಡಿಯಾ ನ್ಯೂಸ್

ಇನ್ನಷ್ಟು ಶ್ರೇಯಾಂಕಗಳಲ್ಲಿ, ಸೂಚ್ಯಂಕಗಳಲ್ಲಿ ಇಳಿಕೆ

ಐಎಂಎಫ್ ಭಾರತದ ಜಿಡಿಪಿಯನ್ನು ಇಳಿಸಿದ ಸುದ್ದಿಯ ಬೆನ್ನಲ್ಲೇ ಇನ್ನೂ ಕೆಲವು ಸೂಚ್ಯಂಕಗಳು 'ನ್ಯೂ ಇಂಡಿಯಾ'ಕ್ಕೆ ಖಂಡಿತ ಸಂತೋಷದಾಯಕವೇನೂ ಅಲ್ಲದ ಸುದ್ದಿಗಳನ್ನು ತಂದಿವೆ.

ವರ್ಲ್ಡ್ ಇಕನಾಮಿಕ್ ಫೋರಂ(ಡಬ್ಲ್ಯುಇಎಫ್–ಅಂದರೆ ಜಾಗತಿಕ ಆರ್ಥಿಕ ವೇದಿಕೆ) ಹೊಸದಾಗಿ ಕಲೆ ಹಾಕಿದ **'ಸಾಮಾಜಿಕ ಚಲನಶೀಲತೆ ಸೂಚ್ಯಂಕ'** ದಲ್ಲಿಯೂ ಭಾರತದ ಸ್ಥಾನ ಬಹಳ ಕೆಳಗೆ ಇದೆ ಎಂದು ದವೋಸ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಇಎಫ್ ನೇ 50ನೇ ಸಭೆಯ ಸಂದರ್ಭದಲ್ಲಿ ಪ್ರಕಟಿಸಿರುವ ವರದಿಯಲ್ಲಿ ತಿಳಿಸಲಾಗಿದೆ. ಭಾರತ 82 ದೇಶಗಳಲ್ಲಿ 76ನೇ ಸ್ಥಾನದಲ್ಲಿದೆ.

ಸಾಮಾಜಿಕ ಚಲನೆಗೆ , ಅಂದರೆ ಸಾಮಾಜಿಕ–ಆರ್ಥಿಕ ಹಿನ್ನೆಲೆಯೇನೇ ಇದ್ದರೂ ತಮ್ಮ ಬದುಕಿನ ಸಾಧ್ಯತೆಯನ್ನು ಈಡೇರಿಸಿಕೊಳ್ಳು ಸಮಾನ ಅವಕಾಶ ಇದ್ದರೆ, ಅದು ಆರ್ಥಿಕ ಬೆಳವಣಿಗೆಗೂ ಪ್ರೋತ್ಸಾಹದಾಯಕ ವಾಗುತ್ತದೆ ಎಂದು ಡಬ್ಲ್ಯುಇಎಫ್ ಹೇಳಿದೆ.

ಜನವರಿ 22ರಂದು ಮತ್ತೊಂದು ಸೂಚ್ಯಂಕ ಪ್ರಕಟವಾಗಿದೆ– **ವಾರ್ಷಿಕ ಪ್ರಜಾಪ್ರಭುತ್ವ ಸೂಚ್ಯಂಕ**. ಇದರಲ್ಲಿ ಭಾರತದ ಸ್ಥಾನ 41 ರಿಂದ 51ಕ್ಕೆ ತೀವ್ರವಾಗಿ ಜಾರಿದೆ.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವದ ಸೂಚ್ಯಂಕದಲ್ಲಿ ಈ ಭಾರೀ ಇಳಿಕೆಗೆ ನಾಗರಿಕ ಸ್ವಾತಂತ್ರ್ಯಗಳ ಸವೆತ ಕಾರಣ ಎಂದು ಈ ಸೂಚ್ಯಂಕವನ್ನು ಪ್ರಕಟಿಸುವ ಇಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ ಹೇಳಿದೆ. ಇದರಲ್ಲಿ ಅದು ಜಮ್ಮು ಮತ್ತು ಕಾಶ್ಮೀರದಲ್ಲಿನ ನಿರ್ಬಂಧಗಳು ಮತ್ತು ಅಸ್ಸಾಂನ ಎನ್‌ಆರ್‌ಸಿಯ ಪ್ರಸ್ತಾಪವನ್ನು ಮಾಡಿದೆ.

ಈ ನಡುವೆ ಈ ವರ್ಷದ ಒಕ್ಸ್‌ಫಾಮ್ ವರದಿಯೂ ಬಂದಿದ್ದು ದೇಶದಲ್ಲಿ ಅಸಮಾನತೆ ಹೆಚ್ಚುತ್ತಿದೆ ಎಂಬುದನ್ನು ಖಾತ್ರಿಗೊಳಿಸಿದೆ. (ಪುಟ 13 ರಲ್ಲಿನ ಲೇಖನವನ್ನು ನೋಡಿ)



ಗೃಹಮಂತ್ರಿ ಅಮಿತ್ ಷಾರವರ ಕಲ್ಪನೆಯ ಭಾರತದಲ್ಲಿ ಯುವಕರೂ ಇಲ್ಲ, ಯುವತಿಯರೂ ಇಲ್ಲ, ಕೇವಲ ಟ್ರೋಲ್‌ಗಳಷ್ಟೇ ಇದ್ದಾರೆ! –ಜ್ಯೋತಿ ಯಾದವ್, ದಿ ಪ್ರಿಂಟ್(ಹಿಂದಿ), ಜನವರಿ 18

ಯು.ಪಿ. ಸಿಎಂಗೆ ಶಾಹೀನ್ ಬಾಗ್ ಪ್ರತಿಭಟನಾಕಾರರ ಪ್ರತ್ಯುತ್ತರ –ನಾಚಿಕೆ ಯಾರಿಗೆ ಆಗಬೇಕು?

ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ಪ್ರತಿಭಟನೆಗಳು ಬಿಜೆಪಿ ಮಂದಿಯ, ಅದರಲ್ಲೂ ಮುಖಂಡರುಗಳ ವಿವಿಧ ಮುಖಗಳನ್ನು ಬಯಲಿಗೆ ತರುವಂತೆ ಕಾಣುತ್ತಿದೆ. ಗೃಹಮಂತ್ರಿಗಳು ಈ ಮೂರರ ಕ್ರೊನೋಲಜಿಯನ್ನು ಅಂದರೆ ಸಮಯಾನುಕ್ರಮವನ್ನು ಸಂಸತ್ತಿನಲ್ಲೇ ಹೇಳಿದ್ದರೂ ಅವರ ಪ್ರಧಾನ ಮಂತ್ರಿಗಳು ಎನ್‌ಆರ್‌ಸಿ ಬಗ್ಗೆ ಚರ್ಚೆಯೇ ಆಗಿಲ್ಲವೆಂದು ಹೇಳಿ ಅವರ ಬೆಂಬಲಿಗರಲ್ಲಿ ಹಲವರನ್ನೂ ದಂಗು ಬಡಿಸಿದರು. ಈ ಪರಂಪರೆ ಮುಂದುವರೆಯುತ್ತಿದೆ.

ಉತ್ತರಪ್ರದೇಶದ ಮುಖ್ಯಮಂತ್ರಿಗಳು ದಿಲ್ಲಿಯ ಶಾಹೀನ್ ಬಾಗ್‌ನಿಂದ ಹಿಡಿದು ಲಕ್ನೌನ ಘಂಟಾಘರ್ ವರೆಗೆ ಹಲವೆಡೆಗಳಲ್ಲಿ ಮಹಿಳೆಯರು ರಾತ್ರಿ–ಹಗಲು ಪ್ರತಿಭಟನೆ ನಡೆಸುತ್ತಿರುವುದನ್ನು ಕಂಡು ಕೋಪಾವಿಷ್ಟರಾಗಿರಬೇಕು. ಸಭೆಯೊಂದರಲ್ಲಿ ಮಾತಾಡುತ್ತ "ತಮ್ಮ ಈ ಮಹಿಳೆಯರನ್ನು ಪೌರತ್ವ ದ ಬಗ್ಗೆ ಏನೂ ಗೊತ್ತಿರದಿದ್ದರೂ ರಾತ್ರಿ ಚಳಿಯಲ್ಲಿ ಬೀದಿಯಲ್ಲಿ ಕೂರಿಸಿ ಅವರ ಪುರುಷರು ಮನೆಯಲ್ಲಿ ಬೆಚ್ಚಗೆ ಹಾಸಿಗೆಯಲ್ಲಿ ನಾಚಿಕೆಯಿಲ್ಲದೆ ಮಲಗಿದ್ದಾರೆ" ಎಂದು ಮೂದಲಿಸಿದರು.


ಇದಕ್ಕೆ ಪ್ರತ್ಯುತ್ತರ ನೀಡಿದ ಶಾಹೀನ್ ಬಾಗ್ ಮಹಿಳೆಯರು ಮುಖ್ಯಮಂತ್ರಿಗಳಿಗೇ ನಾಚಿಕೆಯಾಗಬೇಕು, ಇಲ್ಲಿ ಪುರುಷರೂ ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ, ಅವರಿಗೆ ಕಾಣಿಸುವುದಿಲ್ಲವೇ ಎಂದು ಕೇಳಿದರು, ನಮಗೆ ಏನೂ ಗೊತ್ತಿಲ್ಲವಾದರೆ ಅವರೇ ಏಕೆ ಇಲ್ಲಿ ಬಂದು ನಮಗೆ 'ಜ್ಞಾನ' ನೀಡುವುದಿಲ್ಲ ಎಂದು ಒಬ್ಬ ಮಹಿಳೆ ಪ್ರಶ್ನಿಸಿದರು. ಮು.ಮಂ.ಗಳ ಮನೆಯಲ್ಲಿ ಯಾರೂ ಹೆಂಗಸರಿಲ್ಲ ಎಂದು ಕಾಣುತ್ತದೆ ಎಂದು ಇನ್ನೊಬ್ಬರು ಪ್ರತಿಕ್ರಿಯಿಸಿದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ಇದಕ್ಕೆ ಮೊದಲು ಮೊದಲು ಇನ್ನೊಬ್ಬ ಬಿಜೆಪಿ ಮುಖಂಡರು ಇವರಿಗೆ 500 ರೂ., ಬಿರ್ಯಾನಿ ಕೊಡುತ್ತಾರೆ, ಅದಕ್ಕೆ ಬಂದಿದ್ದಾರೆ ಎಂದು ಲೇವಡಿ ಮಾಡಿದ ಬಗ್ಗೆ ಕೇಳಿದ ಪತ್ರಕರ್ತನಿಗೆ ಒಬ್ಬ ಮಹಿಳೆ ಕೊಟ್ಟ ಉತ್ತರ–ನೀವು 1000ರೂ. ಕೊಟ್ಟು ನೋಡಿ!


ಇಲ್ಲಿ ಬೆಂಗಳೂರಿನಲ್ಲಿ ತನ್ನ 'ಪಂಕ್ಚರ್‌ವಾಲಾ' ಟಿಪ್ಪಣಿಗೆ 'ಖ್ಯಾತ'ರಾಗಿರುವ ಎಂಪಿ ಈ ಬಾರಿ ಹಾಲಿ ಗೃಹಮಂತ್ರಿಗಳನ್ನು ದೇಶದ ಮೊದಲ ಗೃಹಮಂತ್ರಿಗಳೊಂದಿಗೆ ಹೋಲಿಸುವ ಪ್ರಯತ್ನ ನಡೆಸಿ ಇನ್ನಷ್ಟು 'ಖ್ಯಾತ'ರಾಗಿದ್ದಾರೆ.

ಅತ್ತ ಬಂಗಾಳದಲ್ಲಿ ಅಲ್ಲಿಯ ಬಿಜೆಪಿ ಅಧ್ಯಕ್ಷರು ಉ.ಪ್ರ. ಸಿಎಂ ಗಿಂತಲೂ ಮುಂದೆ ಹೋಗಿ ತಮ್ಮ 'ನೇರ ನುಡಿ'ಗಳ ಮೂಲಕ ಈ ಮುಖಂಡರ ನಿಜ ಹೂರಣವನ್ನು ನಿರ್ಭಿಡೆಯಾಗಿ ಪ್ರದರ್ಶಿಸುತ್ತಲೇ ಇದ್ದಾರೆ.

ಈ ನಡುವೆ ಶಾಹೀನ್ ಬಾಗ್ ಮಹಿಳೆ ಹೇಳಿದಂತೆ ಅವರಿಗೆ ಸಿಎಎ ಇತ್ಯಾದಿ ಬಗ್ಗೆ ;ಜ್ಞಾನ' ನೀಡುವ ಬದಲು ಪ್ರಧಾನಿಗಳು 'ಪರೀಕ್ಷಾ ಪೇ ಚರ್ಚಾ' ನಡೆಸಿ ವ್ಯಂಗ್ಯ ಚಿತ್ರಕಾರರಿಗೆ ಒಳ್ಳೆಯ ವಿಷಯ ಒದಗಿಸಿದ್ದಾರೆ. ಅವರು ಾದ್ಯೋಗದ ಮೇಲೂ ಚರ್ಚೆ ನಡೆಸಿದ್ದರೆ ಒಳ್ಳೆಯದಿತ್ತು ಎಂದು ಒಬ್ಬರು ಹೇಳಿದರೆ, ಇನ್ನೊಬ್ಬರು ತಮ್ಮ ಮುಖಂಡರಿಗೆ ಚರ್ಚೆಗಳನ್ನು ಹೇಗೆ ನಡೆಸಬೇಕು ಎಂದು ಚರ್ಚೆ ನಡೆಸಿದ್ದರೆ ಚೆನ್ನಾಗಿತ್ತು ಎಂದು ಒಬ್ಬ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ.




ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್



ಕೊಡಲು ಮರೆತ ಚಿತ್ರ
ಎನ್‌ಆರ್‌ಸಿ ಹೋಗಾ– ನೋ ಎನ್‌ಆರ್‌ಸಿ
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

2020ರ ಕುಬೇರರು ಮತ್ತು ಆರ್ಥಿಕ ಅಸಮಾನತೆಗಳು



ಆಕ್ಸ್‌ಫ್ಯಾಮ್ ಈ ವಾರ ಪ್ರಕಟಿಸಿರುವ ವರದಿ ಜಾಗತಿಕ ಅಸಮಾನತೆ ಆಘಾತಕರ ರೀತಿಯಲ್ಲಿ ವ್ಯಾಪಕಗೊಂಡಿದೆ, ಬೇರೂರಿಬಿಟ್ಟಿದೆ ಎಂದು ಆತಂಕ ವ್ಯಕ್ತಪಡಿಸಿದೆ. ಅದು ತನ್ನ ಈ ವರ್ಷದ ಅಧ್ಯಯನಕ್ಕೆ "ಟೈಮ್ ಟು ಕೇರ್" (ಅಂದರೆ ನಿಗಾ ವಹಿಸಬೇಕಾದ ಸಮಯ) ಎಂಬ ಶಿರೋನಾಮೆಯನ್ನು ಕೊಟ್ಟಿದೆ. ಒಂದು ಜಾಗತಿಕ ವ್ಯಾಧಿಯಾಗಿ ಪರಿಣಮಿಸಿರುವ ಅಸಮಾನತೆಗಳ ಈ ಬಿಕ್ಕಟ್ಟನ್ನು ಸರ್ಕಾರಗಳು ಸೃಷ್ಟಿಸಿವೆ. ಅದನ್ನು ಸರ್ಕಾರಗಳು ಈಗ ಪರಿಹರಿಸಲೇ ಬೇಕು. ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹಾಕುವ ಮೂಲಕ ಕಡು ಬಡತನವನ್ನು ನಿವಾರಿಸಬಹುದು ಎಂದು ಆಕ್ಸ್‌ಫ್ಯಾಮ್ ಹೇಳುತ್ತದೆ.

ಕೆ.ಎಂ. ನಾಗರಾಜ್

ಜಾಗತಿಕ ಆರ್ಥಿಕ ವೇದಿಕೆ (World Economic Forum) ಎಂಬುದು ಜಗತ್ತಿನ ಭಾರೀ ಶ್ರೀಮಂತರ ಒಂದು ಕೂಟ. ಈ ಕೂಟವು ಸ್ವಿಜರ್‌ಲ್ಯಾಂಡ್‌ನ ದವೋಸ್‌ನಲ್ಲಿ ಆರ್ಥಿಕ ವಿದ್ಯಮಾನಗಳಿಗೆ ಸಂಬಂಧಿಸಿ ಪ್ರತಿ ವರ್ಷವೂ ಒಂದು ಜಾಗತಿಕ ಶೃಂಗ ಸಭೆ ನಡೆಸುತ್ತದೆ. ಅಮೇರಿಕಾದ ಅಧ್ಯಕ್ಷರಿಂದ ಹಿಡಿದು, ಅಧಿಕಾರಸ್ಥ ರಾಜಕೀಯ ನಾಯಕರು, ಉದ್ಯಮಪತಿಗಳು, ಅರ್ಥಶಾಸ್ತ್ರಜ್ಞರು, ಕ್ರೀಡಾ ಪಟುಗಳು, ಸಿನೆಮಾ ತಾರೆಯರು ಸೇರಿದಂತೆ ದೇಶ ದೇಶಗಳ ಹಲವಾರು ಖ್ಯಾತ ನಾಮರು ಈ ಸಭೆಯಲ್ಲಿ ಭಾಗವಹಿಸುತ್ತಾರೆ. ಈ ಸಭೆ ಸೇರುವ ಮುನ್ನ, ಆಕ್ಸ್‌ಫಾಮ್ (Oxfam) ಎಂಬ ಒಂದು ಸ್ವಯಂ ಸೇವಾ ಸಂಸ್ಥೆಯು, ಸ್ವಿಜರ್‌ಲ್ಯಾಂಡ್‌ನ ಕ್ರೆಡಿಟ್ ಸೂಸೆ ಎಂಬ ಸಂಸ್ಥೆ ಪ್ರಕಟಿಸುವ ಅಂಕಿ-ಅಂಶಗಳನ್ನು ಆಧರಿಸಿ, ಜಾಗತಿಕ ಕುಬೇರರ ಪಟ್ಟಿ ಮತ್ತು ಸಂಪತ್ತಿನ ಅಸಮಾನತೆಗಳ ಜಾಗತಿಕ ವರದಿಯನ್ನು ಪ್ರತಿ ವರ್ಷವೂ ಬಿಡುಗಡೆ ಮಾಡುತ್ತದೆ. ನಮ್ಮ ಮಾಧ್ಯಮಗಳು ಈ ವರದಿಯನ್ನು, ಅದರಲ್ಲೂ ಮುಖ್ಯವಾಗಿ, ಭಾರತದ ಕುಬೇರರ ಪಟ್ಟಿಯ ಬಗ್ಗೆ ವ್ಯಾಪಕವಾಗಿ ಬಿತ್ತರಿಸುತ್ತವೆ.

ಆಕ್ಸ್‌ಫ್ಯಾಮ್ ವರದಿ ಪ್ರಕಟಿಸಿರುವ ಆರ್ಥಿಕ ಅಸಮಾನತೆಗಳ ಮಾಹಿತಿಯ ಮುಖ್ಯಾಂಶಗಳು ಹೀಗಿವೆ:

* ವಿಶ್ವದ ಒಟ್ಟು 758 ಕೋಟಿ ಜನಸಂಖ್ಯೆಯ ಪೈಕಿ, ಕೇವಲ ಶೇ.1 ಭಾಗದಷ್ಟಿರುವ ಶ್ರೀಮಂತರು(ಏಳೂವರೆ ಕೋಟಿ ಮಂದಿ) ಹೊಂದಿರುವ ಸಂಪತ್ತು, ಎಲ್ಲ ದೇಶಗಳ 690 ಕೋಟಿ ಜನರು ಹೊಂದಿರುವ ಸಂಪತ್ತಿನ ಎರಡು ಪಟ್ಟಿಗಿಂತಲೂ ಅಧಿಕವಾಗಿದೆ.

* ವಿಶ್ವದ ಒಟ್ಟು 2153 ಡಾಲರ್ ಬಿಲಿಯನೇರ್‌ಗಳು (ಒಂದು ಬಿಲಿಯನ್ = ನೂರು ಕೋಟಿ) ಹೊಂದಿರುವ ಸಂಪತ್ತು, ವಿಶ್ವದ 460 ಕೋಟಿ ಜನರು (ಅಂದರೆ ವಿಶ್ವದ ಒಟ್ಟು ಜನಸಂಖ್ಯೆಯ 60% ಭಾಗದಷ್ಟು) ಹೊಂದಿರುವ ಸಂಪತ್ತಿಗೆ ಸಮನಾಗಿದೆ.

* 2010ರಲ್ಲಿ 1,000ದಷ್ಟಿದ್ದ ಈ ಡಾಲರ್ ಬಿಲಿಯನೇರ್‌ಗಳ ಸಂಖ್ಯೆ 2019ರಲ್ಲಿ 2153ಕ್ಕೆ ಏರಿದೆ. ಇದೇ ಅವಧಿಯಲ್ಲಿ, ಭಾರತದ ಡಾಲರ್ ಬಿಲಿಯನೇರ್‌ಗಳ ಸಂಖ್ಯೆಯು 25ರಿಂದ 63ಕ್ಕೆ ಏರಿದೆ. ಅಂದರೆ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಡಾಲರ್ ಬಿಲಿಯನೇರ್‌ಗಳು ಎರಡು ಪಟ್ಟು ಹೆಚ್ಚಾಗಿದ್ದಾರೆ. ಅದೇ ಸಮಯದಲ್ಲಿ, ವಿಶ್ವದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರು (370 ಕೋಟಿ ಜನರು), 5.5 ಡಾಲರ್‌ಗಿಂತ ಕಡಿಮೆ ಹಣದಲ್ಲಿ ದಿನದ ಜೀವನ ಸಾಗಿಸುತ್ತಿದ್ದಾರೆ.


* ಅಮೇರಿಕಾದ ಫೆಡರಲ್ ರಿಸರ್ವ್‌ನ ವರದಿಯ ಪ್ರಕಾರ, ಮೇಲ್ತುದಿಯಲ್ಲಿರುವ ಅತಿ ಶ್ರೀಮಂತರು (ಜನಸಂಖ್ಯೆಯ 1%), ಕಳೆದ ಮೂರು ದಶಕಗಳಲ್ಲಿ, 21 ಟ್ರಿಲಿಯನ್‌ಡಾಲರ್‌ನಷ್ಟು ಮೊತ್ತವನ್ನು ಅಧಿಕವಾಗಿ ಸೇರಿಸಿಕೊಂಡಿದ್ದಾರೆ. ಅದೇ ಅವಧಿಯಲ್ಲಿ, ತಳ ಭಾಗದ ಶೇ.50 ಮಂದಿಯು ತಾವು ಹೊಂದಿದ್ದ ಸಂಪತ್ತಿನಲ್ಲಿ 900 ಬಿಲಿಯನ್‌ಡಾಲರ್‌ನಷ್ಟು ಮೊತ್ತವನ್ನು ಕಳೆದುಕೊಂಡಿದ್ದಾರೆ.

ನೊಬೆಲ್ ಪುರಸ್ಕೃತ ಜೋಸೆಫ್ ಸ್ಟಿಗ್‌ಲಿಟ್ಸ್ ಹೇಳುತ್ತಾರೆ: ಅಮೇರಿಕಾದ ಒಬ್ಬ ಸಾಧಾರಣ ಕಾರ್ಮಿಕನ ಇಂದಿನ ಸಂಪಾದನೆ 45 ವರ್ಷಗಳ ಹಿಂದಿನ ಮಟ್ಟಕ್ಕಿಂತಲೂ 40% ಕಡಿಮೆ ಇದೆ. ಅಮೇರಿಕಾದ ಮೇಲಿನ 1% ಶ್ರೀಮಂತರು ರಾಷ್ಟ್ರೀಯ ವರಮಾನದ 22% ಪಾಲು ಪಡೆಯುತ್ತಿದ್ದಾರೆ. ಅದರಲ್ಲೂ ತುತ್ತ ತುದಿಯಲ್ಲಿರುವ 0.1% ಶ್ರೀಮಂತರು 11% ಪಾಲು ಹೊಂದಿದ್ದಾರೆ.

ಭಾರತದ 63 ಡಾಲರ್ ಬಿಲಿಯನೇರ್‌ಗಳು ಹೊಂದಿರುವ ಒಟ್ಟು ಸಂಪತ್ತು, 24,42,000 ಕೋಟಿ ರೂ ಗಳ ಗಾತ್ರದ 2018-19ರ ಕೇಂದ್ರ ಸರ್ಕಾರದ ಬಜೆಟ್‌ಗಿಂತಲೂ ಅಧಿಕವಾಗಿದೆ. ಭಾರತದ ಒಟ್ಟು ಜನಸಂಖ್ಯೆಯ(135 ಕೋಟಿಯ ಮೇಲಿದೆ) ಶೇ.ಒಂದು ಭಾಗದಷ್ಟಿರುವ ಶ್ರೀಮಂತರು(13.5 ಕೋಟಿ ಮಂದಿ) ಭಾರತದ ಒಟ್ಟು ಜನಸಂಖ್ಯೆಯ ತಳಭಾಗದ 70% ಜನರು (ಸುಮಾರು 95 ಕೋಟಿ ಮಂದಿ) ಹೊಂದಿರುವ ಸಂಪತ್ತಿನ ನಾಲ್ಕು ಪಟ್ಟಿಗಿಂತಲೂ ಅಧಿಕ ಸಂಪತ್ತನ್ನು ಹೊಂದಿದ್ದಾರೆ.

ಥಾಮಸ್ ಪಿಕೆಟಿ ಮತ್ತು ಚಾನ್ಸೆಲ್ ನಡೆಸಿದ ಒಂದು ಅಧ್ಯಯನದ ಪ್ರಕಾರ, ಭಾರತದಲ್ಲಿ, 1982ರ ರಾಷ್ಟ್ರೀಯ ವರಮಾನದಲ್ಲಿ ಮೇಲ್ತುದಿಯ 1% ಮಂದಿಯ ಪಾಲು ಶೇ.6.2ರಷ್ಟಿತ್ತು; ಇದೇ ಗುಂಪಿನ ವರಮಾನದ ಪಾಲು 2013-14ರ ಹೊತ್ತಿಗೆ ಶೇ.21.7ರಷ್ಟು ಎತ್ತರಕ್ಕೆ ಜಿಗಿದಿದೆ. ರಾಜ ಮಹರಾಜರ ಕಾಲದಲ್ಲೂ ಇಷ್ಟೊಂದು ಹೆಚ್ಚಿನ ಮಟ್ಟದ ಅಸಮಾನತೆ ಇರಲಿಲ್ಲ. ಈ ಸಂದರ್ಭದಲ್ಲಿ, ಸ್ವಿಜರ್‌ಲ್ಯಾಂಡ್‌ನ ಕ್ರೆಡಿಟ್ ಸೂಸೆ ಎಂಬ ಸಂಸ್ಥೆಯ 2015ರ ವರದಿಯನ್ನು ಉಲ್ಲೇಖಿಸಬಹುದು. ಈ ವರದಿಯ ಪ್ರಕಾರ, ಕೇವಲ ನೂರು ಮಂದಿ ಭಾರತದ ಶ್ರೀಮಂತರು ಹೊಂದಿದ್ದ ಸಂಪತ್ತು, ತಳಭಾಗದ 70% ಜನರು (ಆಗ,ಸುಮಾರು 87 ಕೋಟಿ ಮಂದಿ) ಹೊಂದಿರುವ ಸಂಪತ್ತಿಗೆ ಸಮನಾಗಿತ್ತು. ತುದಿಯಲ್ಲಿದ್ದ 1% ಜನರು 1.9ಟ್ರಿಲಿಯನ್ ಡಾಲರ್ ಸಂಪತ್ತು ಹೊಂದಿದ್ದರೆಂದೂ ಮತ್ತು ಉಳಿದ 99% ಜನರು 0.4ಟ್ರಿಲಿಯನ್ ಡಾಲರ್ ಸಂಪತ್ತು ಹೊಂದಿದ್ದರೆಂದೂ ಅದು ತಿಳಿಸಿತ್ತು. (1% ಜನರ 1.9ಟ್ರಿಲಿಯನ್ ಡಾಲರ್ ಸಂಪತ್ತಿನಲ್ಲಿ, 0.1% ಮಂದಿ 1.4ಟ್ರಿಲಿಯನ್ ಡಾಲರ್ ಮತ್ತು .9% ಮಂದಿ 0.5ಟ್ರಿಲಿಯನ್ ಡಾಲರ್ ಸಂಪತ್ತು ಹೊಂದಿದ್ದರು ಎಂದು ತಿಳಿಸಿತ್ತು).

* ಆರೋಗ್ಯ ರಕ್ಷಣೆಯ ಸಲುವಾಗಿ ಮಾಡುವ ಸಣ್ಣ ಪುಟ್ಟ ಕೈ ಖರ್ಚುಗಳ ಕಾರಣದಿಂದಾಗಿಯೇ ಪ್ರತಿ ವರ್ಷವೂ ವಿಶ್ವದ 10 ಕೋಟಿ ಮಂದಿ ಬಡತನಕ್ಕೆ ತಳ್ಳಲ್ಪಡುತ್ತಾರೆ. ಭಾರತದಲ್ಲಿ, ಆರೋಗ್ಯ ರಕ್ಷಣೆಯ ವೆಚ್ಚಗಳಿಂದಾಗಿ ಸುಮಾರು 7 ಕೋಟಿ ಮಂದಿ ಪ್ರತಿ ವರ್ಷವೂ ಬಡತನಕ್ಕೆ ತಳ್ಳಲ್ಪಡುತ್ತಾರೆ. ಬಡತನದಿಂದಾಗಿ, ವಿಶ್ವದಲ್ಲಿ ಪ್ರತಿ ಐದರಲ್ಲಿ ಒಂದು ಮಗು ಶಾಲೆಗೆ ಹೋಗುವುದೇ ಇಲ್ಲ.



* ಜಾಗತಿಕವಾಗಿ, ಮಹಿಳೆಯರ ಸಂಪಾದನೆಯು ಪುರುಷರಿಗಿಂತ ಶೇ.24ರಷ್ಟು ಕಡಿಮೆ ಇದೆ. ಇಂದಿನ ಅರ್ಥವ್ಯವಸ್ಥೆಯಲ್ಲಿ ಅವರಿಗೆ ದೊರೆಯುತ್ತಿರುವ ಪ್ರಯೋಜನ ಅತ್ಯಲ್ಪವೇ. ಮಹಿಳೆಯರು ಮತ್ತು ಹುಡುಗಿಯರು ಮಾಡುತ್ತಿರುವ ಲಾಲನೆ ಪಾಲನೆಯ ಕೆಲಸಗಳಿಗೆ ಪ್ರತಿ ಫಲವೇ (ಕೂಲಿ) ಇಲ್ಲ. ಅವರು ಮಾಡುವ ಕೆಲಸದ ಮೌಲ್ಯವನ್ನು ಲೆಕ್ಕ ಹಾಕಿದರೆ, ಕಡಿಮೆ ಎಂದರೂ 10.8 ಟ್ರಿಲಿಯನ್ ಡಾಲರ್‌ಗಳಾಗುತ್ತದೆ. ಈ ಮೌಲ್ಯವು, ಜಾಗತಿಕ ತಂತ್ರಜ್ಞಾನ ಕೈಗಾರಿಕೆಯ ವಹಿವಾಟಿನ ಗಾತ್ರದ ಮೂರು ಪಟ್ಟಿಗಿಂತಲೂ ಹೆಚ್ಚಾಗುತ್ತದೆ. ಪ್ರತಿ ಫಲವಿಲ್ಲದ ಅವರ ಈ ಸೇವೆಯೇ ನಮ್ಮ ಅರ್ಥವ್ಯವಸ್ಥೆ, ವ್ಯಾಪಾರ, ಉದ್ದಿಮೆ, ಅಷ್ಟೇ ಏಕೆ ನಮ್ಮ ಇಡೀ ಸಮಾಜವೆಂಬ ವಾಹನವನ್ನು ಎಳೆದೊಯ್ಯುತ್ತಿರುವ ಒಂದು "ಗುಪ್ತ ಇಂಜಿನ್". ಈ ವಾಹನವನ್ನು ಓಡಿಸುತ್ತಿರುವವರೇ, ವಿದ್ಯೆ ಇಲ್ಲದ, ವರಮಾನವಿಲ್ಲದ ಅಥವಾ ಸಮಾಜದ ಆಗು ಹೋಗುಗಳ ಬಗ್ಗೆ ದನಿ ಇಲ್ಲದ ಮಹಿಳೆಯರು. ಜಾಗತಿಕವಾಗಿ, ಕೆಲಸ ಮಾಡುವ ವಯಸ್ಸಿನ ಇಂತಹ 42% ಮಹಿಳೆಯರಿಗೆ ಹಣ ಗಳಿಸುವ ಉದ್ಯೋಗವಿಲ್ಲ, ಏಕೆಂದರೆ, ಕುಟುಂಬದ ಲಾಲನೆ ಪಾಲನೆಯ ಹೊಣೆ ಅವರ ಮೇಲಿದೆ.

*** ಅಸಮಾನತೆಗಳು ಮಿತಿ ಮೀರಿದ ಪ್ರಮಾಣದಲ್ಲಿ ಬೆಳೆಯುತ್ತಿರುವುದನ್ನು ವರದಿ ಹೀಗೆ ಗುರುತಿಸಿದೆ:**

ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ವರ್ಷ ವರ್ಷವೂ ಹೆಚ್ಚುತ್ತಿದೆ. ಅದರಿಂದಾಗಿ, ಜೀವನದ ಅವಕಾಶಗಳು ಕೈಗೆಟುಕುವ ಅಂತರ ದೊಡ್ಡದಾಗುತ್ತಿದೆ. ಲಿಂಗ, ವಾಸ ಸ್ಥಳ, ಜನಾಂಗ, ಜಾತಿ, ಧರ್ಮ ಮುಂತಾದ ಕಾರಣಗಳಿಂದ ಹಾಲಿ ಇರುವ ಆರ್ಥಿಕ ಅಸಮತೆಗಳು ಉಲ್ಬಣಗೊಳ್ಳುತ್ತಿವೆ. ಎಕ್ಕುಟ್ಟು ಹೋಗಿರುವ ನಮ್ಮ ಅರ್ಥವ್ಯವಸ್ಥೆಗಳು, ಜನ ಸಾಮಾನ್ಯರನ್ನು ಹಿಂಡುವ ಮೂಲಕ ಬಿಲಿಯನೇರ್‌ಗಳ ಮತ್ತು ದೊಡ್ಡ ದೊಡ್ಡ ಉದ್ಯಮಪತಿಗಳ ಜೇಬಿಗೆ ಹಣ ಇಳಿಸುತ್ತಿವೆ. ಇಂತಹ ಬಿಲಿಯನೇರ್‌ಗಳು ಇರಬೇಕಾದರೂ ಏಕೆ ಎಂಬ ಪ್ರಶ್ನೆಯನ್ನು ಜನ ಎತ್ತುತ್ತಿದ್ದಾರೆ. ಮೇಲಾಗಿ, ಸಂಪತ್ತಿನ ಅಸಮಾನತೆಗಳು, ಬಡತನವನ್ನು ಜಾಗತಿಕವಾಗಿ ನಿರ್ಮೂಲ ಮಾಡುವಲ್ಲಿ ಅಡ್ಡ ನಿಲ್ಲುತ್ತವೆ.

ಮಿತಿ ಮೀರಿದ ಪ್ರಮಾಣದಲ್ಲಿ ಬೆಳೆಯುತ್ತಿರುವ ಇಂತಹ ಅಸಮಾನತೆಗಳು ಅನಿವಾರ್ಯವೂ ಅಲ್ಲ ಅಥವಾ ಆಕಸ್ಮಿಕವೂ ಅಲ್ಲ. ಇವು ನಮ್ಮ ಸಮಾಜಗಳು ಉದ್ದೇಶಪೂರ್ವಕವಾಗಿ ಮಾಡಿಕೊಂಡ ಆಯ್ಕೆಗಳು ಮತ್ತು ಅವುಗಳನ್ನು ಹಿಮ್ಮೆಟ್ಟಿಸಬಹುದು ಎಂದು ವರದಿ ಹೇಳುತ್ತದೆ.

*** ಅಸಮಾನತೆಗಳು ಮಿತಿ ಮೀರಿದ ಪ್ರಮಾಣದಲ್ಲಿ ಬೆಳೆಯುವ ಕಾರಣಗಳನ್ನು ವರದಿ ಹೀಗೆ ಗುರುತಿಸಿದೆ:**

ಅನೇಕ ಹಿಂದುಳಿದ ದೇಶಗಳಲ್ಲಿ, ಸರ್ಕಾರಗಳು ಅತಿ ಶ್ರೀಮಂತ ವ್ಯಕ್ತಿಗಳ ಮೇಲೆ ಮತ್ತು ಕಂಪೆನಿಗಳ ಮೇಲೆ ಅತ್ಯಂತ ಕಡಿಮೆ ತೆರಿಗೆ ವಿಧಿಸುತ್ತವೆ. ಹಾಗಾಗಿ, ಈ ಸರ್ಕಾರಗಳು ಭಾರೀ ಮೊತ್ತದ ವರಮಾನಗಳನ್ನು ಕಳೆದುಕೊಳ್ಳುತ್ತವೆ. ಅದೇ ಹಣವನ್ನು ಜನರ ಆರೋಗ್ಯ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಬಳಸಿಕೊಳ್ಳಬಹುದಿತ್ತು. ಒಂದು ಅಂದಾಜಿನ ಪ್ರಕಾರ, ತೆರಿಗೆ ವಿಧಿಸುವಲ್ಲಿ ತೋರುವ ಇಂತಹ ಮೃದು ಮತ್ತು ಪಕ್ಷಪಾತದ ಧೋರಣೆಯಿಂದಾಗಿ ಈ ಸರ್ಕಾರಗಳು ಸುಮಾರು 100 ಬಿಲಿಯನ್ ಡಾಲರ್ ವರಮಾನ ಕಳೆದುಕೊಳ್ಳುತ್ತವೆ. (ಇತ್ತೀಚೆಗೆ, ನಮ್ಮ ಕೇಂದ್ರ ಸರ್ಕಾರವು ಕಾರ್ಪೊರೇಟ್‌ಗಳಿಗೆ 1,45,000 ಕೋಟಿ ರೂ ಗಳ ತೆರಿಗೆ ರಿಯಾಯ್ತಿ ಕೊಟ್ಟಿರುವುದನ್ನು ಜ್ಞಾಪಿಸಿಕೊಳ್ಳಬಹುದು).

* ಜಾಗತಿಕ ಆರ್ಥಿಕ ವೇದಿಕೆಯು ತನ್ನ ವಾರ್ಷಿಕ ವರದಿಯಲ್ಲಿ, ಜಾಗತಿಕ ಅರ್ಥವ್ಯವಸ್ಥೆಗೆ ಎದುರಾಗಿರುವ ಕೆಲವು ರಿಸ್ಕ್‌ಗಳಲ್ಲಿ ಸಂಪತ್ತು ಮತ್ತು ವರಮಾನಗಳ ಅಸಮತೆಯೂ ಒಂದು ಎಂದು ಗುರುತಿಸಿದೆ. ಈ ಅಸಮತೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿರುವ ವೇದಿಕೆಯು, ಹೆಚ್ಚೂ ಕಡಿಮೆ ಎಲ್ಲ ದೇಶಗಳಲ್ಲೂ ಇತ್ತೀಚೆಗೆ ಭುಗಿಲೇಳುತ್ತಿರುವ ಆಕ್ರೋಶವನ್ನು ಗುರುತಿಸುದೆ. ಭ್ರಷ್ಟಾಚಾರ, ಸಾಂವಿಧಾನಿಕ ಉಲ್ಲಂಘನೆಗಳು, ಅವಶ್ಯ ವಸ್ತುಗಳ ಹಾಗೂ ಮೂಲ ಸೇವೆಗಳ ವಿಪರೀತ ಬೆಲೆ ಏರಿಕೆ ಮುಂತಾದ ಅಂಶಗಳು ಈ ಆಕ್ರೋಶದ ಹಿಂದಿರುವ ತಕ್ಷಣದ ಕಾರಣಗಳಾಗಿ ಕಂಡರೂ ಸಹ, ಅಸಮಾನತೆಗಳು ಈ ಸಾಮಾಜಿಕ ತಲ್ಲಣಗಳ ತಳದಲ್ಲಿವೆ ಎಂದಿದೆ.

*** ಆರ್ಥಿಕ ಅಸಮತೆಗಳಿಂದ ಉಂಟಾಗುವ ಸಮಸ್ಯೆಗಳನ್ನು ಆಕ್ಸ್‌ಫ್ಯಾಮ್ ವರದಿ ಹೀಗೆ ಗುರುತಿಸಿದೆ:**

ವೈಯುಕ್ತಿಕ ವರಮಾನಗಳು ತಳಕ್ಕೆ ಇಳಿಯುತ್ತಿರುವ ಮತ್ತು ಕಾರ್ಪೊರೇಟ್‌ಗಳಿಗೆ ಕೊಟ್ಟ ರಿಯಾಯ್ತಿಯಿಂದಾಗಿ ಸರ್ಕಾರಗಳ ತೆರಿಗೆ ಆದಾಯಗಳು ತಗ್ಗುತ್ತಿರುವ ಅಂಶಗಳಿಂದಾಗಿ, (ಅಂದರೆ, ಹಣದ ಕೊರತೆಯ ಕಾರಣದಿಂದಾಗಿ) ಸಾರ್ವಜನಿಕ ಸೇವೆಗಳು ತೀವ್ರವಾಗಿ ಕುಂಠಿತಗೊಂಡಿವೆ. ಅದನ್ನು ಸರಿಪಡಿಸುವ ಹೆಸರಿನಲ್ಲಿ ಆರೋಗ್ಯ ಮತ್ತು ಶಿಕ್ಷಣ ಸೇವೆಗಳು ಖಾಸಗಿಕರಣಗೊಂಡಿವೆ. ಸರ್ಕಾರಗಳ ವರಮಾನಗಳು ಇಳಿಯಲು ಇನ್ನೊಂದು ಮುಖ್ಯವಾದ ಕಾರಣವೆಂದರೆ, ಆರ್ಥಿಕ ವ್ಯವಹಾರಗಳ ಬಗ್ಗೆ ಕಾಪಾಡುವ ಗೌಪ್ಯತೆ. ಈ ಗೌಪ್ಯತೆಯನ್ನು ದುರ್ಬಳಕೆ ಮಾಡಿಕೊಂಡು ದೇಶ ದೇಶಗಳ ಶ್ರೀಮಂತರು, ತೆರಿಗೆಗಳ್ಳರು, ಲಂಚಕೋರರು. ವಂಚಕರು, ಮಾದಕ ವಸ್ತುಗಳ ವ್ಯಾಪಾರಿಗಳು, ಶಸ್ತ್ರಾಸ್ತ್ರಗಳ ದಲ್ಲಾಳಿಗಳು ಮುಂತಾದವರು ತಾವು ಅಕ್ರಮವಾಗಿ ಗಳಿಸಿದ ಹಣವನ್ನು ಕೆಲವು ತೆರಿಗೆಧಾಮಗಳಲ್ಲಿ ಬಚ್ಚಿಡುತ್ತಾರೆ. (ಒಂದು ಅಂದಾಜಿನ ಪ್ರಕಾರ, ಸುಮಾರು 7.6 ಟ್ರಿಲಿಯನ್ ಡಾಲರ್ ಹಣವನ್ನು ಈ ತೆರಿಗೆ ವಂಚಕರು ವಿಶ್ವದ ಸುಮಾರು 45 ತೆರಿಗೆ ಧಾಮಗಳಲ್ಲಿ ಅಡಗಿಸಿಟ್ಟಿದ್ದಾರೆ. ಈ ಹಣದ ಮೇಲೆ ತೆರಿಗೆ ಹಾಕಿದರೆ

ಪುಟ 14 ಕ್ಕೆ



2020ರ ಕುಬೇರರು ಮತ್ತು ಆರ್ಥಿಕ ಅಸಮಾನತೆಗಳು

ಪುಟ 13 ರಿಂದ

ಸರ್ಕಾರಗಳಿಗೆ ಸುಮಾರು 190 ಬಿಲಿಯನ್ ಡಾಲರ್ ವರಮಾನ ಲಭಿಸುತ್ತದೆ.)

*** ತೆರಿಗೆ ನೀತಿ, ಸಾಮಾಜಿಕ ಉತ್ತರದಾಯಿತ್ವ ಮತ್ತು ಜನರ ಹಕ್ಕುಗಳನ್ನು ಬಲಗೊಳಿಸುವ ಅಭಿಯಾನಗಳ ಬಗ್ಗೆ ಆಸಕ್ತಿ ವಹಿಸಿರುವ ಆಕ್ಸ್‌ಫ್ಯಾಮ್ ಸಂಸ್ಥೆಯು ತನ್ನ ವರದಿಯಲ್ಲಿ ಹೀಗೆ ಹೇಳುತ್ತದೆ:**

ಒಂದು ಜಾಗತಿಕ ವ್ಯಾಧಿಯಾಗಿ ಪರಿಣಮಿಸಿರುವ ಅಸಮಾನತೆಗಳ ಈ ಬಿಕ್ಕಟ್ಟನ್ನು ಸರ್ಕಾರಗಳು ಸೃಷ್ಟಿಸಿವೆ. ಅದನ್ನು ಸರ್ಕಾರಗಳು ಈಗ ಪರಿಹರಿಸಲೇ ಬೇಕು. ಈ ನಿಟ್ಟಿನಲ್ಲಿ, ಕಾರ್ಪೊರೇಟ್‌ಗಳು ಮತ್ತು ಶ್ರೀಮಂತ ವ್ಯಕ್ತಿಗಳು ತಮ್ಮ ಪಾಲಿನ ನ್ಯಾಯ ಸಮ್ಮತ ತೆರಿಗೆಯನ್ನು ತುಂಬುವಂತೆ ನೋಡಿಕೊಳ್ಳಲು ಮತ್ತು ಆ ಹಣವನ್ನು ಉತ್ತಮ ಮಟ್ಟದ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಮತ್ತು ಅಗತ್ಯ ಮೂಲ ಸೌಕರ್ಯಗಳನ್ನು ನಿರ್ಮಿಸಲು ಬಳಸಿಕೊಳ್ಳಲು ಸರ್ಕಾರಗಳು ಈಗ ಕಾರ್ಯಪ್ರವೃತ್ತರಾಗಲೇ ಬೇಕು.

ಈ ನಿಟ್ಟಿನಲ್ಲಿ, ಕುಡಿಯುವ ನೀರು, ನೈರ್ಮಲ್ಯ, ಮಕ್ಕಳು, ಮುದುಕರು ಮತ್ತು ಶಾರೀರಿಕ ದುರ್ಬಲರು ಮುಂತಾದವರಿಗೆ ಕನಿಷ್ಠ ಸೌಲಭ್ಯ ಒದಗಿಸುವುದು ಮತ್ತು ತೆರಿಗೆ ಕಾನೂನುಗಳಲ್ಲಿರುವ ಕಳ್ಳಗಿಂಡಿಗಳನ್ನು ಮುಚ್ಚಿ, ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹಾಕುವ ಮೂಲಕ ಕಡು ಬಡತನವನ್ನು ನಿವಾರಿಸಬಹುದು ಎಂದು ಆಕ್ಸ್‌ಫ್ಯಾಮ್ ಹೇಳುತ್ತದೆ.

ಸಂಪತ್ತಿನ ಅಸಮತೆಗಳ ಬಗ್ಗೆ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಹೀಗೆ ಉದ್ಧರಿಸಬಹುದು: ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ರೀತಿಯಲ್ಲಿ ಉತ್ಪತ್ತಿಯಾದ ಸಂಪತ್ತನ್ನು ಹಂಚುತ್ತಿರುವುದರಿಂದ ಬಡತನ ಹೆಚ್ಚುತ್ತಿದೆ. ಜಾಗತೀಕರಣಗೊಂಡ ಪ್ರಪಂಚದಲ್ಲಿ ನಾವಿಂದು ಬದುಕುತ್ತಿರುವುದರಿಂದ, ಬಡತನ ನಿವಾರಣೆಯನ್ನು ಒಂದು ಜಾಗತಿಕ ಸಮಸ್ಯೆಯಾಗಿ ನೋಡಬೇಕಾಗುತ್ತದೆ. ವಿಶ್ವ ಬಡತನವನ್ನು ತೊಡೆದು ಹಾಕಲು ತತ್ವಶಃ ಯಾರೊಬ್ಬರೂ ಏನನ್ನೂ ತ್ಯಾಗ ಮಾಡಬೇಕಿಲ್ಲ. ಬೇಕಿರುವ ಹಣವನ್ನು ಯಾರೊಬ್ಬರಿಂದಲೂ ಕಸಿಯಬೇಕಿಲ್ಲ. ಅದಕ್ಕೆ ತಡೆಯೊಡ್ಡುತ್ತಿರುವುದು ಬಂಡವಾಳಶಾಹಿಯೇ. "ನೀನು ಹಣವಂತನಾಗಿಲ್ಲದಿದ್ದರೆ ನಿನ್ನ ಅನ್ನ ನಿನ್ನ ಬೆವರಿನಿಂದಲೇ ಹುಟ್ಟಬೇಕು" ಎನ್ನುವುದು ಬಂಡವಾಳಶಾಹಿಯ ನೈತಿಕತೆ. ವರಮಾನಗಳ ಅಂತರ ಕಡಿಮೆಗೊಳಿಸುವುದು ಬಂಡವಾಳಶಾಹಿಗೆ ನಿಷಿದ್ಧ. ಐವತ್ತು ವರ್ಷಗಳ ಹಿಂದೆ ಬಂಡವಾಳಶಾಹಿ ಹೀಗಿರಲಿಲ್ಲ. ಆಗ, ಬ್ರ್ಯಾಂಟ್ ಆಯೋಗವು (ವಿಲ್ಲಿ ಬ್ರ್ಯಾಂಟ್ ಜರ್ಮನಿಯ ಅಧ್ಯಕ್ಷರಾಗಿದ್ದರು), ಮುಂದುವರೆದ ದೇಶಗಳು ತಮ್ಮ ಜಿಡಿಪಿಯ 1% ನೆರವನ್ನು ಹಿಂದುಳಿದ ದೇಶಗಳಿಗೆ ಕೊಡಬೇಕೆಂದು ಕರೆ ಕೊಟ್ಟಿತ್ತು.

ಅದೇನೇ ಇರಲಿ, ಆರ್ಥಿಕ ಅಸಮಾನತೆಗಳನ್ನು ಹಿಮ್ಮೆಟ್ಟಿಸಿದ ಎರಡು ಸ್ಪಷ್ಟ ಉದಾಹರಣೆಗಳು ಚರಿತ್ರೆ ಮತ್ತು ವರ್ತಮಾನದಲ್ಲಿ ಸಿಗುತ್ತವೆ. ಇವೆರಡೂ ಯಶ ಕಂಡಿವೆ.

ಚರಿತ್ರೆ: ಎರಡನೇ ಮಹಾ ಯುದ್ಧಾನಂತರದ ಅವಧಿಯಲ್ಲಿ, ಬಂಡವಾಳಶಾಹಿ ಅಮೇರಿಕಾ ಮತ್ತು ಯೂರೋಪಿನಲ್ಲಿ ಅಸಮಾನತೆಗಳನ್ನು ಗಣನೀಯವಾಗಿ ಕಡಿಮೆಮಾಡಲಾಗಿತ್ತು. ಜೊತೆಗೆ, ಆರ್ಥಿಕ ಅಭಿವೃದ್ಧಿಯೂ ಉನ್ನತವಾಗಿತ್ತು. ಈ ಅವಧಿಯನ್ನು ಬಂಡವಾಳಶಾಹಿಯ "ಸುವರ್ಣ ಅವಧಿ" ಎಂದೂ ಹೇಳಲಾಗಿದೆ. ಅದೀಗ ಗತ ವೈಭವ. ಆದರೆ, ಬಿಕ್ಕಟ್ಟುಗಳನ್ನು ಬಂಡವಾಳಶಾಹಿಯಿಂದ ಬೇರ್ಪಡಿಸಲಾಗದು. ಹಾಗಾಗಿ, ಬಿಕ್ಕಟ್ಟಿಗೆ ಒಳಗಾಗಿದ್ದ ಬಂಡವಾಳಶಾಹಿಯನ್ನು ಮೇಲೆತ್ತಲು 1980ರ ದಶಕದಲ್ಲಿ ಅಮೇರಿಕಾದ ರೊನಾಲ್ಡ್ ರೀಗನ್ ಮತ್ತು ಬ್ರಿಟನ್ನಿನ ಮಾರ್ಗರೇಟ್ ಥ್ಯಾಚರ್, ನವ ಉದಾರ ನೀತಿಗಳನ್ನು (ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ) ಆರಂಭಿಸಿದರು. ಪರಿಣಾಮವಾಗಿ, ಆರ್ಥಿಕ ಅಸಮಾನತೆಗಳು ತೀವ್ರಗೊಂಡಿವೆ.

ವರ್ತಮಾನ: ಬಹು ಜನರ ಹಿತ ಕಾಯುವ ರಾಜಕೀಯದ ಮೂಲಕ, ಕಳೆದ ಹತ್ತು ವರ್ಷಗಳಲ್ಲಿ, ಶ್ರೀಮಂತರ ಮೇಲೆ ಅಧಿಕ ತೆರಿಗೆ, ಜನರಿಗೆ ಸಾಮಾಜಿಕ ಭದ್ರತೆ, ಕೆಲಸಕ್ಕೆ ತಕ್ಕ ಸಂಬಳ ಹಾಗೂ ಗೌರವ ಮತ್ತು ಶಿಕ್ಷಣ ಆರೋಗ್ಯ ಮುಂತಾದ ಸೇವೆಗಳನ್ನು ಪುಕ್ಕಟೆಯಾಗಿ ಒದಗಿಸುವ ಮೂಲಕ ಲ್ಯಾಟಿನ್ ಅಮೇರಿಕಾದ ವೆನಿಜುವೇಲಾ, ಬ್ರೆಜಿಲ್, ಚಿಲಿ, ಅರ್ಜೆಂಟೈನಾ, ಈಕ್ವೆಡಾರ್, ಉರುಗ್ವೆ, ಪರಗ್ವೆ, ನಿಕರಾಗ್ವ, ಬೊಲಿವಿಯಾ ಮತ್ತು ಎಲ್ ಸಾಲ್ವೆಡಾರ್ ದೇಶಗಳಲ್ಲಿ ಈಗ ಅಸಮಾನತೆಗಳು ಗಣನೀಯವಾಗಿ ಕಡಿಮೆಯಾಗಿವೆ.

ಸಂಪತ್ತಿನ ಮರು ಹಂಚಿಕೆ ಎಂದರೆ, ಉಳ್ಳವರ ಜೇಬಿನಿಂದ ಹಣ ತೆಗೆದು ಇಲ್ಲದವರಿಗೆ ಕೊಡುವುದಲ್ಲ. ಮರು ಹಂಚಿಕೆಯ ಅರ್ಥವೇಂದರೆ, ದುಡಿಮೆಗೆ ತಕ್ಕ ಕೂಲಿ ಕೊಡುವುದು ಮತ್ತು ಅದರ ಜೊತೆಗೆ, ಬೆಲೆ ಏರಿಕೆ ತಡೆ, ಲಂಚಕೋರರ ಮತ್ತು ತೆರಿಗೆಗಳ್ಳರ ಮೇಲೆ ಕಠಿಣ ಕ್ರಮ, ಎಲ್ಲರಿಗೂ ಉಚಿತ ಆರೋಗ್ಯ ರಕ್ಷಣೆ, ಉಚಿತ ಶಿಕ್ಷಣ, ಸಾರ್ವಜನಿಕ ಪಡಿತರ, ಸಾಮಾಜಿಕ



ಭದ್ರತೆ ಮತ್ತು ಶ್ರೀಮಂತರ ಮೇಲೆ ವರಮಾನ ತೆರಿಗೆ ಹೆಚ್ಚಿಸಿ ಬಡವರ ಮೇಲಿನ ಪರೋಕ್ಷ ತೆರಿಗೆ(ಜಿಎಸ್‌ಟಿ ಮುಂತಾದವು) ಇಳಿಸುವುದು, ಕಾರ್ಮಿಕರ ಹಕ್ಕುಗಳ ರಕ್ಷಣೆ ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಒದಗಿಸುವ ಮೂಲಕ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡಬಹುದು.

ಇದು ತುರ್ತು ಪರಿಹಾರ. ಶಾಶ್ವತ ಪರಿಹಾರವೇಂದರೆ, ಬಂಡವಾಳಶಾಹಿ ಪದ್ಧತಿಯನ್ನು ಬದಲಿಸುವುದು.

ಅಸಮಾನತೆಯ ಅಂಕಿ ಅಂಶಗಳು ಮುಖಕ್ಕೆ ರಾಚುವಂತಿವೆ. ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ, ವಿಶ್ವದ ಶ್ರೀಮಂತರು ಕಬಳಿಸಿರುವ ಸಂಪತ್ತನ್ನು ಮರು ಹಂಚಿಕೆ ಮಾಡಬೇಕು ಎಂಬುದು ಯೂನಿಸೆಫ್ ಮತ್ತು ಅನೇಕ ಪ್ರಗತಿಪರ ಅರ್ಥಶಾಸ್ತ್ರಜ್ಞರ ಆಗ್ರಹ. ಈ ಆಗ್ರಹದ ಹಿಂದಿರುವ ಭಾವನೆಗಳು ಮೆಚ್ಚುವಂತಿದ್ದರೂ ಸಹ, ಈ ಅಸಮತೆಗಳನ್ನು ಹುಟ್ಟಿಹಾಕುತ್ತಿರುವ ಮತ್ತು ಅವು ಕಣ್ಣಿಗೆ ಕುಕ್ಕುವಷ್ಟು ತೀವ್ರವಾಗಿರುವಂತೆ ಮಾಡಿರುವ ವ್ಯವಸ್ಥೆಯನ್ನು ಕಿತ್ತೊಗೆಯದೇ ಸಂಪತ್ತಿನ ಮರು ಹಂಚಿಕೆ ಸಾಧ್ಯವೆಂದು ನಂಬುವುದು ಪೆದ್ದುತನವಾಗುತ್ತದೆ ಎನ್ನುತ್ತಾರೆ, ಪ್ರೊ. ಪ್ರಭಾತ್ ಪೊಟ್ನಾಯಕ್.

ಅಖಿಲ ಭಾರತ ಕೇಂದ್ರದ ರಚನೆ

ಪುಟ 11 ರಿಂದ

ಸನ್ನಿವೇಶದ ಬಗ್ಗೆ ಕಮ್ಯುನಿಸ್ಟ್ ಪಕ್ಷದ ನಿಲುವುಗಳು ಮತ್ತು ನೀತಿಗಳ ಬಗ್ಗೆ ವಿವರಿಸುವ ದಸ್ತಾವೇಜುಗಳು; ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಎಡಪಂಥೀಯ ರಾಜಕಾರಣಿಗಳ ಜತೆ ಸಂಬಂಧಗಳನ್ನು ಬೆಸೆಯುವುದು ಇತ್ಯಾದಿ.

ಒಂದು ಕೇಂದ್ರೀಕೃತ, ಶಿಸ್ತುಬದ್ಧ, ಐಕ್ಯ, ಸಾಮೂಹಿಕ, ಭೂಗತ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಅವಶ್ಯಕತೆಯ ಬಗ್ಗೆ ಸಿಪಿಐನ ಹಂಗಾಮಿ ಕೇಂದ್ರ ಸಮಿತಿಯು ಅಂಗೀಕರಿಸಿದ ರಾಜಕೀಯ ಪ್ರತಿಪಾದನೆಯ ಕರಡು ಹೆಚ್ಚು ಒತ್ತು ನೀಡಿತ್ತು. ಭಾರತದ ಕ್ರಾಂತಿಯ ಚಾರಿತ್ರಿಕ ಕಾರ್ಯಭಾರವನ್ನು ಮುಂದಕ್ಕೆ ಕೊಂಡೊಯ್ಯುವ ಸಲುವಾಗಿ ಆಗಿನ್ನೂ ಕಟ್ಟಲ್ಪಡುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಒಡನಾಡಿಗಳ ಜತೆ ಸೇರಬೇಕೆಂದು ಕಾರ್ಮಿಕ ವರ್ಗದ ಚಳುವಳಿಗೆ ತಮ್ಮನ್ನು ಮುಡುಪಾಗಿಟ್ಟಿರುವ ಮುಂದುವರಿದ ಕಾರ್ಮಿಕರು ಮತ್ತು ಕ್ರಾಂತಿಕಾರಿಗಳಿಗೆ ಪಕ್ಷ ಕರೆ ನೀಡಿತು. ಈ ಕರಡು ಪ್ರತಿಪಾದನೆಯ ಅನುಮೋದನೆಯೊಂದಿಗೆ, ಸಿಪಿಐ ವಿಧ್ಯುಕ್ತವಾಗಿ ಕಾಮಿಂಟರ್ನ್‌ಗೆ ಸಂಯೋಜಿತವಾಯಿತು. ಇದರೊಂದಿಗೆ, ಭಾರತದಲ್ಲಿನ ಕಮ್ಯುನಿಸ್ಟ್ ಚಳುವಳಿಯು ಹೊಸದೊಂದು ಘಟ್ಟವನ್ನು ತಲುಪಿತು.

ಈ ನಾಯಕತ್ವವನ್ನು ಮತ್ತು ಕಲ್ಕತ್ತಾ ಸಭೆಯ ತೀರ್ಮಾನವನ್ನು ಕಾಮಿಂಟರ್ನ್ ಮಾನ್ಯಮಾಡಿತು; ಎರಡು ಪ್ರಮುಖ ದಸ್ತಾವೇಜುಗಳನ್ನು – ಹಂಗಾಮಿ ನಿಬಂಧನೆಗಳ ಕರಡು ಮತ್ತು ರಾಜಕೀಯ ಪ್ರತಿಪಾದನೆಯ ಕರಡನ್ನು – ತನ್ನ ಮುಖವಾಣಿ ಇಂಪ್ರೆಕರ್ ನಲ್ಲಿ 1934 ರಲ್ಲಿ ಪ್ರಕಟಿಸಿತು. ಕಮ್ಯುನಿಸ್ಟ್ ಅಂತರಾಷ್ಟ್ರೀಯವು ಸೂಚಿಸಿದ ಚೌಕಟ್ಟಿನೊಳಗಡೆ ಮತ್ತು ಭಾರತೀಯ ರಾಜಕೀಯ ಸನ್ನಿವೇಶದಲ್ಲಿನ ಬದಲಾವಣೆಯನ್ನು ಅಂದಾಜು ಮಾಡಿ ಕಾರ್ಯ ನಿರ್ವಹಿಸಲು ನೂತನವಾಗಿ ಆಯ್ಕೆಯಾದ ಕೇಂದ್ರ ನಾಯಕತ್ವವು ಪ್ರಾರಂಭಿಸಿತು; ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸನ್ನಿವೇಶಗಳು ತ್ವರಿತಗತಿಯಲ್ಲಿ ಬದಲಾಗುತ್ತಿದ್ದರಿಂದ ಈ ಕಾರ್ಯಭಾರಗಳು ಸುಲಭವಾಗಿರಲಿಲ್ಲ.

ಈ ಚುನಾಯಿತ ಕೇಂದ್ರ ನಾಯಕತ್ವವು(ಕೆಲವು ವ್ಯಕ್ತಿಗಳ ಬದಲಾವಣೆಯೊಂದಿಗೆ) 1964ರಲ್ಲಿ ಪಕ್ಷ ವಿಭಜನೆಯಾಗುವವರೆಗೂ ಮುಂದುವರಿಯಿತು. ಹಿಂದೆ ಮಾಡಿದ ವ್ಯರ್ಥ ಪ್ರಯತ್ನಗಳ ಹೊರತಾಗಿಯೂ 1933–34ರಲ್ಲಿ ಪಕ್ಷದ ಕೇಂದ್ರದ ರಚನೆಯು ಯಶಸ್ವಿಯಾಯಿತು ಎಂದು ಒಂದು ವಾಕ್ಯದಲ್ಲಿ ಹೇಳಬಹುದು. ಒಂದು ದಶಕಗಳ ಕಾಲ ದಮನಕಾರಿ ದಾಳಿಗಳನ್ನು ಅನುಭವಿಸಿದ ಭಾರತ ಕಮ್ಯುನಿಸ್ಟ್ ಪಕ್ಷವು 1934ರ ಹೊತ್ತಿಗೆ ಒಂದು ಕ್ರಿಯಾಶೀಲ ಅಸ್ತಿತ್ವ ಪಡೆಯಲು ಸಾಧ್ಯವಾಯಿತು. ಕಮ್ಯುನಿಸ್ಟ್ ಚಟುವಟಿಕೆಗಳು ತೀವ್ರವಾಗಿರುವುದರ ದಿಕ್ಸೂಚಿಯಾಗಿ, 1934ರಲ್ಲಿ ಮುಷ್ಕರಗಳ ಮತ್ತು ಮಾನವ ದಿನಗಳ ನಷ್ಟಗಳ ಸಂಖ್ಯೆಯು ಹೆಚ್ಚಾಗಿರುವುದನ್ನು ಕಾಣಬಹುದು; 1932–33 ಎರಡು ವರ್ಷಗಳಲ್ಲಿನ ಸಂಖ್ಯೆಗೆ ಹೋಲಿಸಿದರೆ ಆ ಸಂಖ್ಯೆಯು ದುಪ್ಪಟ್ಟಾಗಿತ್ತು. ಬೆಳೆಯುತ್ತಿದ್ದ ಜನಾಕ್ರೋಶಗಳನ್ನೂ ಅದು ಬಿಂಬಿಸುತ್ತಿತ್ತು. ಸಾಮ್ರಾಜ್ಯಶಾಹೀ ಆಳ್ವಿಕೆಗೆ ಮತ್ತು ಬಂಡವಾಳಶಾಹಿ ನಾಯಕತ್ವಕ್ಕೆ ಈ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟ ರಂಗವು ಒಡ್ಡುತ್ತಿದ್ದ ಸವಾಲುಗಳನ್ನು ಕಂಡ ಆಳರಸರು ಅದನ್ನು ಮೊಳಕೆಯಲ್ಲೇ ಚಿವುಟಬೇಕು ಎಂಬ ನಿರ್ಧಾರಕ್ಕೆ ಬಂದರು. ಆದಕಾರಣದಿಂದಲೇ, ಕಾಂಗ್ರೆಸ್ಸಿನ ಮೇಲಿನ ನಿಷೇಧವನ್ನು ತೆಗೆದ ಇದೇ ಸಾಮ್ರಾಜ್ಯಶಾಹಿ ಬ್ರಿಟಿಷ್ ಸರ್ಕಾರವು ಕಮ್ಯುನಿಸ್ಟರ ಮೇಲೆ ನಿಷೇಧ ಹೇರಲು ಮುಂದಾಯಿತು.



ದಾವೋಸ್ ನಲ್ಲಿ ಯಾರು ಏನೆಂದರು ?

"ಅಮೆರಿಕ ಈಗ ಆರ್ಥಿಕ ಉತ್ಕರ್ಷದ ತುತ್ತ ತುದಿಯಲ್ಲಿದೆ. ಟೆಸ್ಲಾ (ವಿದ್ಯುತ್ ಕಾರು ತಯಾರಕ ಕಂಪನಿ) ಶೇರು ಬೆಲೆ ಇಮ್ಮಡಿಯಾಗಿದೆ... ಅಮೇರಿಕ 5 ಟ್ರಿಲಿಯನ್ ಮರಗಳನ್ನು ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದೆ."

– ಡೊನಾಲ್ಡ್ ಟ್ರಂಪ್

"ಅಂಕೆ–ಸಂಖ್ಯೆಗಳ ಗೋಲ್ ಮಾಲ್ ಮಾಡಿ 'ನೆಟ್ ಜಿರೋ' ಸೂಸುವಿಕೆ ಅಥವಾ 'ಇಂಗಾಲ ತಟಸ್ಥತೆ' ತೋರಿಸಿ ಎಂದು ನಾವು ಹೇಳುತ್ತಿಲ್ಲ. ನಿಮ್ಮ ಸೂಸುವಿಕೆಯನ್ನು ಆಫ್ರಿಕಾದಲ್ಲೋ ಬೇರೆಲ್ಲೋ ದುಡ್ಡು ಕೊಟ್ಟು ಮರಗಳನ್ನು ನೆಟ್ಟು 'ಸರಿದೂಗಿಸಿ' ಮತ್ತು ಅದೇ ಸಮಯದಲ್ಲಿ ಅಮೆಜಾನ್ ಕಾಡುಗಳನ್ನು ಇನ್ನೂ ವೇಗವಾಗಿ ನಾಶ ಮಾಡಿ ಅಂತ ನಾವು ಹೇಳುತ್ತಿಲ್ಲ .. ಎಲ್ಲಾ ಪರಿಹಾರ ಮಾರ್ಗಗಳು ಇಂದಿನ ಸಮಾಜದಲ್ಲಿ ಇಲ್ಲ ಎಂದು ನಮಗೆ ಗೊತ್ತಿದೆ. ಸೂಸುವಿಕೆಯನ್ನು ತೀವ್ರವಾಗಿ ಕಡಿತಗೊಳಿಸಲು ಹೊಸ ತಂತ್ರಜ್ಞಾನದ ಪರಿಹಾರಗಳಿಗೆ ಕಾಯುವಷ್ಟು ಸಮಯ ನಮ್ಮ ಬಳಿ ಇಲ್ಲ.. ..ಕೂಡಲೇ ಇಂಗಾಲದ ಇಂಧನಗಳನ್ನು ನಿಲ್ಲಿಸಿ ಅದಕ್ಕೆ ಬದಲಿ ಹುಡುಕಬೇಕು.. ..ಇಲ್ಲವಾದರೆ 1.5 ಡಿಗ್ರಿಗೆ ತಾಪಮಾನ ಏರಿಕೆಗೆ ಮಿತಗೊಳಿಸುವ ಗುರಿಯನ್ನು ಪ್ರಯತ್ನ ಸಹ ಮಾಡದೆ ಏಕೆ ಬಿಟ್ಟು ಕೊಟ್ಟಿರಿ ಎಂದು ನಿಮ್ಮ ಮಕ್ಕಳಿಗೆ ಉತ್ತರಿಸಬೇಕು. ನೀವು ಬಿಟ್ಟುಕೊಡಬಹುದು. ಆದರೆ ನನ್ನ ಪೀಳಿಗೆ ಹೋರಾಟವಿಲ್ಲದೆ ಈ ಗುರಿಯನ್ನು ಬಿಟ್ಟುಕೊಡಲು ಸಿದ್ಧವಿಲ್ಲ ಎಂದು ಹೇಳಲು ನಾನು ಇಲ್ಲಿಗೆ ಬಂದಿದ್ದೇನೆ."

– ಗ್ರೆಟ್ಟಾ ಥನ್ಬರ್ಗ್

ಗ್ರೆಟ್ಟಾ ಕಾಲೇಜಿಗೆ ಹೋಗಿ ಅರ್ಥಶಾಸ್ತ್ರ ಕಲಿತ ಮೇಲೆ ನಾವು ಏನು ಮಾಡಬೇಕೆಂದು ಹೇಳಲಿ'
– ಸ್ಟೀವನ್ ನುಶಿನ್, ಅಮೆರಿಕದ ಕೇಂದ್ರ ಬ್ಯಾಂಕಿನ ಅಧ್ಯಕ್ಷ
ಪರಿಸರ ಬಿಕ್ಕಟ್ಟು 9/11 (ವಿಶ್ವ ವಾಣಿಜ್ಯ ಕಟ್ಟಡವನ್ನು ಉರುಳಿಸಿದ ಚಾರಿತ್ರಿಕ ದುರ್ಘಟನೆ) ಯಂತೆ

– ಅಮೆರಿಕದ ಮಾಜಿ ಉಪಾಧ್ಯಕ್ಷ ಅಲ್ ಗೋರ್

ದಾವೋಸ್ 2020
'ಹವಾಮಾನ ವೈಪರೀತ್ಯ' ಪ್ರಧಾನ ವಿಷಯ, ಆದರೆ ಪರಿಣಾಮ ಸೊನ್ನೆ!



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜನವರಿ 21 ರಿಂದ 24 ರ ವರೆಗೆ, ಸ್ವಿಟ್ಜರ್ಲೆಂಡ್ ನ ದಾವೋಸ್ ನಲ್ಲಿ, "ವಿಶ್ವ ಆರ್ಥಿಕ ವೇದಿಕೆ" (ಡಬ್ಲ್ಯೂ.ಇ.ಎಫ್) ನ 50 ನೇ ವಾರ್ಷಿಕ ಸಭೆ ಸಮಾವೇಶ ಗೊಂಡಿದೆ. ರಾಜಕೀಯ, ಉದ್ಯಮ, ಸಮಾಜ ವಿಜ್ಞಾನ, ಪರಿಸರ ಹೀಗೆ ಅನೇಕ ಕ್ಷೇತ್ರ ಗಳಲ್ಲಿ ಕಾರ್ಯಪ್ರವೃತ್ತರಾಗಿರುವ ಸುಮಾರು 3000 ಕ್ಕೂ ಹೆಚ್ಚು ಜಾಗತಿಕ ನಾಯಕರುಗಳು ಆಯಾ ರಾಷ್ಟ್ರಗಳ ಪ್ರತಿನಿಧಿಗಳಾಗಿ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. "ಸಮಗ್ರ ಸುಸ್ಥಿರ ಜಗತ್ತಿನ ನಿರ್ಮಾಣಕ್ಕೆ ಪಾಲುದಾರರಾಗಿ" ಎಂಬುದು ಈ ಬಾರಿಯ ಅಧಿಕೃತ ಘೋಷಣೆಯಾಗಿತ್ತು.

ಡಬ್ಲ್ಯೂ ಇಎಫ್ ನ ಸಭೆಗಳು 1971 ರಿಂದ ನಿರಂತರವಾಗಿ ದಾವೋಸ್ ನಲ್ಲಿಯೇ ಜರುಗುತ್ತಿವೆ. ಒಂದು ಬಾರಿ ಮಾತ್ರ, 9/11 ಘಟನೆ ನಡೆದ ನಂತರ, ಭದ್ರತೆಯ ಕಾರಣದಿಂದ, ಸ್ವಿಟ್ಜರ್ಲೆಂಡ್ ನ ಆಚೆ ಅಂದರೆ, ಅಮೆರಿಕದ ನ್ಯೂಯಾರ್ಕ್ ಸಿಟಿಯಲ್ಲಿ ನಡೆದಿತ್ತು. ಇಲ್ಲಿಯವರೆಗೂ ನಡೆದ ಸಭೆಗಳಲ್ಲಿ ವೇದಿಕೆಯ ಹೆಸರೇ ಸೂಚಿಸುವಂತೆ, ಶ್ರೀಮಂತ ರಾಷ್ಟ್ರಗಳ ಆರ್ಥಿಕತೆ, ಅವುಗಳ ಉದ್ಯಮ ರಂಗ, ವಿಜ್ಞಾನ–ತಂತ್ರಜ್ಞಾನಕ್ಕೆ ಮಾತ್ರ ಹೆಚ್ಚು ಸೀಮಿತವಾಗಿ, ಆಯಾ ನಾಯಕರು ನಡೆಸುತ್ತಿದ್ದ ಚರ್ಚಾಕೂಟವೆಂದೇ ಬಣ್ಣಿಸಲಾಗಿತ್ತು.

ಆದರೆ, ಡಬ್ಲ್ಯೂ.ಇ.ಎಫ್ ನ ಈ 50 ನೇ ವಾರ್ಷಿಕ ಸಭೆಯಲ್ಲಿ ಪ್ರಮುಖವಾಗಿ ರಾಜಕೀಯ ನಾಯಕರು ಗಳೊಂದಿಗೆ, ತಂತ್ರಜ್ಞಾನಿಗಳು, ವಿಜ್ಞಾನಿಗಳು, ಮತ್ತು ಸಾಮಾಜಿಕ ವಿಜ್ಞಾನಿಗಳು, ಎಲ್ಲದಕ್ಕಿಂತ ಮಿಗಿಲಾಗಿ ಪರಿಸರ ಕಾರ್ಯಕರ್ತರು ಗಳು ಪಾಲ್ಗೊಂಡಿರುವುದು ವಿಶೇಷವಾಗಿತ್ತು.

ಪಾಲ್ಗೊಂಡವರಲ್ಲಿ ಕೆಲವು ವಿಶಿಷ್ಟ ಪ್ರಮುಖರನ್ನು ಹೆಸರಿಸುವುದಾದರೆ, ಟೈಮ್ಸ್ ಪತ್ರಿಕೆಯಿಂದ ವರ್ಷದ ವ್ಯಕ್ತಿಯೆಂದು ನಾಮಾಂಕಿತ ಗೊಂಡಿರುವ, ಸ್ವೀಡನ್ ನ ಪರಿಸರ ಹೋರಾಟಗಾರ್ತಿ ಗ್ರೆಟ್ಟಾ ಥನ್ಬರ್ಗ್, ಮತ್ತು ಭಾರತದಿಂದ ವನ್ಯಜೀವಿ ಅಧ್ಯಯನ ಕೇಂದ್ರದ ನಿರ್ದೇಶಕಿ ಹಾಗೂ ಸಂರಕ್ಷಣಾ ವಿಜ್ಞಾನಿಯಾದ ಕೀರ್ತಿ ಕಾರಂತ್, ಇವರಿಬ್ಬರೂ ಭಾಗವಹಿಸಿದ್ದಾರೆ. ಜೊತೆಗೆ ಅನೇಕ ಉದ್ಯಮ ಪತಿಗಳು ಮತ್ತು ದೀಪಿಕಾ ಪಡುಕೋಣೆ ಕೂಡಾ ಭಾಗವಹಿಸಿದ್ದಾರೆ.

ರಾಜಕೀಯ ನಾಯಕರಲ್ಲಿ ಪ್ರಮುಖವಾಗಿ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬ್ರಿಟನ್ ನ ಪ್ರಿನ್ಸ್ ಚಾರ್ಲ್ಸ್, ಜರ್ಮನಿಯ ಚಾನ್ಸಲರ್ ಮಾರ್ಕೆಲ್ ಏಂಜಲಾ, ಆಫ್ಘಾನಿಸ್ತಾನದ ಅಧ್ಯಕ್ಷ ಅಶ್ರಫ್ ಘನಿ, ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್, ಭಾರತದಿಂದ ರೈಲ್ವೆ ಸಚಿವ ಪೀಯೂಶ್ ಗೋಯಲ್, ಪಂಜಾಬ್ ಮುಖ್ಯ ಮಂತ್ರಿ ಅಮರಿಂದರ್ ಸಿಂಗ್, ಮಧ್ಯಪ್ರದೇಶದ ಮುಖ್ಯ ಮಂತ್ರಿ ಕಮಲ್ ನಾಥ್ ಮತ್ತು ಕರ್ನಾಟಕದ ಮುಖ್ಯ ಮಂತ್ರಿ ಬಿಎಸ್ ಯಡಿಯೂರಪ್ಪ ಪಾಲ್ಗೊಂಡಿದ್ದಾರೆ.

130 ಉನ್ನತ ದರ್ಜೆಯ ಅತಿಥಿಗಳು, ಇದರೊಂದಿಗೆ, 5 ಅತಿ ಉನ್ನತ ರಾಯಲ್ಸ್, ಹಾಗೆಯೇ, 22 ದೇಶಗಳ ರಾಷ್ಟ್ರಾಧ್ಯಕ್ಷರು, ಮತ್ತು 23 ಪ್ರಧಾನ ಮಂತ್ರಿಗಳು ಭಾಗವಹಿಸಿದ್ದಾರೆ. ಇವರೆಲ್ಲರಿಗೂ ಸುಮಾರು 5000 ಸ್ವಿಸ್ ಪೋಲಿಸರು ಮತ್ತು ಮಿಲಿಟರಿ ಭದ್ರತಾ ಸಿಬ್ಬಂದಿಗಳ ದಟ್ಟವಾದ ಕಾವಲು ನೀಡಲಾಗಿದೆ. ಮಾತ್ರವಲ್ಲದೇ, ಅಧ್ಯಕ್ಷ ಟ್ರಂಪ್ ಅಮೆರಿಕದಿಂದ ತನ್ನದೇ ಆದ, ವಿಶೇಷ ಭದ್ರತಾ ಪಡೆಯ ಕಾವಲಿನೊಂದಿಗೆ ಮಿಲಿಟರಿ ಕಾರ್ಗೋ ಏರ್ಲೈನ್ಸ್ ನ ಒಂದು ಖಾಸಗೀ ಹೆಲಿಕಾಪ್ಟರ್ ನಲ್ಲಿ ದಾವೋಸ್ ಗೆ ಬಂದಿಳಿದಿದ್ದಾರೆ. ಇದರೊಂದಿಗೆ 300 ವಿಶೇಷ ಸ್ವಿಸ್ ಭದ್ರತಾ ಮಿಲಿಟರಿ ಪಡೆಯನ್ನು ಇವರಿಗೆ ಒದಗಿಸಲಾಗಿತ್ತು. ಟ್ರಂಪ್ ನ ಕಾವಲು ಭದ್ರತೆಗಾಗಿ ಒಟ್ಟು 3.4 ಮಿಲಿಯನ್ ಅಮೆರಿಕನ್ ಡಾಲರ್‌ಗಳನ್ನು ಅಂದರೆ,ತೆರಿಗೆದಾರರ ಹಣವನ್ನು ವ್ಯಯ ಮಾಡಲಾಗಿದೆ. ಇದಕ್ಕೆ ಕಾರಣ ಬೇರೆ ಹೇಳಬೇಕಿಲ್ಲ. ಇತ್ತೀಚಿಗೆ ಇರಾನಿನ ಮಿಲಟರಿ ಮುಖ್ಯಸ್ಥ ರಾದ ಖಾಸ್ಸಿಂ ಸೋಲೆಮಾನಿಯನ್ನು, ಟ್ರಂಪ್ ನ ಆಜ್ಞೆಯಂತೆ ಡ್ರೋಣ್ ಮೂಲಕ ಕೊಂದ್ದಿದ್ದು.

ದಾವೋಸ್ 2020 ರ ಡಬ್ಲ್ಯೂ ಇಎಫ್ ಸಭೆ ಹಿಂದಿನ ಸಭೆಗಳಂತಲ್ಲ,. ಕೇವಲ ಬರೆ ಮಾತಿಗೆ ಸೀಮಿತವಾಗಿರುವುದಿಲ್ಲ. ಕೆಲಸ ಮಾಡುವತ್ತ ಹೆಚ್ಚಿನ ಒತ್ತು ಕೊಡುತ್ತದೆ ಎಂದು 81 ವಯಸ್ಸಿನ ಡಬ್ಲ್ಯೂ ಇಎಫ್ ವೇದಿಕೆಯ ಸಂಸ್ಥಾಪಕರು ಹಾಗೂ ಇಂದಿನ ಕಾರ್ಯ ನಿರ್ವಾಹಕ ಅಧ್ಯಕ್ಷ ರಾದ ಕ್ಲಾವ್ಸ್ ಶ್ವಾಬ್ ರವರು ಪ್ರಸ್ತಾಪಿಸಿದ್ದಾರೆ. ಜಗತ್ತು ಇಂದು ಎದುರಿಸುತ್ತಿರುವ ಆರ್ಥಿಕ ಅಸಮಾನತೆ ಹಾಗೂ ಲಾಭದ ಕ್ರೋಡಿಕರಣ ಒಂದು ಕಡೆಯಾದರೆ, ಸಾಮ್ರಾಜ್ಯ ಶಾಹಿ ಶಕ್ತಿ ತನ್ನ ರಾಜಕೀಯ ಏಕತ್ವ ಧ್ರುವಿಕರಣ ಸ್ಥಾಪನೆಗೆ ಯುದ್ಧಕೋರ ನೀತಿ ಅನುಸರಿಸುತ್ತಿರುವುದು ಮತ್ತೊಂದೆಡೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಇಂತಹ ಸಭೆಗಳು ಏನಾದರೂ ಮಾಡಲು ಸಾಧ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ.

ಇಷ್ಟೆಲ್ಲಾ ಇದ್ದಾಗ್ಯೂ, ಜಗತ್ತು ಎದುರಿಸುತ್ತಿರುವ ಹವಾಮಾನ ವೈಪರೀತ್ಯಗಳು, ಈ ಬಾರಿಯ ಸಭೆಯಲ್ಲಿ ಪ್ರಮುಖ ವಿಷಯವಾಗಿರುವುದು ಶ್ರೀಮಂತ ರಾಷ್ಟ್ರಗಳಿಗೆ ತಲ್ಲಣ ಉಂಟು ಮಾಡಿದೆ. ಸ್ವೀಡನ್ನಿನ ಪ್ರಭಾವಿ ಯುವತಿ, ಪರಿಸರ ಹೋರಾಟ ಗಾರ್ತಿ ಗ್ರೆಟ್ಟಾ ಥನ್‌ಬರ್ಗ್, 4 ವರ್ಷಗಳ ಹಿಂದೆ ಒಬ್ಬಂಟಿಯಾಗಿ, ಆರಂಭಿಸಿದ 'ಹವಾಮಾನ ವೈಪರೀತ್ಯ' ಚಳುವಳಿ ಇದೀಗ ಜಗತ್ತಿನ ಇನ್ನಿತರೆ ರಾಷ್ಟ್ರಗಳು ಎಚ್ಚೆತ್ತು ಕೊಳ್ಳುವಂತೆ ಮಾಡುವಲ್ಲಿ ಯಶಸ್ಸು ಕಂಡಿದೆ. ಕಳೆದ ವರ್ಷ ಈ ಹೋರಾಟಗಾರ್ತಿ ವಿಶ್ವಸಂಸ್ಥೆ ಆಯೋಜಿಸಿದ್ದ, ಸಿಒಪಿ 25, ರ ಶೃಂಗಸಭೆ ಯಲ್ಲಿ ಭಾಗವಹಿಸಿ, ಟ್ರಂಪ್ ಗೆ ಎಚ್ಚರಿಕೆ ನೀಡಿದ್ದಳು. ಹವಾಮಾನಕ್ಕೆ ಇಂಗಾಲದ ಡೈಆಕ್ಸೈಡ್ ಅನ್ನು ಹೆಚ್ಚು ಉಗುಳುವ ಶ್ರೀಮಂತ ದೇಶಗಳಿಗೆ, ಪ್ಯಾರಿಸ್ ಒಪ್ಪಂದ ರೂಪಿಸಿರುವ ನೀತಿ ನಿಯಮಗಳನ್ನು ಪಾಲಿಸಬೇಕು ಎಂಬ ಅವರ ಕೂಗಿಗೆ, ಕ್ಲಾವ್ಸ್ ಶ್ವಾಬ್ ರು ಬೆಂಬಲಿಸಿರುವುದು, ಅಮೆರಿಕ ಮತ್ತು ಅದರ ಶ್ರೀಮಂತ ಮಿತ್ರರಾಷ್ಟ್ರಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಅಮೆರಿಕ ಪ್ಯಾರಿಸ್ ಒಪ್ಪಂದದಿಂದ ಹೊರ ಬಂದು, ಎಲ್ಲಾ ನಿಯಮಗಳನ್ನು ಉಲಂಘಿಸಿದ ರಾಷ್ಟ್ರವಾಗಿ, ಭೂಮಿಯ ಶಾಖ ಹೆಚ್ಚಲು ಮಾರಕವಾದ ದೇಶವಾಗಿ ಪರಿಣಮಿಸಿ, ಗ್ರೆಟ್ಟಾ ಥನ್ ಬರ್ಗ್ ರ ಕೆಂಗಣ್ಣಿಗೆ ತುತ್ತಾಗಿದೆ.

ಕಳೆದ ಬಾರಿ ಅಮೆರಿಕ ಸರ್ಕಾರದ ' ಶಟ್ ಡೌನ್ಸ್ ' ನಿಂದಾಗಿ ಟ್ರಂಪ್, ದಾವೋಸ್ ನ ಸಭೆಗೆ ಗೈರು ಹಾಜರಾಗಿದ್ದರು. ಈ ಬಾರಿ ಮುಖಾ ಮುಖಿಯಾಗಿದ್ದರು. ಗ್ರೆಟ್ಟಾ ಥನ್ ಬರ್ಗ್ ರವರು, ಇಂಗಾಲದ ಡೈಆಕ್ಸೈಡ್ ಅನ್ನು ಹೊರ ಚೆಲ್ಲುವ ಕಲ್ಲಿದ್ದಲು ಬಳಕೆಯನ್ನು ನಿಲ್ಲಿಸಬೇಕೆಂದು ಕರೆ ನೀಡಿದ್ದಾರೆ. ಅಮೆರಿಕವು ಪರಿಸರ ರಕ್ಷಣಾ ಕ್ರಮಗಳನ್ನು ರದ್ದು ಮಾಡಿ, ಪ್ಯಾರಿಸ್ ಒಪ್ಪಂದ ಗಳನ್ನು ಉಲಂಘಿಸಿದೆ. ಹವಾಮಾನ ಬದಲಾವಣೆಗಳ ಅಪಾಯಗಳ ಸೂಚನೆಗಳನ್ನು ನೀಡಿರುವ ವಿಜ್ಞಾನಿಗಳ ಕಾಳಜಿಗಳನ್ನು ಅಮೆರಿಕಾ ಅಲ್ಲಗಳೆಯುತ್ತಿದೆ. ಗ್ರೆಟ್ಟಾ ಥನ್ ಬರ್ಗ್ ರವರು ಈ ಬಾರಿಯ ಸಭೆಯಲ್ಲಿ ಸಹ ಆಕರ್ಷಕ ವ್ಯಕ್ತಿಯಾಗಿದ್ದು ಶ್ರೀಮಂತ ದೇಶಗಳ ನಾಯಕರನ್ನು ತರಾಟೆಗೆ ತೆಗೆದುಕೊಂಡರು. ಟ್ರಂಪ್ 'ಹವಾಮಾನ ವೈಪರೀತ್ಯ;ದ ಸತ್ಯವನ್ನೇ ನಿರಾಕರಿಸುವ ತಮ್ಮ ನಿಲುವನ್ನು ಮುಂದುವರೆಸಿದ್ದಾರೆ. ಇದು 'ಹವಾಮಾನ ನಿರಾಶಾವಾದಿ'ಗಳ ಭ್ರಮೆ. ಯಾವ ತುರ್ತು ಕ್ರಮದ ಅಗತ್ಯವಿಲ್ಲ ಎಂದು ಮತ್ತೆ ಹೇಳಿದ್ದಾರೆ.

ಈ ಬಾರಿಯ ಸಭೆಯಲ್ಲಿ ವಿಶೇಷವಾಗಿ, ನಾಲ್ಕು ಪ್ರಮುಖ ವಿಷಯಗಳು ಚರ್ಚೆಯಾದವು.

1. ಜಗತ್ತಿನಾದ್ಯಂತ ಪರಿಸರದ ಮೇಲೆ ಉಷ್ಣಾಂಶ ಭಾರಿ ಪ್ರಮಾಣದಲ್ಲಿ ಏರಿಕೆ, ,ನಿಯಂತ್ರಣಕ್ಕೆ ಸಿಗದ ಕಾಡ್ಗಿಚ್ಚುಗಳು, ಅದು ಅಮೆಜಾನ್ ಕಾಡು ಭಗ್ನದಿಂದಿಡಿದು ಇತ್ತೀಚಿನ ಆಸ್ಟ್ರೇಲಿಯಾ ಕ್ಕೆ ಹಬ್ಬಿದ ಕಾಡು ವಿನಾಶ, ಶಾಖದ ಉಷ್ಣಾಂಶ ಶೇ.1.5 ಸೆ. ದಾಟುತ್ತಿರುವುದು. ಮಂಜುಗಡ್ಡೆ ಪ್ರದೇಶಗಳ ಕರಗುವಿಕೆ, ಇದರ ದೀರ್ಘಾವಧಿಯ ಸಮಸ್ಯೆಗಳು, ಜಾಗತಿಕ ಆರ್ಥಿಕತೆಯ ಮೇಲೆ ಇದರ ದುಷ್ಪರಿಣಾಮಗಳು ಇವೆಲ್ಲವೂ ಚರ್ಚಿತವಾದವು. ಹವಾಮಾನ ಬದಲಾವಣೆ ಪ್ರಮುಖ ಚರ್ಚೆಯ ವಿಷಯವಾಗಿತ್ತು.
2. ರಾಜಕೀಯ ಯಜಮಾನಿಕೆ ಮರು ಸ್ಥಾಪನೆಗಾಗಿ ಅಮೆರಿಕಾ ವಿಶ್ವಸಂಸ್ಥೆಯ ಎಲ್ಲಾ ನೀತಿ ನಿಯಮಗಳನ್ನು ಉಲಂಘಿಸುತ್ತಿರುವುದು. ಆರ್ಥಿಕ ಅಸಮಾನತೆ, ಸಾಮಾಜಿಕ ಸಮಸ್ಯೆಗಳು, ಇದರೊಂದಿಗೆ ಪ್ರಮುಖ ವಾಗಿ, ವ್ಯಾಪಾರ, ವಹಿವಾಟುಗಳು, ಗ್ರಾಹಕ ಬಳಕೆಯ ಮಾದರಿಗಳಲ್ಲಿ ಉಂಟಾಗಿರುವ ಬದಲಾವಣೆಗಳು, ಕ್ಷೀಣಿಸುತ್ತಿರುವ ಕೊಂಡುಕೊಳ್ಳುವ ಸಾಮರ್ಥ್ಯ, ಇದಕ್ಕೆ ಪರಿಹಾರೋಪಾಯಗಳಾಗಿ, ಹೆಚ್ಚು ಸುಸ್ಥಿರ ಮತ್ತು ಎಲ್ಲರನ್ನೂ ಒಳಗೊಳ್ಳುವ ವ್ಯಾಪಾರ ಮಾರ್ಗ ಗಳನ್ನು ಮತ್ತು ಉದ್ಯಮಗಳನ್ನು ರೂಪಿಸುವ ಹೊಸ ಪರಿಯ ಸೃಷ್ಟಿ ಹೇಗೆ?
3. ನಾಲ್ಕನೇ ಕೈಗಾರಿಕಾ ಕ್ರಾಂತಿಯನ್ನು ವಿಜ್ಞಾನ ತಂತ್ರಜ್ಞಾನವೇ ಮುನ್ನಡೆಸುವತ್ತ ಸಾಗುತ್ತಿದೆ. ಇದು ಸಮಾಜಕ್ಕೆ ಲಾಭದಾಯಕವಾಗಬಲ್ಲುದೇ? ಆದಾಗ್ಯೂ, ಕೈಗಾರಿಕಾ ಮತ್ತು ಸಮಾಜಕ್ಕೆ ಅಪಾಯಕಾರಿಯಾಗದ ರೀತಿಯಲ್ಲಿ ಈ ವಿಜ್ಞಾನ ತಂತ್ರಜ್ಞಾನ ದ ಅಭಿವೃದ್ಧಿಯನ್ನು ಹೇಗೆ ನಿಭಾಯಿಸಬೇಕು ?
4. ಎಲ್ಲಾ ವರ್ಗದ ಜನರಿಗೂ ಮತ್ತು ಸಮುದಾಯಗಳಿಗೂ, ಬೆಳವಣಿಗೆಯ ಎಲ್ಲಾ ಸೌಲಭ್ಯ ಮತ್ತು ಸೇವೆಗಳ ಲಭ್ಯತೆ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಹೊಸ ರೀತಿಯ ಉದ್ಯೋಗಗಳು ಮತ್ತು ಉದ್ಯಮ ಶೀಲತೆ ಹೊಂದಿರುವ ಉದ್ಯೋಗಿಗಳನ್ನು ಸೃಷ್ಟಿಸಬೇಕಾಗಿದೆ. ಈ ದಿಸೆಯಲ್ಲಿ ಶಿಕ್ಷಣ ವ್ಯವಸ್ಥೆ ಯನ್ನು, ಆ ಮೂಲಕ ಜನ ಸಮುದಾಯವನ್ನು, ಈ ಹೊಸ ವ್ಯವಸ್ಥೆಗೆ ಹೊಂದಿ ಕೊಳ್ಳುವಂತೆ ಹಾಗೂ ತಂತ್ರಜ್ಞಾನ ಗಳ ಬಳಕೆಗೆ ಹೆಚ್ಚು ಹೆಚ್ಚು ಒತ್ತು ನೀಡಬೇಕು ಎಂಬುದರ ಬಗ್ಗೆ ಮತ್ತಷ್ಟು ಗಮನಹರಿಸಬೇಕು.

ಬರಿಯ ವಿಶ್ವದ ಜನತೆಯ ಕಣ್ಣಿಗೆ ಮಣ್ಣೆರಚಲು ಚರ್ಚೆಯ ನಾಟಕಗಳು ನಡೆದವು. ಆದರೆ ಒಟ್ಟು ಪರಿಣಾಮಕಾರಿಯಾದ ಯಾವುದೇ ನಿರ್ಣಯಗಳು ಬರಲಿಲ್ಲ. ಬಹುಶಃ ಮಾಧ್ಯಮಗಳಿಂದ ದೂರ ಮುಚ್ಚಿದ ಕೋಣೆಗಳಲ್ಲಿ ಗಣ್ಯ ರಾಜಕಾರಣಿಗಳು, ಉದ್ಯಮಿಗಳು, ಆಳುವ ವರ್ಗದ ಇತರ ಪ್ರತಿನಿಧಿಗಳ ನಡುವೆ ಚರ್ಚೆಯಾದದ್ದು – ತಮ್ಮ ಶ್ರೀಮಂತಿಕೆ ಉಳಿಸಿಕೊಳ್ಳುವುದು ಹೆಚ್ಚಿಸಿಕೊಳ್ಳುವುದು ಹೇಗೆ, ಸಿಡಿದೇಳುತ್ತಿರುವ ಜನತೆಯನ್ನು ನಿಯಂತಿಸುವುದು ಹೇಗೆ, ಇವೆರಡಕ್ಕೂ ಉಪಯೋಗಿಯಾಗುವ ತಂತ್ರಜ್ಞಾನಗಳು ಯಾವುವು – ಈ ವಿಷಯಗಳ ಬಗ್ಗೆ.

ದಾವೋಸ್ ಸಭೆಯ ಮೇಲೆ ಪ್ರಜ್ಞಾವಂತ ಜನತೆಗೆ ಹಿಂದೆಯೂ ಯಾವುದೇ ವಿಶ್ವಾಸವಿರಲಿಲ್ಲ. ಈ ಬಾರಿಯೂ ಇರಲಿಲ್ಲ. ಆದ್ದರಿಂದಲೇ ಸಭೆ ನಡೆಯುವ ದಿನಗಳಲ್ಲೂ ಮೊದಲೂ ದಾವೋಸ್ ಸುತ್ತಮುತ್ತ ಮತ್ತು ಜಗತ್ತಿನ ಹಲವು ಕಡೆ ತೀವ್ರ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ದಾವೋಸ್ ಸಭೆಯ ಗೋಸುಂಬೆತನವನ್ನು ಅವು ಬಯಲಿಗೆಳೆದಿವೆ.



JANASHAKTHI KANNADA VARA PATRIKE JANUARY 27-February 2, 2020 Price: Rs. 10/- Date of Publication: 24 JANUARY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಸಿಐಟಿಯು 16 ನೇ ಅಖಿಲ ಭಾರತ ಸಮ್ಮೇಳನ





ಧ್ವಜಾರೋಹಣವನ್ನು ಅಖಿಲ ಭಾರತ ಅಧ್ಯಕ್ಷರಾದ ಕಾಂ. ಹೇಮಲತಾ ರವರು ನೇರವೇರಿಸಿದರು





ಕರ್ನಾಟಕದ ಪ್ರತಿನಿಧಿಗಳು

ಕಲಬುರ್ಗಿಯಲ್ಲಿ ಹೋರಾಟ ನಿರತ ರೈತ ಮುಖಂಡರ ಬಂದನ

ತೊಗರಿ ಬೆಳೆಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಬೆಂಬಲ ಬೆಲೆಗೆ ಖರೀದಿಸಲು ರಾಜ್ಯದಾದ್ಯಂತ ಖರೀದಿ ಕೇಂದ್ರ ತೆರೆಯಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ಜಂಟಿಯಾಗಿ ಕಳೆದ ಎಂಟು ದಿನಗಳಿಂದ ಶಾಂತಿಯುತವಾಗಿ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಮುಖಂಡರನ್ನು ಬಲವಂತವಾಗಿ ಬಂದಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಮುಖಂಡರಾದ ಕಾಂ. ಮಾರುತಿ ಮಾನಪಡೆ, ಕಾಂ. ಮವಬಲಾಮುಲ್ಲಾ, ಕಾಂ. ಶರಣ ಬಸಪ್ಪ ಮಮಶೆಟ್ಟಿ, ಕಾಂ. ಅಶೋಕ ಮ್ಯಾಗೇರಿ, ಕಾಂ. ಸುಧಾಮಧನ್ನಿ, ಕಾಂ. ಪಾಂಡುರಂಗ ಮಾವಿನಕರ್ ಮುಂತಾದವರು ಬಂದನಕ್ಕೊಳಗಾಗಿದ್ದಾರೆ.





ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಮುಖಂಡರನ್ನು ಬಲವಂತವಾಗಿ ಬಂದಿಸುತ್ತಿರುವುದು



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**